ಪದ್ಯಸಾರದ ನೋಟ್ಸು

ಕನ್ನಡಭಾರತ (ದ್ರೌಪದೀ ಸ್ವಯಂವರ)

ಸೂಚನೆ :—ನಿರ್ಜರರಾಯನಂದ-ಇಂದ್ರನ ಮಗನಾದ ಅರ್ಜುನನು, ರಾಯಸಭೆ-ದೊರೆಗಳ ಸಮಾಜವು, ನಗಲು-ಅಪಹಾಸ್ಯಮಾಡಲು, ಐದಿ-ಯಂತ್ರ ಸಮೀಪಕ್ಕೆ ಬಂದು, ಯಂತ್ರದ-ಮತ್ಸ್ಯಯಂತ್ರದ, ದಾಯವನು-ಪಣವನ್ನು, ನೆರೆ-ಬಹಳವಾಗಿ, ಗೆಲಿದು-ಜಯಿಸಿ, ಕಾದಿ-ಯುದ್ಧಮಾಡಿ, ಸಕಲರಿಪುನೃಪರ-ಸಮಸ್ತ ಶತ್ರುರಾಜರನ್ನೂ, ಗೆಲಿದನು-ಜಯಿಸಿದನು.

ಟಿಪ್ಪಣಿ॥ ಬ್ರಾಹ್ಮಣನು ಸ್ವಸಾಮರ್ಥ್ಯವನ್ನು ತಿಳಿಯದೆ ಮತ್ಸ್ಯ ಯಂತ್ರವನ್ನು ಜಯಿಸಲು ಹೊರಟನೆಂದು ದೊರೆಗಳು ನಕ್ಕರು ಎಂದು ಭಾವ.

ಹಿಂದಣಕಥಾ ಸಂದರ್ಭ॥ ಭರತವಂಶದಲ್ಲಿ ಶಂತನು ಚಕ್ರವರ್ತಿಯು ಮೊದಲನೆಯ ಹೆಂಡತಿಯಾದ ಗಂಗೆಯಲ್ಲಿ ಭೀಷ್ಮನು ಹುಟ್ಟಿದನು. ಎರಡನೆಯ ಹೆಂಡತಿಯಾದ ಸತ್ಯವತಿಯಲ್ಲಿ ವಿಚಿತ್ರವೀರ್ಯ, ಚಿತ್ರಾಂಗದ ಎಂಬಿಬ್ಬರು ಜನಿಸಿದರು. ವಿಚಿತ್ರವೀರ್ಯ ಚಿತ್ರಾಂಗದರೆಂಬ ಈ ಸಹೋದರರಾದ ರಾಜರು ಅಪುತ್ರರಾಗಿದ್ದು ಯುದ್ಧದಲ್ಲಿ ಮಡಿಯಲು, ಭೀಷ್ಮನು ತನ್ನ ಪ್ರತಿಜ್ಞೆಯ ಪ್ರಕಾರ ರಾಜ್ಯವನ್ನಾಳದಿರಲಾಗಿ, ಸತ್ಯವತಿಯು ಮೊದಲು ತನ್ನಲ್ಲಿ ಹುಟ್ಟಿ ತಪೋನಿಷ್ಠರಾದ ತೆರಳಿದ ವೇದವ್ಯಾಸರನ್ನು ಕುರಿತು, ಭರತವಂಶವನ್ನುದ್ಧರಿಸಬೇಕೆಂದು ಪ್ರಾರ್ಥಿಸಿದಳು. ಆಗ ವ್ಯಾಸರ ಅನುಗ್ರಹದಿಂದ ಚಿತ್ರಾಂಗದನ ಹೆಂಡತಿಯಾದ ಅಂಬೆಯಲ್ಲಿ ಕುರುಡನಾದ ಧೃತರಾಷ್ಟ್ರನೂ,ವಿಚಿತ್ರವೀರ್ಯನ ಹೆಂಡತಿಯಾದ ಅಂಬಾಲಿಕೆಯಲ್ಲಿ ಪಾಂಡುರಾಜನೂ, ಒಬ್ಬ ದಾಸಿಯಲ್ಲಿ ಮಹಾಗುಣಶಾಲಿಯಾದ ವಿದುರನೂ ಹುಟ್ಟಿದರು. ಧೃತರಾಷ್ಟ್ರರಾಜನ ಮಕ್ಕಳು ದುರ್ಯೋಧನ ಮುಂತಾದ ನೂರುಜನ ಕೌರವರು. ಪಾಂಡುರಾಜನ ಮಕ್ಕಳು ಧರ್ಮರಾಯ, ಭೀಮ, ಅರ್ಜುನ,

ನಕುಲ, ಸಹದೇವರೆಂಬ ಐವರು ಪಾಂಡವರು. ಪಾಂಡವರ ಬಾಲ್ಯದಲ್ಲಿಯೇ ಪಾಂಡುರಾಜನು ಲೋಕಾಂತರವನ್ನೈದಲು ಧೃತರಾಷ್ಟ್ರರಾಜನು ಆ ಪಾಂಡವರನ್ನೂ, ಅವರ ತಾಯಿಯಾದ ಕುಂತಿಯನ್ನೂ ತನ್ನ ಮನೆಯಲ್ಲೇ ಪೋಷಣೆ ಮಾಡುತ್ತ, ಕೌರವರಿಗೂ ಪಾಂಡವರಿಗೂ ಕೃಪಾಚಾರ್ಯರಿಂದ ಸಕಲ ವಿದ್ಯಾಭ್ಯಾಸವನ್ನೂ ಮಾಡಿಸಿ ದ್ರೋಣಾಚಾರ್ಯರಿಂದ ಗರುಡಿಯಲ್ಲಿ ಧನುರ್ವಿದ್ಯಾಭ್ಯಾಸವನ್ನೂ ಮಾಡಿಸಿದನು. ಹೀಗಿರಲು ದುರ್ಯೋಧನನು ದಾಯಾದ ಮತ್ಸರದಿಂದ ಪಾಂಡವರನ್ನು ನಿಗ್ರಹಿಸಬೇಕೆಂದು ವಾರಣಾವತಪುರದಲ್ಲಿ ಗುಟ್ಟಾಗಿ ಅರಗಿನಮನೆಯನ್ನು ಕಟ್ಟಿಸಿ ತಂದೆಯಿಂದ ಪಾಂಡವರಿಗೆ ಆ ಅರಗಿನಮನೆಯಲ್ಲಿ ವಾಸವಾಗಿರುವಂತೆ ಹೇಳಿ ಕಳುಹಿಸಲು, ಪಾಂಡವರು ವಾರಣಾವತಪುರಕ್ಕೆ ಬಂದು ಅಲ್ಲಿ ದುರ್ಯೋಧನನ ಮಂತ್ರಿಯಾದ ಪುರೋಚನನು ತೋರಿಸಿದ ಅರಗಿನಮನೆಯನ್ನು ಪ್ರವೇಶಿಸಿದರು.

ವಿದುರ ಭೃತ್ಯನಿಂದ ಗುಟ್ಟು ತಿಳಿದು ಪಾಂಡವರು ಅರಗಿನಮನೆಯ ವಿಪತ್ತನ್ನು ತಪ್ಪಿಸಿಕೊಂಡು ಹೋಗಿ ಅರಣ್ಯಕ್ಕೆ ಬಂದರು. ಅಲ್ಲಿ ಭೀಮನು ಹಿಡಿಂಬಾಸುರನನ್ನು ಸಂಹರಿಸಿದನು. ಅನಂತರ ಪಾಂಡವರು ಬ್ರಾಹ್ಮಣವೇಷದಿಂದ ಏಕಚಕ್ರನಗರದಲ್ಲಿ ವಾಸಿಸುತ್ತಿರಲು ಅಲ್ಲಿ ಭೀಮನು ಬಕಾಸುರನನ್ನು ವಧಿಸಿದನು. ಬಳಿಕ ಪಾಂಡವರು ದ್ರುಪದರಾಜನ ಮಗಳಾದ ದ್ರೌಪದಿಗೆ ಸ್ವಯಂವರವೆಂದು ಕೇಳಿ ಅಲ್ಲಿಗೆ ಹೊರಟ ಬ್ರಾಹ್ಮಣರೊಡನೆ ತಾವೂ ಬ್ರಾಹ್ಮಣವೇಷದಿಂದಲೇ ಹೊರಟು, ಪಾಂಚಾಲನಗರಕ್ಕೆ ಬಂದು ಸ್ವಯಂವರಮಂಟಪವನ್ನು ಪ್ರವೇಶಿಸಿದರು. ಅಲ್ಲಿ ದ್ರೌಪದಿಯನ್ನು ವರಿಸಬೇಕೆಂದು ಜರಾಸಂಧ, ಶಿಶುಪಾಲ, ದುರ್ಯೋಧನ ಮೊದಲಾದ ಅನೇಕ ರಾಜರು ನೆರೆದಿದ್ದರು. ಆಗ ದ್ರುಪದರಾಜನ ಮಗನಾದ ಧೃಷ್ಟದ್ಯುಮ್ನನು ಎಲೈ ರಾಜೇಂದ್ರರೇ ! ಯಾವ ದೊರೆಯು ಈ ಈಶ್ವರಧನುಸ್ಸಿನಲ್ಲಿ ಬಾಣವನ್ನು ಸೇರಿಸಿ, ಅಂತರಿಕ್ಷದಲ್ಲಿ ಕಟ್ಟಿರುವ ಈ ಮತ್ಸ್ಯಯಂತ್ರದಲ್ಲಿರುವ ಲೋಹದ ಮೀನನ್ನು ಬಾಣಗಳಿಂದ ಹೊಡೆದು ಭೇದಿಸಿ ಕೆಳಗೆ ಅದರ ನೆರಳಿನಲ್ಲಿ ಕೆಡಹುವನೋ, ಆತನು ದ್ರೌಪದಿಯನ್ನು ವರಿಸಬಹುದು ಎಂದನು. ಆಗ ಜರಾಸಂಧನು ಮೊದಲಾದ ಅರಸುಗಳೆಲ್ಲಾ ಆ ಧನುಸ್ಸನ್ನು ಎತ್ತಲಾರದೆ ಭಂಗವನ್ನು ಹೊಂದಿ ನಿರಾಶರಾಗಿ ಕುಳಿತರು.

ರಾಜರಲ್ಲಿ ಯಾರೂ ಮತ್ಸ್ಯಯಂತ್ರವನ್ನು ಭೇದಿಸಲಾರದೆ ಹೋಗಲು, ಆಗ ದ್ರುಪದರಾಜನು ಬ್ರಾಹ್ಮಣಸಮೂಹದಲ್ಲಿ ಯಾರಾದರೂ ಶೂರರಿದ್ದರೆ ಯಂತ್ರವನ್ನು ಜಯಿಸಲು ಪ್ರಯತ್ನಿಸಬಹುದು ; ಎಂದು ಸಾರುವಂತೆ ದೂತರಿಗೆ ಆಜ್ಞಾಪಿಸಿದನು ಆಗ.

196. ಜನಮೇಜಯಧರಿತ್ರೀಪಾಲ-ಜನಮೇಜಯರಾಯನೇ ! ಕೇಳು ; + ಸೇವಕರು, ಪಾಂಚಾಲಿಯು-ದ್ರೌಪದಿಯು, ಮನೋಥಶಾಲೆಯಲಿ-ಸ್ವಯಂವರಮಂಟಪದಲ್ಲಿ, ಮಹೀಸುರರ-ಬ್ರಾಹ್ಮಣರ, ಸಭೆಯಲಿ-ಸಮಾಜದಲ್ಲಿ, ಸಾರಿದರು ಅಲ್ಲೈ-ಮುಂದೆ ಹೇಳುವಂತೆ ಪ್ರಚಾರಮಾಡಿದರಲ್ಲವೇ ? +ದೂತರು, ಡಂಗುರವ-ಪ್ರಕಟನ ಭೇರಿಯನ್ನು, ಹೊಯ್ದು-ಬಾಜಿಸಿ, ವಿಪ್ರಾಳಿಯಲಿ-ಬ್ರಾಹ್ಮಣರ ಸಮೂಹದಲ್ಲಿ, ಭುಜಬಲವುಳ್ಳವರು - ಬಾಹುಶಕ್ತಿಯುಳ್ಳಂತಹವರು, ಏಳಿ-ಯಂತ್ರಜಯಿಸಲು ಏಳಿರಿ, ಬಿಲುವಿಡಿದು-ಈಶ್ವರಧನುಸ್ಸನ್ನು ಎತ್ತಿ, ಯಂತ್ರದಿ-ಮತ್ಸ್ಯಯಂತ್ರದಲ್ಲಿ, ಕೋಲುಗಳ-ಬಾಣಗಳನ್ನು, ಕೇವಣಿಪುದು - ಪ್ರಯೋಗಿಸತಕ್ಕದು ; ಎಂದರು-ಎಂದು ಹೇಳಿದರು.

ಟಿಪ್ಪಣಿ॥ ದ್ರೌಪದೀ ಸ್ವಯಂವರವು ಭಾರತ ಗ್ರಂಥದಲ್ಲಿ ಉಕ್ತವಾಗಿದೆ. ಭಾರತದ ಕಥೆಯನ್ನು ವೈಶಂಪಾಯನ ಋಷಿಯು ಜನಮೇಜಯರಾಯನಿಗೆ ಹೇಳಿದನು.

ಸಂದರ್ಭ॥ ಅಭಿಮನ್ಯುವಿನ ಮಗನಾದ ಪರೀಕ್ಷಿದ್ರಾಜನು ಒಂದು ದಿನ ಬೇಟೆಯಾಡಬೇಕೆಂದು ಅರಣ್ಯಕ್ಕೆ ಹೋಗಿ, ಅಲ್ಲಿ ಸಮಾಧಿಯೋಗದಲ್ಲಿದ್ದ ಶಮೀಕ ಋಷಿಯನ್ನು ಕಂಡು, ವಿನೋದಕ್ಕಾಗಿ ಆ ಮುನಿಯ ಕೊರಳಿಗೆ ಒಂದು ಸತ್ತಹಾವನ್ನು ಸುತ್ತಿಹೋದನು. ಬಳಿಕ ಆ ಮುನಿಯ ಪುತ್ರನಾದ ಶೃಂಗಿಋಷಿಯು ಇದನ್ನು ನೋಡಿ ಕೋಪದಿಂದ, ತನ್ನ ತಂದೆಗೆ ಈ ಅಪಮಾನ ಮಾಡಿದವನು ಸರ್ಪದಷ್ಟನಾಗಿ ಸಾಯಲಿ, ಎಂದು ಶಾಪವನ್ನಿತ್ತನು. ಅದರಂತೆ ಪರೀಕ್ಷಿದ್ರಾಜನು ಲೋಕಾಂತರವನ್ನೈದಲು, ಆತನ ಪುತ್ರನಾದ ಜನಮೇಜಯರಾಯನು ತನ್ನ ತಂದೆಯನ್ನು ಕೊಂದ ಕ್ರೂರಜಾತಿಯಾದ ಸರ್ಪದ ವಂಶವನ್ನೇ ಉತ್ಪಾಟನೆ ಮಾಡಬೇಕೆಂದು ಸರ್ಪಯಾಗವನ್ನು ಮಾಡಿದನು. ಆ ಪಾಪದಿಂದ ಜನಮೇ

ಜಯರಾಯನಿಗೆ ತೊನ್ನು ರೋಗವು ಬಂದಿತು. ಅದು ಚಿಕಿತ್ಸೆಗೆ ಬಗ್ಗಲಿಲ್ಲ. ಆತನು ವೇದವ್ಯಾಸರೊಡನೆ ಹೇಳಿಕೊಳ್ಳಲು, ಆತನು ಇದು ಸರ್ಪಹತ್ಯಾ ದೋಷ. ನೀನು ಪಾಂಡವರ ಚರಿತ್ರೆಯನ್ನು ಕೇಳಿದರೆ ಈ ರೋಗವು ನಿವೃತ್ತಿಯಾಗುವುದೆಂದು ಹೇಳಿ ಜನಮೇಜಯರಾಯರಿಗೆ ತಾನು ಮಾಡಿದ್ದ ಮಹಾಭಾರತದ ಕಥೆಯನ್ನು ಬೋಧಿಸುವುದಕ್ಕಾಗಿ, ತನ್ನ ಶಿಷ್ಯನಾದ ವೈಶಂಪಾಯನ ಮುನಿಯನ್ನು ನೇಮಿಸಿ ಕಳುಹಿಸಿದನು. ಬಳಿಕ ವೈಶಂ ಪಾಯನನು ಅಲ್ಲಿಗೆ ಬಂದು ಜನಮೇಜಯನಿಗೆ ವ್ಯಾಸರ ಮಹಾಭಾರತ ವನ್ನು ಹೇಳಿದನು.

197. ಎಂದು-ಮೇಲೆ ಹೇಳಿದಂತೆ, ಸಾರಿದ-ಪ್ರಚಾರಮಾಡಿದ, ದನಿಯಂ-ಶಬ್ದವನ್ನು, ಆ ದ್ವಿಜವೃಂದಂ- ಆ ಬ್ರಾಹ್ಮಣರ ಸಮೂಹವು, ಆಲಿಸಿ-ಕೇಳಿ, ನಮಗೆ, ಇದು-ಈ, ಅರವಿಂದವದನೆಯು - ಕಮಲದಂತೆ ಮುಖವುಳ್ಳ ದ್ರೌಪದಿಯು, ತೊಡಕು-ಗೋಜು, (ಗೊಡವೆಯು), ಏಕೆ- ಏತಕ್ಕೆ? ತೆಗೆ-ಬಿಡು, ನಾವು-ಬ್ರಾಹ್ಮಣರಾದ ನಾವುಗಳು, ಆರು-ಯಾರು? ಧನು-ಈಶ್ವರನ ಬಿಲ್ಲು, ಆರು-ಯಾರು ? ನಾವು, ಬಂದ-ಸಿಕ್ಕಿದ,ದಕ್ಷಿಣೆ- ದಕ್ಷಿಣಾದ್ರವ್ಯವು, ಮೃಷ್ಟ-ಶುದ್ಧವಾದ ಅನ್ನದ, ಭೋಜನದಿಂದ - ಊಟ ಇವುಗಳಿಂದ ತುಷ್ಟರು - ಸಂತೋಷಪಡತಕ್ಕವರು; ನಮಗೆ, ಇದರಿಂದ- ಮತ್ಸ್ಯಯಂತ್ರವನ್ನು ಜಯಿಸದೆ ಹೋದುದರಿಂದ, ಬಹ-ಬರುವ, (೧) ದುಷ್ಕೀರ್ತಿ-ಅಪಯಶಸ್ಸು, ಬರಲಿ-ಪ್ರಾಪ್ತವಾಗಲಿ,(ಇದರಿಂದ ನಮಗೇನೂ ಅಪಮಾನವಿಲ್ಲವೆಂದು ಭಾವ)+ಎಂದು, ಬುಧವ್ರಾತ-ಬ್ರಾಹ್ಮಣರ ಸಮೂ ಹವು, ಎಂದುದು-ಹೇಳಿತು.

ಭಾವಾರ್ಥ॥-ನಾವಾರು ಧನುವಾರು-ನಮ್ಮ ಕೈಯಲ್ಲಿ ಧನುಸ್ಸೆತ್ತು ವುದಕ್ಕೆ ಆದೀತೇ ?

ವಿ॥ (೧) ದುಷ್ಟವಾದ ಕೀರ್ತಿ (ಪ್ರಾದಿ. ಕ.)

198. ನಾವು, ವಚನಶೂರರು-ವಿದ್ಯೆಯಲ್ಲಿ ಸಮರ್ಥರು, (ಮಾ ತಾಡುವುದರಲ್ಲಿ ಗಟ್ಟಿಗರೆಂದು ಮತ್ತೊಂದು ಅಭಿಪ್ರಾಯ); + ಧನುಸ್ಸನ್ನು ಎತ್ತುವುದಕ್ಕೆ. ಪಾರ್ಥಿವನಿಚಯವೇ-ಕ್ಷತ್ರಿಯರ ಸಮೂಹವೇ ? ಅಚಲ ಧನು = ಅಚಲ-ಅಳ್ಳಾಡದೆ ಇರುವ, (ಅಥವಾ ಬೆಟ್ಟದಂತಿರುವ), ಧನು-

ಈಶ್ವರನ ಬಿಲ್ಲ, (೧) ಭುಜಶೂರರು-ಬಾಹುಬಲಶಾಲಿಗಳಾದ, (೨) ಅನಿಬರಂ-ಅಷ್ಟುಜನಗಳನ್ನೂ, ಭಂಗಿಸಿತು - ಅಪಮಾನಪಡಿಸಿತು, ನಮಗೆ-ಬ್ರಾಹ್ಮಣರಾದ ನಮಗೆ, ಈ ವಿದ್ಯೆ-ಈ ಧನುರ್ವಿದ್ಯೆಯು, ವೈದಿಕವೇ-ವೇದೋಕ್ತವಾಗಿದೆಯೇ ? ಇದು-ಈ ಧನುಸ್ಸೆತ್ತುವ ವಿದ್ಯೆಯು, ನಮಗೆ, ಉಚಿತಂ ಅಲ್ಲ-ಯೋಗ್ಯವಾದುದಲ್ಲ ನಮ್ಮ, ಸಾಹಸ ರಚನೆಯನು-ಸಾಮರ್ಥ್ಯದ ವೈಖರಿಯನ್ನು, ನೋಡುವೊಡೆ-ನೋಡಬೇಕಾದರೆ, ಪಂಡಿತನಿಚಯಂ-ವಿದ್ವಾಂಸರ ಸಮೂಹವು, ಇದಿರಲಿ-ಎದುರಿನಲ್ಲಿ, ನಿಲಲಿ-ನಿಂತುಕೊಳ್ಳಲಿ, ಅಲ್ಲಿ-ಆ ಸಂದರ್ಭದಲ್ಲಿ, ವಿಸ್ಮಯುವ-ಆಶ್ಚರ್ಯವನ್ನು, ತೋರುವೆವು ತೋರ್ಪಡಿಸುವೆವು.

ತಾತ್ಪರ್ಯ॥ ನಾವು ವಚನಶೂರರೇ (ಶಾಸ್ತ್ರಪಂಕ್ತಿಯಲ್ಲಿ ಗಟ್ಟಿಗರೇ) [ಮಾತನ್ನಾಡುವದರಲ್ಲಿ ಗಟ್ಟಿಗರೇ] ಹೊರತು ಭುಜಶೂರರಲ್ಲ. ಈ ಧನುಸ್ಸೆತ್ತಲು ಸುಗ್ಗಿ ಜರಾಸಂಧಾದಿ ಕ್ಷತ್ರಿಯರು ಕೂಡ ಭಂಗಪಟ್ಟರು. ನಮಗೆ ಧನುರ್ವಿದ್ಯೆಯು ವೇದೋಕ್ತವಾದುದಲ್ಲ. ಇದು ನಮಗೆ ಯೋಗ್ಯವಲ್ಲ. ನಮ್ಮ ಸಾಮರ್ಥ್ಯವನ್ನು ನೋಡಬೇಕಾದರೆ ವಿದ್ವಾಂಸರು ಇದಿರಿಗೆ ನಿಂತು ಶಾಸ್ತ್ರಪ್ರಸಂಗವನ್ನು ಮಾಡಿದರೆ ಆಗ ಆಶ್ಚರ್ಯಕರವಾಗಿ ಮಾತಾಡುವೆವು.

ವಿ॥ (೧) ಭುಜದಲ್ಲಿ ಶೂರರು (ಸ. ತ.) (೨) ಅನಿತು, ಎಂಬ ಶಬ್ದದ ಪುಂಲಿಂಗ ಬಹುವಚನರೂಪ.

199. ಭರತದಲಿ-ಅಭಿನಯಶಾಸ್ತ್ರದಲ್ಲಿಯೂ, ವೈದ್ಯದಲಿ-ರೋಗ ಚಿಕಿತ್ಸಾಶಾಸ್ತ್ರದಲ್ಲಿಯೂ, ಕಾವ್ಯಸುವಿರಚಿತಾಲಂಕಾರದಲ್ಲಿ=ಕಾವ್ಯ-ಗ್ರಂಥಗಳಲ್ಲಿ, ಸು-ಚೆನ್ನಾಗಿ, ವಿರಚಿತ-ಹೇಳಲ್ಪಟ್ಟ, ಅಲಂಕಾರದಲಿ-ಉಪಮಾದ್ಯಲಂಕಾರಗಳಲ್ಲಿಯೂ, ಗಜತುರಗಲಕ್ಷಣದಲಿ=ಗಜ-ಆನೆಗಳು, ತುರುಗ-ಕುದುರೆಗಳು, ಇವುಗಳ, ಲಕ್ಷಣದಲಿ-ಸ್ವರೂಪಶಾಸ್ತ್ರದಲ್ಲಿಯೂ (ಗಜಶಾಸ್ತ್ರ ಅಶ್ವಶಾಸ್ತ್ರಗಳಲ್ಲಿಯೂ), ಸಮಾಹಿತ ಮಂತ್ರತಂತ್ರದಲಿ = ಸಮಾಹಿತ - ಅಭ್ಯಾಸ ಮಾಡಲ್ಪಟ್ಟ, ಮಂತ್ರ-ಮಂತ್ರಗಳು, ತಂತ್ರ-ಕೈಕರಣಗಳು ಇವುಗಳಲ್ಲಿಯೂ, ಸರಸಕವಿತಾರಚನೆಯಲಿ=ಸರಸ-ಶೃಂಗಾರಾದಿ ನವರಸಗಳಿಂದ ಕೂಡಿದ, ಕವಿತಾ-ಕವಿತ್ವವನ್ನು, ರಚನೆಯಲಿ-ಮಾಡುವುದರಲ್ಲಿಯೂ, ವಿಸ್ತರದ-ದೊಡ್ಡದಾದ, ಉಪನ್ಯಾಸದಲಿ-ಬಾಯಿಮಾತಿನ ವಿಷಯ

ವಿಮರ್ಶೆಯಲ್ಲಿಯೂ, ಭೂಪತಿ-ದ್ರುಪದರಾಜನು, ನೆನ್ಮಂ-ನಮ್ಮನ್ನು, ಕರಿಸಿ_ಬರಮಾಡಿಕೊಂಡು, ನೋಡಲಿ-ಪರೀಕ್ಷಿಸಲಿ,+ಎಂದು, ದ್ವಿಜರು-ಬ್ರಾಹ್ಮಣರು, ತಮತಮಗೆ - ತಮ್ಮ ತಮ್ಮಷ್ಟಕ್ಕೆ, ಎಂದರು - ಮಾತನ್ನಾಡಿದರು.

200. ಅಲ್ಲದೆ ಇರ್ದರೆ-ಹಾಗಲ್ಲದೇ ಇದ್ದರೆ, ಸೋದಿಸಿದ-ಶೋಧನೆಮಾಡಿದ, (೧) ತನಿಬೆಲ್ಲವಿಕ್ಕಿದ-ಸಿಹಿಬೆಲ್ಲನನ್ನು ಹಾಕಿ ಮಾಡಿದ, ಹೂರಿಗೆಯ-ಎಳ್ಹೂರಿಗೆಯ, ಮೆದೆಯಲಿ-ರಾಶಿಯಲ್ಲಿಯೂ, ಪರಡಿಯ-ಪರಡಿಯೆಂಬ ಸೇವಗೆಯ-ಶಾವಿಗೆಯೆಂಬ, ಪರಿಪರಿಯ-ನಾನಾವಿಧವಾದ, ಪಾಯಸದಿ-ಪರಮಾನ್ನದಲ್ಲಿಯೂ, ಪುಲ್ಲಿಗೆಯ-ತೆಳುವಾದ, (೨) ಸತ್ಸವಿಯ-ಒಳ್ಳೇರುಚಿಯುಳ್ಳ, ಮಂಡಿಗೆಯಲ್ಲಿ-ಮಂಡಿಗೆ ಎಂಬ ಭಕ್ಷ್ಯದಲ್ಲಿಯೂ, ನವಘೃತಸೂಪದಂಶಕದಲ್ಲಿ=ನವ-ಹೊಸದಾದ, ಘೃತ-ತುಪ್ಪದಿಂದ ಮಾಡಿದ, ಸೂಪ-ತೊವ್ವೆಯು, ದಂಶಕದಲ್ಲಿ-ಚಟ್ನಿಣಿ ಮೊದಲಾದ ನಂಜಿಕೊಳ್ಳುವ ಪದಾರ್ಥ ಇವುಗಳಲ್ಲಿಯೂ, ನಮ್ಮಂ-ನಮ್ಮನ್ನು, ದ್ರುಪದರಾಜನು, ನೋಡಲಿ-ಪರೀಕ್ಷಿಸಲಿ,+ಎಂದು, ಧೂರ್ತವಟುನಿಕರ=ಧೂರ್ತ-ದುರುಳರಾದ, ವಟು-ಬ್ರಹ್ಮಚಾರಿಬಾಲಕರ, ನಿಕರ-ಸಮೂಹವು, ಎಂದುದು-ಹೇಳಿತು (ಅಂದರೆ ಈ ಭೋಜನ ಪದಾರ್ಥಗಳನ್ನು ಯಥೇಚ್ಛವಾಗಿ ತಿನ್ನಬಲ್ಲೆವು. ಬೇಕಾದರೆ ಪರೀಕ್ಷಿಸಲಿ, ಎಂದು ಭಾವ.)

ಟಿಪ್ಪಣಿ॥ ಪರಡಿಯ ಪಾಯಸ, ಸೇವಗೆಯ ಪಾಯಸ, ಬಟ್ಟವಿಯ ಪಾಯಸ, ಗೌಲಿಯ ಪಾಯಸ ಎಂದು ನಾನಾವಿಧವಾದ ಪಾಯಸಗಳುಂಟು. ಹೆಸರುಕಾಳನಂತೆ ಸಣ್ಣ ಸಣ್ಣ ಕಾಳನ್ನು ಮಾಡಿ, ಆ ಕಾಳಿನ ಮಧ್ಯದಲ್ಲಿ ಕಡ್ಡಿಯಿಂದ ಚುಚ್ಚಿ ಗುಳಿಮಾಡಿ ಅವನ್ನು ಹಾಕಿ ಹಾಲು ಸಕ್ಕರೆಯಿಂದ ಪಾಕಮಾಡುವ ಪಾಯಸಕ್ಕೆ ಪರಡಿಯ ಪಾಯಸವೆಂದು ಹೆಸರು.

ವಿ॥ (೧) ತನಿಯಾದ ಬೆಲ್ಲ (ಕ. ವಿ. ಪೂ.) ತನಿಬೆಲ್ಲನಂ ಇಕ್ಕಿದ (ಕ್ರಿ.) (೨) ಸತ್+ಸವಿ (ವಿ. ಪೂ.) ಅರಿಸ.

201. ರಸದ-ಪಾದರಸದ, ಹೊರಲೇಪದಲಿ-ಮೇಲೆ ಬಳಿಯೋಣದರಲ್ಲಿ, ಹುದುಗಿದ-ಅಚ್ಛಾದಿತವಾದ, ಮಿಸುನಿಯಂತಿರೆ-ಚೆನ್ನದಹಾಗೆಯೂ,

* ಜೀವಭಾವ ಪ್ರಸರದೊಳಗೆ=ಜೀವಭಾವ-ಜೀವಾತ್ಮಸ್ವರೂಪದ, ಪ್ರಸರದೊಳಗೆ-ಪ್ರಕಾಶದಲ್ಲಿ, ಅವಲಂಬಿಸಿದ-ಆಶ್ರಯಿಸಿದ, ಪರಮಾತ್ಮನ-ಪರಬ್ರಹ್ಮನ, ಅಂದದಲಿ-ರೀತಿಯಿಂದಲೂ, ಎಸೆವ-ಪ್ರಕಾಶಿಸುವ, ವಿಪ್ರ ಆಕಾರದಲಿ-ಬ್ರಾಹ್ಮಣವೇಷದಿಂದ, ರಂಜಿಸುವ-ಪ್ರಕಾಶಿಸುವ, ಭೂಪತಿ-ಧರ್ಮರಾಯನು, (೧) ತತ್ಸಭಾಸದ್ವಿಸರಮಧ್ಯದೊಳ್=ತತ್-ಆ, ಸಭಾಸತ್-ಬ್ರಾಹ್ಮಣಸಭಿಕರ, ವಿಸರ-ಗುಂಪಿನ, ಮಧ್ಯದೊಳ್-ನಡುವೆ, ಇರ್ದು-ಸೇರಿಕೊಂಡು, ಈ ಮಹಾಧ್ವನಿಯ-ಈ ಬ್ರಾಹ್ಮಣರ ಗದ್ದಲವನ್ನು, ಕೇಳದಂ-ಲಾಲಿಸಿದನು.

ತಾ|| ಮೇಲೆ ಪಾದರಸವನ್ನು ಹಚ್ಚಿದ ಚಿನ್ನದಹಾಗೂ ಜೀವಾತ್ಮಸ್ವರೂಪದಿಂದ ಕಾಣುವ ಪರಮಾತ್ಮನಹಾಗೂ ಬ್ರಾಹ್ಮಣವೇಷದಿಂದ ಪ್ರಕಾಶಿಸುವ ಧರ್ಮರಾಜನು ಆ ಬ್ರಾಹ್ಮಣರ ಸಂಘದ ಮಧ್ಯದಲ್ಲಿದ್ದು ಈ ಬ್ರಾಹ್ಮಣರ ಗದ್ದಲವನ್ನು ಕೇಳದನು.

ಟಿಪ್ಪಣಿ||—ಪರಮಾತ್ಮನು ಮಾಯಾ ಸಂಬಂಧದಿಂದ ಜೀವಾತ್ಮಸ್ವರೂಪನಾಗಿದ್ದಾನೆ, ಎಂದು ಅದ್ವೈತ ವೇದಾಂತಿಗಳು ಹೇಳುವರು.

ವಿ|| (೧) ಸಭಾಸದರ ವಿಸರ (ಷ. ತ) ತತ್ ಸಭಾಸದ್ವಿಸರ (ವಿ. ಪೂ.) ವಿಸರದ ಮಧ್ಯ (ಷ. ತ)

202. †ಧರ್ಮರಾಯನು, ತಮ್ಮನನು-ತಮ್ಮನಾದ ಅರ್ಜುನನನ್ನು, ನೋಡಿದನು-ದೃಷ್ಟಿಸಿದನು. ಸನ್ನೆಯ-ಏಳೆಂದು ಸಂಜ್ಞೆಯನ್ನು, ಮಾಡಿದೊಡೆ-ಮಾಡಲಾಗಿ, ಆ ಪಾರ್ಥ-ಆ ಅರ್ಜುನನು, ಕೈಕೊಂಡನು-ಅಣ್ಣನ ಅಪ್ಪಣೆಯನ್ನು ಸ್ವೀಕರಿಸಿದನು, (೧) ಅವನಿಪಗೂಡಿ-ಧರ್ಮರಾಯನೂ ಸೇರಿರುವ ಹಾಗೆ (ಅಂದರೆ ಧರ್ಮರಾಯನಿಗೂ), ಕುಂತಿಗೆ ತಾಯಿಯಾದ ಕುಂತಿಗೂ, ಭೀಮಸೇನಂಗೆ-ಭೀಮಸೇನನಿಗೂ, ಮನದೊಳಗೆ-ಮನಸ್ಸಿನಲ್ಲಿ, ಎರಗಿ-ನಮಸ್ಕರಿಸಿ, (ಅಂದರೆ ಮನಸ್ಸಿನಲ್ಲೇ ನಮಸ್ಕಾರ ಮಾಡಿದಂತೆ ಭಾವಿಸಿ,) ಕೂಡೆ-ಸಂಗಡ, ಕುಳ್ಳಿರ್ದ-ಕುಳಿತು, ಕೊಂಡಿದ್ದ, ಅಖಿಲವಿಪ್ರರ-ಸಮಸ್ತ ಬ್ರಾಹ್ಮಣರನ್ನು, ನೋಡಿ-ದೃಷ್ಟಿಸಿ, ಮೆಲ್ಲನೆ-ಮೆಲ್ಲಗೆ, ದೋತ್ರ-ಪಂಚೆಯನ್ನೂ. ದರ್ಭೆಯ-ದರ್ಭೇಹುಲ್ಲಿನ

* "ಜೀವ-ಪ್ರಾಣಿಗಳ, ಭಾವ-ಮನುಸ್ಸುಗಳ, ಪ್ರಸರದೊಳಗೆ-ಸಮೂಹದಲ್ಲಿ" ಎಂದು ಕೆಲವರ ಅರ್ಥ.

ಗೂಡ-ಡಬ್ಬಿಯುಸ್ನೂ, ಸಂವರಿಸುತ್ತ-ಸರಿಮಾಡಿಕೊಳ್ಳುತ್ತ (ಅಣಿಮಾಡಿಕೊಳ್ಳುತ್ತ), ಸಭೆಯಿಂದ-ಬ್ರಾಹ್ಮಣರ ಗುಂಪಿನಿಂದ, ಎದ್ದನು-ಎದ್ದು ನಿಂತುಕೊಂಡನು.

ವಿ॥ (೧) ಆವನಿಪನಿಂದ ಕೂಡಿ (ಕ್ರಿ)

203. ಉಪಾಧ್ಯರೆ-ಅಧ್ಯಾಪಕರೇ ? (ವೇದಾಧ್ಯಯನ ಮಾಡಿಸುವ ವೈದಿಕರೇ ? ಎಂದು ಭಾವ). *ಏನುಸಿದ್ಧಿ-ಏನುಕಾರ್ಯನಿರ್ವಾಹವಾಗಬೇಕು ? ಎದ್ದಿರಿ-ಎದ್ದುನಿಂತುಕೊಂಡಿರಿ ! ಇದು-ಎದ್ದುದು, ಏನು-ಏತಕ್ಕೋಸ್ಕರ ? ಧನುವಿಂಗೆ-ಧನುಸ್ಸನ್ನು ಎತ್ತುವುದಕ್ಕೋಸ್ಕರ. ಅಲ್ಲಅಲೇ-ಅಲ್ಲವಷ್ಟೇ ? (ಅಂದರೆ ಧನುಸ್ಸನ್ನು ಎತ್ತುವುದಕ್ಕೋಸ್ಕರವೇ ಸರಿ, ಎಂದು ಭಾವ); ಮನದ-ಮನಸ್ಸಿನ, ಅಂಘವಣೆ-ಆಶೆಯು, ತಾಂ ಏನು-ಅದೇನು ? ಕಾಮಿನಿಯ-ದ್ರೌಪದಿಯೆಂಬ ಸ್ತ್ರೀಯನ್ನು, ಬಯಸಿದಿರಿ ಏನು-ಅಪೇಕ್ಷಿಸಿದಿರಾ ? ವೈನತೇಯನ-ಗರುಡನನ್ನು, ವಿಗಡಿಸಿದ-ವಿಕಾರ ಮಾಡಿದ, ವಿಷಂ-ಹಾವಿನ ನಂಜು. (೧) ಹಾವಡಿಗರಿಗೆ-ಸರ್ಪಗ್ರಾಹಿಗಳಿಗೆ (ಹಾವಾಡಿಗರಿಗೆ), ಏನುಸದರವೊ-ಏನುಸಾಧಾರಣವೊ ? ನಿಮ್ಮ, ಇದು-ಈ, ಉತ್ಸಾಹಂ-ಆಸಕ್ತಿಯು, ಏನು-ಎಂತಹುದು ?+ ಎಂದು, ಧೂರ್ತವಟುನಿಕರ= ಧೂರ್ತ_ದುರುಳರಾದ, ವಟು-ಬ್ರಹ್ಮಚಾರಿಗಳ, ನಿಕರ-ಸಮೂಹವು, ಎಂದುದು-ಹೇಳಿತು.

ಸರಳವಾಕ್ಯಾರ್ಥ ॥ ಉಪಾಧ್ಯಾಯರೇ ! ಏನುಕಾರ್ಯನಿರ್ವಾಹವಾಗಬೇಕು ? ಎದ್ದುನಿಂತುಕೊಂಡಿರಿ. ಇದೇನು ಬಿಲ್ಲೆತ್ತುವುದಕ್ಕಲ್ಲವಲ್ಲವೇ ? ಮನೋಭಿಪ್ರಾಯವೇನು ? ಸ್ತ್ರೀಯನ್ನು ಬಯಸಿದಿರೋ ? ಮಹಾಶೂರ ಕ್ಷತ್ರಿಯರಿಗೆಲ್ಲಾ ಭಂಗಪಡಿಸಿದ ಧನುಸ್ಸು ಬ್ರಾಹ್ಮಣನಿಗೆ ಏನು ಸುಲಭವಾಗಿ ಕಂಡಿತೋ ? ಇದೇನು ನಿಮ್ಮ ಆಸಕ್ತಿಯು ? ಎಂದು ದುರುಳರಾದ ಬ್ರಹ್ಮಚಾರಿಗಳು ಹೇಳಿದರು.

ಭಾವಾರ್ಥ ॥ ವೈನತೇಯನವಿಗಡಿಸಿದವಿಷವೇನು ಸದರವೊ ಹಾವಡಿಗರಿಗೆ-ಮಹಾಶೂರ ಕ್ಷತ್ರಿಯರಿಗೆ ಅಸಾಧ್ಯವಾದ ಈ ಬಿಲ್ಲು ಬ್ರಾಹ್ಮಣನಿಗೆ ಎಷ್ಟು ಸುಲಭವಾಗಿ ಕಂಡಿತೋ ?

ವಿ॥ (೧) ತದ್ಧಿತಾಂತಶಬ್ದ

---

* "ಏನುಸುದ್ದಿ" ಎಂದು ಮತ್ತೊಂದು ಪಾಠವುಂಟು.

204. ‡ಶ್ರೋತ್ರಿಯಸ್ತೋಮದಲಿ-ವೈದಿಕಬ್ರಾಹ್ಮಣರ ಗುಂಪಿನಲ್ಲಿ, ಮದುವೆ-ವಿವಾಹವು, ಬೇಕೆ-ಆವಶ್ಯಕವೇ ? ನಾವು-ಬ್ರಾಹ್ಮಣರಾದ ನಾವು, (೧) ಕನ್ಯಾರ್ಥಿಗಳು-ಕನ್ನಿಕೆಯನ್ನು ಯಾಚಿಸತಕ್ಕವರು, ಎಂಬುದು-ಎಂದು ಹೇಳತಕ್ಕುದು, ನಿಜಾನ್ವಯವಿದ್ಯೆಯಲಿ=ನಿಜ-ತಮ್ಮ, ಅನ್ವಯ-ಜಾತಿಯ, ವಿದ್ಯೆಯಲಿ-ವಿದ್ಯೆಯಲ್ಲಿ (ಅಂದರೆ ವೈದಿಕಶಾಸ್ತ್ರಗಳಲ್ಲಿ), ಪರೀಕ್ಷೆಗಳ-ಪರೀಕ್ಷೆಗಳನ್ನು, ಕೊಡುವುದು-ಕೊಡತಕ್ಕುದು; ಇದು-ಹೀಗೆ ಪರೀಕ್ಷೆಕೊಡುವುದು, ಭೂದೇವರಿಗೆ-ಬ್ರಾಹ್ಮಣರಿಗೆ, ಮದುವೆ ಅಹುದು-ವಿವಾಹವೆನ್ನಿಸಿಕೊಳ್ಳುವುದು, ಸೌಖ್ಯಪುಣ್ಯಪ್ರದವು-ಸುಖವನ್ನೂ ಧರ್ಮವನ್ನೂ ಉಂಟುಮಾಡುವುದು; ನೀಂ-ನೀನು ನೆನೆದುದು-ದ್ರೌಪದಿಯನ್ನು ವರಿಸಬೇಕೆಂದು ಆಲೋಚಿಸಿದುದು, ಭಗೀರಥಯತ್ನಂ-ಭಗೀರಥರಾಜನು ಗಂಗೆ ತರುವ ಪ್ರಯತ್ನಕ್ಕೆ ಸಮವಾದುದು + ಎಂದು, ಭೂಸುರವ್ರಾತ-ಬ್ರಾಹ್ಮಣರ ಸಮೂಹವು, ಎಂದುದು-ಹೇಳಿತು.

* ತಾತ್ಪರ್ಯ ||—ಬ್ರಾಹ್ಮಣರಲ್ಲಿ ಯಾರಾದರೂ ದ್ರೌಪದಿಯನ್ನು ಮದುವೆ ಮಾಡಿಕೊಳ್ಳಬೇಕೆ ? ಹಾಗಾದರೆ ನಾವು ಕನ್ಯಾರ್ಥಿಗಳೇ ಹೌದು ಎಂದು ಹೇಳಬಿಡಬೇಕು. ತಮ್ಮ ಜಾತಿಯ ವಿದ್ಯೆಯಲ್ಲಿ ಪರೀಕ್ಷೆ ಕೊಡಬೇಕು. ಹೀಗೆ ಪರೀಕ್ಷೆ ಕೊಟ್ಟರೆ ಅದೇ ಮದುವೆಯಾದಹಾಗೆ ಭಾವಿಸಬೇಕು. ಹೀಗೆ ಶಾಸ್ತ್ರಪರೀಕ್ಷೆ ಕೊಟ್ಟುದೇ ಮದುವೆ ಎಂದು ಹೇಳಬಿಡಬೇಕು. ಇಂತಹ ಮದುವೆಯಿಂದ ಬ್ರಾಹ್ಮಣರಿಗೆ ಸೌಖ್ಯವೂ ಪುಣ್ಯವೂ ಉಂಟು. ಹಾಗಲ್ಲದೆ ಬಿಲ್ಲೆತ್ತಿ ಶೌರ್ಯ ತೋರಿಸಿ ದ್ರೌಪದಿಯನ್ನು ವರಿಸಬೇಕೆನ್ನುವುದು ಬ್ರಾಹ್ಮಣರಿಗೆ ಉಚಿತವೇ ? ನೀನು ದ್ರೌಪದಿಯನ್ನು

---

‡ ಮತ್ತೊಂದು ರೀತಿಯಾಗಿ ಅರ್ಥ:—ಮದುವೆ ಬೇಕೇ-ವಿವಾಹಮಾಡಿಕೊಳ್ಳಬೇಕೇ ? ನಾವು-ಬ್ರಾಹ್ಮಣರಾದ ನಾವು, ಶ್ರೋತ್ರಿಯಸ್ತೋಮದಲ್ಲಿ-ವೈದಿಕ ಬ್ರಾಹ್ಮಣರ ಸಮೂಹದಲ್ಲಿ, ಕನ್ಯಾರ್ಥಿಗಳು-ಕನ್ಯೆಯನ್ನು ಯಾಚಿಸುವರು, ಎಂಬುದು-ಎಂದು ಹೇಳತಕ್ಕುದು, ನಿಜಾ........

* ಬೇರೆತಾತ್ಪರ್ಯ:—ಬ್ರಾಹ್ಮಣರು ದ್ರೌಪದಿಯನ್ನು ಮದುವೆಮಾಡಿಕೊಳ್ಳಬೇಕೋ ? ಹಾಗಾದರೆ ಬ್ರಾಹ್ಮಣರಾದ ನಾವು ಬಿಲ್ಲೆತ್ತಿ ಶೌರ್ಯ ತೋರಿಸಿ ಮದುವೆ ಮಾಡಿಕೊಳ್ಳತಕ್ಕವರಲ್ಲ. ಬ್ರಾಹ್ಮಣರ ಕನ್ಯೆಯನ್ನೇ ಮದುವೆಮಾಡಿಕೊಳ್ಳತಕ್ಕವರು ಎಂದು ಹೇಳಬೇಕು. ತಮ್ಮ ಜಾತಿಯ ವಿದ್ಯೆಯಲ್ಲಿ......

ಗೂಡ-ಡಬ್ಬಿಯುಸ್ನ್ನು, ಸಂವರಿಸುತ್ತ-ಸರಿಮಾಡಿಕೊಳ್ಳುತ್ತ (ಅಣಿಮಾಡಿ ಕೊಳ್ಳುತ್ತ), ಸಭೆಯಿಂದ-ಬ್ರಾಹ್ಮಣರ ಗುಂಪಿನಿಂದ, ಎದ್ದನು-ಎದ್ದು ನಿಂತುಕೊಂಡನು.

ವಿ॥ (೧) ಆವನಿಪನಿಂದ ಕೂಡಿ (ಕ್ರಿ)

203. ಉಪಾಧ್ಯರೆ-ಅಧ್ಯಾಪಕರೇ ? (ವೇದಾಧ್ಯಯನ ಮಾಡಿ ಸುವ ವೈದಿಕರೇ ? ಎಂದು ಭಾವ). *ಏನುಸಿದ್ಧಿ-ಏನುಕಾರ್ಯನಿರ್ವಾಹ ವಾಗಬೇಕು ? ಎದ್ದಿರಿ-ಎದ್ದುನಿಂತುಕೊಂಡಿರಿ ! ಇದು-ಎದ್ದುದು, ಏನು-ಏತಕ್ಕೋಸ್ಕರ ? ಧನುವಿಂಗೆ-ಧನುಸ್ಸನ್ನು ಎತ್ತುವುದಕ್ಕೋಸ್ಕರ. ಅಲ್ಲ ಅಲೇ-ಅಲ್ಲವಷ್ಟೇ ? (ಅಂದರೆ ಧನುಸ್ಸನ್ನು ಎತ್ತುವುದಕ್ಕೋಸ್ಕರವೇ ಸರಿ, ಎಂದು ಭಾವ); ಮನದ-ಮನಸ್ಸಿನ, ಅಂಘವಣೆ-ಆಶೆಯು, ತಾಂ ಏನು-ಅದೇನು ? ಕಾಮಿನಿಯು-ದ್ರೌಪದಿಯೆಂಬ ಸ್ತ್ರೀಯನ್ನು, ಬಯಸಿದಿರಿ ಏನು-ಅಪೇಕ್ಷಿಸಿದಿರಾ ? ವೈನತೇಯನ-ಗರುಡನನ್ನು, ವಿಗಡಿಸಿದ-ವಿಕಾರ ಮಾಡಿದ, ವಿಷಂ-ಹಾವಿನ ನಂಜು. (೧) ಹಾವಡಿಗರಿಗೆ-ಸರ್ಪಗ್ರಾಹಿಗಳಿಗೆ (ಹಾವಾಡಿಗರಿಗೆ), ಏನುಸದರವೊ-ಏನುಸಾಧಾರಣವೋ ? ನಿಮ್ಮ, ಇದು-ಈ, ಉತ್ಸಾಹಂ-ಆಸಕ್ತಿಯು, ಏನು-ಎಂತಹುದು ?+ಎಂದು, ಧೂರ್ತ ವಟುನಿಕರ= ಧೂರ್ತ_ದುರುಳರಾದ, ವಟು-ಬ್ರಹ್ಮಚಾರಿಗಳ, ನಿಕರ-ಸಮೂಹವು, ಎಂದುದು-ಹೇಳಿತು.

ಸರಳವಾಕ್ಯಾರ್ಥ ॥ ಉಪಾಧ್ಯಾಯರೇ ! ಏನುಕಾರ್ಯನಿರ್ವಾಹ ವಾಗಬೇಕು ? ಎದ್ದುನಿಂತುಕೊಂಡಿರಿ. ಇದೇನು ಬಿಲ್ಲೆತ್ತುವುದಕ್ಕಲ್ಲ ವಲ್ಲವೇ ? ಮನೋಭಿಪ್ರಾಯವೇನು ? ಸ್ತ್ರೀಯನ್ನು ಬಯಸಿದಿರೋ ? ಮಹಾಶೂರ ಕ್ಷತ್ರಿಯರಿಗೆಲ್ಲಾ ಭಂಗಪಡಿಸಿದ ಧನುಸ್ಸು ಬ್ರಾಹ್ಮಣನಿಗೆ ಏನು ಸುಲಭವಾಗಿ ಕಂಡಿತೋ ? ಇದೇನು ನಿಮ್ಮ ಆಸಕ್ತಿಯು ? ಎಂದು ದುರುಳರಾದ ಬ್ರಹ್ಮಚಾರಿಗಳು ಹೇಳಿದರು.

ಭಾವಾರ್ಥ ॥ ವೈನತೇಯನವಿಗಡಿಸಿದವಿಷವೇನು ಸದರವೊ ಹಾವ ಡಿಗರಿಗೆ-ಮಹಾಶೂರ ಕ್ಷತ್ರಿಯರಿಗೆ ಅಸಾಧ್ಯವಾದ ಈ ಬಿಲ್ಲು ಬ್ರಾಹ್ಮಣ ನಿಗೆ ಎಷ್ಟು ಸುಲಭವಾಗಿ ಕಂಡಿತೋ ?

ವಿ॥ (೧) ತದ್ಧಿತಾಂತಶಬ್ದ

---

* "ಏನುಸುದ್ದಿ" ಎಂದು ಮತ್ತೊಂದು ಪಾಠವುಂಟು.

204. ‡ಶ್ರೋತ್ರಿಯಸ್ತೋಮದಲಿ-ವೈದಿಕಬ್ರಾಹ್ಮಣರ ಗುಂಪಿನಲ್ಲಿ, ಮದುವೆ-ವಿವಾಹವು, ಬೇಕೆ-ಅವಶ್ಯಕವೇ ? ನಾವು-ಬ್ರಾಹ್ಮಣರಾದ ನಾವು, (೧) ಕನ್ಯಾರ್ಥಿಗಳು-ಕನ್ನಿಕೆಯನ್ನು ಯಾಚಿಸತಕ್ಕವರು, ಎಂಬುದು-ಎಂದು ಹೇಳತಕ್ಕುದು, ನಿಜಾನ್ವಯವಿದ್ಯೆಯಲಿ=ನಿಜ-ತಮ್ಮ, ಅನ್ವಯ-ಜಾತಿಯ, ವಿದ್ಯೆಯಲಿ-ವಿದ್ಯೆಯಲ್ಲಿ (ಅಂದರೆ ವೈದಿಕಶಾಸ್ತ್ರಗಳಲ್ಲಿ), ಪರೀಕ್ಷೆಗಳ-ಪರೀಕ್ಷೆಗಳನ್ನು, ಕೊಡುವುದು-ಕೊಡತಕ್ಕುದು; ಇದು-ಹೀಗೆ ಪರೀಕ್ಷೆಕೊಡುವುದು, ಭೂದೇವರಿಗೆ-ಬ್ರಾಹ್ಮಣರಿಗೆ, ಮದುವೆ ಅಹುದು-ವಿವಾಹವೆನ್ನಿಸಿಕೊಳ್ಳುವುದು, ಸೌಖ್ಯಪುಣ್ಯಪ್ರದವು-ಸುಖವನ್ನೂ ಧರ್ಮವನ್ನೂ ಉಂಟುಮಾಡುವುದು; ನೀಂ-ನೀನು ನೆನೆದುದು-ದ್ರೌಪದಿಯನ್ನು ವರಿಸಬೇಕೆಂದು ಆಲೋಚಿಸಿದುದು, ಭಗೀರಥಯತ್ನಂ-ಭಗೀರಥರಾಜನು ಗಂಗೆ ತರುವ ಪ್ರಯತ್ನಕ್ಕೆ ಸಮವಾದುದು + ಎಂದು, ಭೂಸುರವ್ರಾತ-ಬ್ರಾಹ್ಮಣರ ಸಮೂಹವು, ಎಂದುದು-ಹೇಳಿತು.

* ತಾತ್ಪರ್ಯ ॥—ಬ್ರಾಹ್ಮಣರಲ್ಲಿ ಯಾರಾದರೂ ದ್ರೌಪದಿಯನ್ನು ಮದುವೆ ಮಾಡಿಕೊಳ್ಳಬೇಕೆ ? ಹಾಗಾದರೆ ನಾವು ಕನ್ಯಾರ್ಥಿಗಳೇ ಹೌದು ಎಂದು ಹೇಳಬಿಡಬೇಕು. ತಮ್ಮ ಜಾತಿಯ ವಿದ್ಯೆಯಲ್ಲಿ ಪರೀಕ್ಷೆ ಕೊಡಬೇಕು. ಹೀಗೆ ಪರೀಕ್ಷೆ ಕೊಟ್ಟರೆ ಅದೇ ಮದುವೆಯಾದಹಾಗೆ ಭಾವಿಸಬೇಕು. ಹೀಗೆ ಶಾಸ್ತ್ರಪರೀಕ್ಷೆ ಕೊಟ್ಟುದೇ ಮದುವೆ ಎಂದು ಹೇಳಬಿಡಬೇಕು. ಇಂತಹ ಮದುವೆಯಿಂದ ಬ್ರಾಹ್ಮಣರಿಗೆ ಸೌಖ್ಯವೂ ಪುಣ್ಯವೂ ಉಂಟು. ಹಾಗಲ್ಲದೆ ಬಿಲ್ಲೆತ್ತಿ ಶೌರ್ಯ ತೋರಿಸಿ ದ್ರೌಪದಿಯನ್ನು ವರಿಸಬೇಕೆನ್ನುವುದು ಬ್ರಾಹ್ಮಣರಿಗೆ ಉಚಿತವೇ ? ನೀನು ದ್ರೌಪದಿಯನ್ನು

---

‡ ಮತ್ತೊಂದು ರೀತಿಯಾಗಿ ಅರ್ಥ:—ಮದುವೆ ಬೇಕೇ-ವಿವಾಹಮಾಡಿಕೊಳ್ಳಬೇಕೇ ? ನಾವು-ಬ್ರಾಹ್ಮಣರಾದ ನಾವು, ಶ್ರೋತ್ರಿಯಸ್ತೋಮದಲ್ಲಿ-ವೈದಿಕಬ್ರಾಹ್ಮಣರ ಸಮೂಹದಲ್ಲಿ, ಕನ್ಯಾರ್ಥಿಗಳು-ಕನ್ಯೆಯನ್ನು ಯಾಚಿಸುವರು, ಎಂಬುದು-ಎಂದು ಹೇಳತಕ್ಕುದು, ನಿಜಾ.......

* ಬೇರೆತಾತ್ಪರ್ಯ:—ಬ್ರಾಹ್ಮಣರು ದ್ರೌಪದಿಯನ್ನು ಮದುವೆಮಾಡಿಕೊಳ್ಳಬೇಕೋ ? ಹಾಗಾದರೆ ಬ್ರಾಹ್ಮಣರಾದ ನಾವು ಬಿಲ್ಲೆತ್ತಿ ಶೌರ್ಯ ತೋರಿಸಿ ಮದುವೆಮಾಡಿಕೊಳ್ಳತಕ್ಕವರಲ್ಲ. ಬ್ರಾಹ್ಮಣರ ಕನ್ಯೆಯನ್ನೇ ಮದುವೆಮಾಡಿಕೊಳ್ಳತಕ್ಕವರು ಎಂದು ಹೇಳಬೇಕು. ತಮ್ಮ ಜಾತಿಯ ವಿದ್ಯೆಯಲ್ಲಿ......

ಪರಿಸಬೇಕೆಂದು ಆಲೋಚಿಸುವುದು ಭಗೀರಥನು ಗಂಗೆಯನ್ನು ತರುತ ಪ್ರಯತ್ನ ಮಾಡಿದಂತೆ ಅಸಾಧ್ಯಪ್ರಕರಣವು.

ಟಿ|| (೧) ಕನ್ಯಾ ಅರ್ಥಿ (ಉಪ. ಸ.)

ಭಾವಾರ್ಥ||—ನೀಂನೆನೆದುದುಭಗೀರಥಯತ್ನವೆಂದುದು ಭೂಸುರ ಪಾತ್ರ-ನೀನು ಆಲೋಚಿಸಿದುದು ಕಷ್ಟಸಾಧ್ಯವೆಂದು ಬ್ರಾಹ್ಮಣರು ಹೇಳಿದರು. ಭಗೀರಥಯತ್ನ-ಬಹು ಶ್ರಮದಿಂದ ಸಾಧಿಸತಕ್ಕ ಕಾರ್ಯ.

205. ನೀವ್ವು-ನೀವುಗಳು, ಸೈರಿಸಿ-ಸಹಿಸಿರಿ; ವಿಪ್ರ, ಕಾರುಣ್ಯಾವಲೋಕನಂ=ಕಾರುಣ್ಯ-ಕೃಪೆಯಿಂದ ಕೂಡಿದ, ಅವಲೋಕನಂ-ದೃಷ್ಟಿಯು, ಉಂಟು ಅಲೇ-ಇದೆಯಲ್ಲವೇ? ನೀಂ-ನೀವು, ಸತ್‌ಭಾವದಲಿ-ಒಳ್ಳೆಯ ಮನಸ್ಸಿನಿಂದ, ರಚಿಸಿದ-ಮಾಡಿದ, ಆಶೀರ್ವಾದಶಕ್ತಿಯಲಿ-ಹರಕೆಯ ಸಾಮರ್ಥ್ಯದಿಂದ, ನಾವು, ವಿಜಯರು-ಜಯಶಾಲಿಗಳಾಗುತ್ತೇವೆ (ವಿಜಯರು-ಅರ್ಜುನ ಮೊದಲಾದ ಪಾಂಡವರು ಎಂದು ಮತ್ತೊಂದು ಚಮತ್ಕಾರಾರ್ಥ); ಇದು-ಈ, ಚಾಪಯಂತ್ರಂ-ಬಿಲ್ಲು ಮತ್ತು ಮತ್ಸ್ಯಯಂತ್ರಗಳು, ಅವಘನಂ-ಯಾವ ದೊಡ್ಡ ಪದಾರ್ಥಗಳು? ಎಂದ-ಎಂಬುದಾಗಿ ಹೇಳಿದ, ಅರ್ಜುನನ, ಸಂಭಾವನೋಕ್ತಿಗೆ-ಉಪಚಾರದ ಮಾತಿಗೆ, ಅವರು-ಆ ಬ್ರಾಹ್ಮಣರು, ನಿಲ್ಲದೆ-ಸುಮ್ಮನಿರದೆ, ತಮತಮಗೆ-ತಮ್ಮ ತಮ್ಮಿಷ್ಟಕ್ಕೆ, ಬದರಿದರು-ಮುಂದೆ ಹೇಳುವಂತೆ ಕೂಗಿದರು.

206. ಕೆಲವರು-ಕೆಲವುಮಂದಿ ಬ್ರಾಹ್ಮಣರು,+ಅರ್ಜುನನನ್ನು, ಹೋಗದೆ ಇರು-ಬಿಲ್ಲೆತ್ತಲು ಹೋಗಬೇಡ, ಎಂದು, ಜರೆದರು-ಗದರಿಸಿದರು; ಕೆಲರು, ತಾಂ-ಈತನು, (೧) ಏಬಲ್ಲಂ-ಏನುತಿಳಿದಿದ್ದಾನೆ? ಎಂದರು-ಎಂದು ಹೇಳಿದರು; ಕೆಲರು, ವಿಪ್ರಸಭೆಗೆ-ಬ್ರಾಹ್ಮಣಸಮಾಜಕ್ಕೆ, ಅಪಹಾಸ್ಯಂ-ನಗೆಗೇಡು, ಅಹುದು-ಆಗುವುದು, ಎಂದು, ನುಡಿದರು-ಹೇಳಿದರು (ಈ ಬ್ರಾಹ್ಮಣನು ಬಿಲ್ಲೆತ್ತಲು ಹೋಗಿ ಸಾಧ್ಯವಾಗದೆ ಹೋಗುವುದರಿಂದ ಬ್ರಾಹ್ಮಣರಿಗೆಲ್ಲಾ ನಗೆಗೇಡಾಗುವದು, ಎಂದು ತಾತ್ಪರ್ಯ); ಕೆಲರು, ತಪ್ಪೇನು-ಬಿಲ್ಲೆತ್ತಲು ಹೋದುದರಿಂದ ದೋಷವೇನು? ಎಂದು, ಕಳೆದರು-ಆಕ್ಷೇಪಮಾಡದೆ ಬಿಟ್ಟರು; ಕೆಲರು,+ಈತನು, ಭದ್ರಾಕಾರನು-ಮಂಗಳಮೂರ್ತಿಯಾಗಿದ್ದಾನೆ, ಈತಗೆ-ಇವನಿಗೆ, ಧನು-ಬಿಲ್ಲು, ಅಳುಕು

ಧುದು-ಭಯಪಡುವುದು, + ಈತನು (೧)ಭಾಗ್ಯಮುಖನು-ಐಶ್ವರ್ಯಸೂಚಕ ವಾದ ಮುಖವುಳ್ಳವನು, ಎಂದು, ಬುಧಸ್ತೋಮ-ಬ್ರಾಹ್ಮಣರ ಸಮೂಹವು, ಎಂದುದು-ಹೇಳಿತು.

ಭಾವಾರ್ಥ॥ ಈತಂಗಳುಕುವುದುಧನ-ಈತನು ಧನುಸ್ಸನ್ನು ಎತ್ತಿ ಜಯಿಸುತ್ತಾನೆ, ಭಾಗ್ಯಮುಖನು-ಈತನ ಮುಖದಲ್ಲಿ ಸಂಪತ್ತು ತೋರುತ್ತಿದೆ.

ವಿ॥ (೧) ಏನಂ+ಬಲ್ಲಂ ಕ್ರಿ (೬) ಮ. ಲು.

207. ತೊಟ್ಟ-ಧರಿಸಿದ, ಹೊಸಯಜ್ಞೋಪವೀತದ—ಹೊಸದಾದ ಜನಿವಾರವುಳ್ಳ, ನೊಸಲಲಿ-ಹಣೆಯಲ್ಲಿ, ಮಟ್ಟ-ಗೋಪೀಚಂದನವುಳ್ಳ, ಕುಶೆಯ-ದರ್ಭೆಯ, ಕರಡಿಗೆ-ಡಬ್ಬಿಯುಳ್ಳ, ಕಟ್ಟ-ಧಾರದಿಂದ ಬಿಗಿದು, ಇರುಕಿದ-ಬಗಲಿನಲ್ಲಿ ಸೇರಿಸಿದ, ಕಕ್ಷೆ-ಕೃಷ್ಣಾಜಿನದ ಚೀಲವುಳ್ಳ, ಬೆರಳಲಿ-ಬೆಟ್ಟನಲ್ಲಿ, ಮುರಿದ - ತಿರುಚಿದ, ದರ್ಭೆಗಳ - ದರ್ಭೆಹುಲ್ಲುಗಳುಳ್ಳ, ಉಟ್ಟ-ಉಟ್ಟುಕೊಂಡಿರುವ, *ಬಾಸದ-ಧೋತ್ರದ, (೧) ಬಳಲುಗಚ್ಚೆಯ-ಜೋಲುತ್ತಿರುವ ಕಚ್ಚೆಯುಳ್ಳ, ಅಟ್ಟಹಾಸದ-ಕೇಕುಹಾಕುವ, ಜನದ-ಜನಗಳ, ನಗೆಗಳ-ನಗುವಿಕೆಗಳಿಗೆ, ನಟ್ಟವಿಗಂ-ನಟ್ಟುವನಂತಿರುವ ಅರ್ಜುನನು, ಒಸರಿಸಿ-ಬಂದು ಕಡೆಗೆ ಸರಿದು, ಸಭೆಯಲಿ-ಬ್ರಾಹ್ಮಣಸಮಾಜದಲ್ಲಿ, ಮೆಲ್ಲನೆ-ಮೆಲ್ಲಗೆ, ಐತಂದ-ಬಂದನು.

ವಾಕ್ಯರೂಪಾರ್ಥ॥—ಹೊಸ ಜನಿವಾರ ಹಾಕಿಕೊಂಡು ಹಣೆಗೆ ಗೋಪೀಚಂದನ ನಾಮವಿಟ್ಟುಕೊಂಡು, ದರ್ಭೆಯ ಡಬ್ಬಿಯನ್ನು ಹಿಡಿದುಕೊಂಡು ಬಗಲಿನಲ್ಲಿ ಕೃಷ್ಣಾಜಿನದ ಚೀಲವಿಟ್ಟುಕೊಂಡು ಬೆರಳಿನಲ್ಲಿ ದರ್ಭೆ ತಿರುಚಿ ಹಿಡಿದು ಧೋತ್ರವುಟ್ಟು ಕಚ್ಚೆಯು ಜೋಲುತ್ತಿರಲು, ಜನಗಳು ಕೇಕುಹಾಕಿ ನಗುವುದಕ್ಕೆ ಈಡಾಗಿರುವ ಅರ್ಜುನನು ಎದ್ದು ವಿಪ್ರಸಭೆಯಲ್ಲಿ ಮೆಲ್ಲಗೆ ಬಂದನು.

ಭಾವಾರ್ಥ॥—ಅಟ್ಟಹಾಸದ ಜನದ ನಗೆಗಳನಟ್ಟವಿಗಂ-ಜನಗಳು ಕೇಕುಹೊಡೆದು ನಗುವುದಕ್ಕೆ ಈಡಾಗಿರುವ ಅರ್ಜುನನು.

ವಿ॥ (೧) ಬಳಲುವುದು+ಕಚ್ಚೆ (ಗ.)

---

*ಬಾಸಕ "ಎಂದಿದೆ." "ಬಾಸದ" ಎಂದಿರಬೇಕು.

208. ಧನುಃ-ಈಶ್ವರನ ಧನುಸ್ಸು, ನಿಗಹಲ್ಕೆ-ಎತ್ತುವುದಕ್ಕೆ, ತನಗೆ-ಈತನಿಗೆ, ಕೃಷ್ಣ ಅಜಿನವೊ - ಜಿಂಕೆಯ ಚರ್ಮ ಮಾತ್ರಯವಾದುದೊ? ಸಾಲಗ್ರಾಮದೇವರೊ-ಸಾಲಗ್ರಾಮ ಶಿಲಾರೂಪವಾದ ದೇವರೋ? ವಿಸುತ್ತ ತುಳಸಿಯೋ-ಶ್ರೇಷ್ಠವಾದ ತೊಳಸಿಯೋ? ಕುಶವೊ-ಕೊನೆಯ ದರ್ಭೆಯೋ? ದರ್ಭೆಗಯೊ-ತುಂಡು ದರ್ಭೆಯೋ? ಸಮಿಧೆಗಳ-ಸಮಿತ್ತುಗಳ (ಅರಳಿಮರದ ಕುಡಿಕಡ್ಡಿಗಳ), ಹೂರೆಯೊ-ಪಿಂಡಿಯೋ? ನನೆದ-ನೀರಿನಲ್ಲಿ ನೆನಸಿದ, ತಿಲವ್ರೋ-ಎಳ್ಳೋ? ವೇಣ್-ಅಥವಾ, ಇದು-ಈ ಬಿಲ್ಲು, ಔಪಾಸನದ-ಅಗ್ನಿಯನ್ನು ಸೇವಿಸುವಾಗ ಉಪಯೋಗಿಸುವ, ಕೊಳವಿಯೊ-ಊದುಕೊಳವಿಯೋ? ಬಣಗುವಿಪ್ರನ=ಬಣಗು-ದುರುಳನಾದ, ವಿಪ್ರನ-ಈ ಬ್ರಾಹ್ಮಣನ, ನೆನಹ-ಆಲೋಚನೆಯನ್ನು, ನೋಡಿರೆ-ನೋಡಿರೋ! ದ್ರೌಪದಿಯ, ಸೌಭಾಗ್ಯವು, ಘನಂ ಅಲಾ-ದೊಡ್ಡದಾದುದು ಅಲ್ಲವೇ!+ ಎಂದು ಬ್ರಾಹ್ಮಣರು ಮಾತನ್ನಾಡಿದರು.

ತಾತ್ಪರ್ಯ॥—ಈ ಬ್ರಾಹ್ಮಣನು ಧನುಸ್ಸಿನ ಜೀವಾಳ ತಿಳಿದವನಲ್ಲ. ಎತ್ತುವುದಕ್ಕೆ ಕೃಷ್ಣಾಜಿನದಂತೆಯೂ.........ಸುಲಭವೆಂದು ತಿಳಿದಿರುವನು. ಈ ದುರುಳಬ್ರಾಹ್ಮಣನ ಯೋಚನೆಯನ್ನು ನೋಡಿರೋ, ಇಂತಹ ಬ್ರಾಹ್ಮಣನನ್ನು ವರಿಸುವುದಕ್ಕೆ ದ್ರೌಪದಿಯ ಪುಣ್ಯಾತಿಶಯವೆಂದು ಹೇಳಬೇಕು ಎಂದು ವಿಪ್ರರೆಲ್ಲರೂ ಎಂದರು.

ಟಿಪ್ಪಣಿ॥—ಔಪಾಸನ-ಪತ್ನಿಯೊಡನೆ ಅಗ್ನಿಯನ್ನು ಪೂಜಿಸುವ ಕರ್ಮ, ಅಗ್ನಿಯನ್ನು ಹೊತ್ತಿಸಲು ಊದುವುದಕ್ಕಾಗಿ ಒಂದು ಕೊಳವಿಯನ್ನು ಇಟ್ಟುಕೊಂಡಿರುವರು.

209. ತಾಯೆ-ಅಮ್ಮಾ! ಇತ್ತ-ಈಕಡೆಯಲ್ಲಿ, ಹಾರುವರ ಅತ್ತ-ಬ್ರಾಹ್ಮಣರ ಕಡೆಯಲ್ಲಿ, ಗಡ್ಡದ ಉಪಾಧ್ಯರನು-ದಾಡಿಬಿಟ್ಟುಕೊಂಡಿರುವ ಅಧ್ಯಾಪಕ ಬ್ರಾಹ್ಮಣರನ್ನು, (೧) ನೋಡಾ-ನೋಡು; ತಾವು-ಇವರು, ಧನುವಂ-ಈಶ್ವರನ ಬಿಲ್ಲನ್ನು, ಎತ್ತುವರುಗಡ-ಎತ್ತುತ್ತಾರೆ ಅಲ್ಲವೇ? ತಿಮಿಂಗಿಲನ-ಮತ್ಸ್ಯಯಂತ್ರದಮೇಲಿರುವ ಲೋಹದಮೀನನ್ನು, ಇಸುವರುಗಡ-ಬಾಣದಿಂದ ಹೊಡೆಯುತ್ತಾರೆ ಅಲ್ಲವೆ? ಬಳಿಕ ಇನ್ನು-ಇನ್ನು ಮೇಲೆ, ಹೊತ್ತುಗಳೆಯೊಡೆ-ಹೊತ್ತುಕಳೆಯುವುದಕ್ಕೆ, ಲೇಸು-ಅನುಕೂಲ

ವಾಯಿತು (ಈ ಬ್ರಾಹ್ಮಣನನ್ನು ವರಿಸುವುದರಿಂದ ವಿನೋದವಾಗಿ ಕಾಲ ಕಳೆಯಬಹುದು, ಎಂದು ಭಾವ); ವಿಪ್ರರು-ಬ್ರಾಹ್ಮಣರು, ಉತ್ತಮರು ಅಲ್ಲ-ಶ್ರೇಷ್ಠರಲ್ಲವೇ?+ ಎಂದು ದ್ರೌಪದಿಯ ಸಖಿಯರು, ಎನೆ-ಮಾತನಾಡಲು,+ ದ್ರೌಪದಿಯು, (೨) ತಲೆಗುತ್ತಿ-ತಲೆಯನ್ನು ಬಗ್ಗಿಸಿ, ಮಹೀತಳವ-ನೆಲವನ್ನು, ಉಂಗುಟದೊಳು-ಕಾಲಹೆಬ್ಬೆಟ್ಟಿನಿಂದ, ಔಕುತ-ಔಕುತ್ತಾ, ನಾಚಿದಳು-ಲಜ್ಜೆ ಹೊಂದಿದಳು.

ಟಿಪ್ಪಣಿ ॥ ಹೆಂಗಸರು ಲಜ್ಜೆಯಾದಾಗ ನೆಲವನ್ನು ಕಾಲಿನ ಹೆಬ್ಬೆಟ್ಟಿನಿಂದ ಔಕುವ ಪದ್ಧತಿಯುಂಟು.

ವಿ॥ (೧) ನೋಡು+ಔ, ಸ್ತ್ರೀಯನ್ನು ಅಭಿಮುಖವಾಗಿ ಮಾಡಿಕೊಳ್ಳುವಾಗ ಔ, ಎಂಬ ಅವ್ಯಯವನ್ನು ಹೇಳುವರು (೨) ತಲೆಯಂ ಗುತ್ತಿ (ಕ್ರಿ.)

210. ಅವನಿಪತಿ-ಜನಮೇಜಯರಾಯನೇ, ಕೇಳ್-ಕೇಳು,+ ಅರ್ಜುನನು ಇತ್ತಲ್-ಈ ಕಡೆಯಲ್ಲಿ, ಈ ಪಾರ್ಥಿವರ-ಈ ದೊರೆಗಳ, ಪರಿಹಾಸವನು+-ಗೇಲಿಯನ್ನೂ, ಕಾಂತಾನಿವಹದಲಿ-ಸ್ತ್ರೀಯರ ಗುಂಪಿನಲ್ಲಿ, ನಿಬ್ಬರದ-ಯಥೇಚ್ಛವಾದ, ನುಡಿಗಳಂ-ದ್ರೌಪದಿಯನ್ನು ಪರಿಹಾಸಮಾಡುವ ಮಾತುಗಳನ್ನೂ, ಆ ಮಹೀಸುರರ-ಆ ಬ್ರಾಹ್ಮಣರ, ವಿವಿಧ....ವಿನ್ಯಾಸವನು=ವಿವಿಧ-ಹಲವು ಬಗೆಯಾದ, ಕಟು-ಕಹಿಯಾದ, ಮಧುರ-ಸಿಹಿಯಾದ, ಉಕ್ತಿ-ಮಾತುಗಳ, ವಿನ್ಯಾಸವನು-ರೀತಿಯನ್ನೂ, ಕೇಳುತ-ಲಾಲಿಸುತ್ತಾ, (೧) ಮುಗುಳುನಗೆಯಲಿ-ಮಂದಹಾಸದಿಂದ (ಕಿರುನಗೆಯಿಂದ) ಕೂಡಿ, (೨) ನವಮದದ್ವಿಪಗತಿಯ=ನವ-ಹೊಸದಾದ, ಮದ-ಕೊಬ್ಬು ಹತ್ತಿದ, ದ್ವಿಪ-ಆನೆಯ, ಗತಿಯ-ನಡಿಗೆಯ, ಗರುವಾಯಿಯಲಿ-ಬೆಡಗಿನಿಂದ (ಗಾಂಭೀರ್ಯದಿಂದ), ನಡೆತಂದ-ಬಂದನು.

ಭಾವಾರ್ಥ ॥ ಕಟುಮಧುರೋಕ್ತಿವಿನ್ಯಾಸವನು-ಅಹಿತವಾಗಿಯೂ ಹಿತವಾಗಿಯೂ ಆಡುವ ಮಾತನ್ನು, ನವಮದದ್ವಿಪಗತಿಯಗರುವಾಯಿಯಲಿ ನಡೆತಂದ-ಹೊಸಮದದಾನೆಯಂತೆ ಬೆಡಗಿನಿಂದ ನಡೆದುಬಂದನು.

ವಿ॥ (೧) ಮುಗುಳು-ಮೊಗ್ಗಿನಂತಿರುವ, ನಗೆ, (ಕ. ಉ. ಪೂ.) (೨) ಮದದಿಂದ ಕೂಡಿದ ದ್ವಿಪ (ಮ. ಲು.) ನವಮದದ್ವಿಪ (ವಿ. ಪೂ.) ದ್ವಿಪದಗತಿ (ಷ. ತ.).

211. + ಅರ್ಜುನನು, ತಿರುವಸು-ಬಿಲ್ಲಿನ ಹಗ್ಗವನ್ನು, ಹೊಯ್ದು-ಹಿಡಿದು (ಟಂಕಾರವಮಾಡಿ), ಸೆಳೆದು-ಎಳೆದು, ಕಿವಿವರೆಗೆ-ಕಿವಿಯ ಪರ್ಯಂತವೂ, ಒಯ್ದಂ-ತೆಗೆದುಕೊಂಡುಬಂದನು, ಇದು, ಹದವಿಲ್ಲು-ಪ್ರಮಾಣಕ್ಕೆ ಸರಿಯಾದ ಧನುಸ್ಸು (ಹದನಾದಬಿಲ್ಲು), ಅಲಾ-ಅಲ್ಲವೇ ? + ದೊರೆಗಳಗೆಲ್ಲಾ, ಬಲುಹು-ಸಾಮರ್ಥ್ಯವು, ಅಯ್ದುದು-ಕುಗ್ಗಿಹೋಯಿತು, ಅಕಟಾ-ಅಯ್ಯೋ ! ಮಾಗಧಾದಿಗಳು = ಮಾಗಧ-ಮಗಧದೇಶಾಧಿಪತಿಯಾದ ಶಿಶುಪಾಲನು, ಆದಿಗಳು-ಮೊದಲಾದ ರಾಜರ ಗುಂಪು + ಈ ಬಿಲ್ಲಿಗೆ, ಬರಿದೆ-ಸುಮ್ಮನೆ, (೧) ಹೆದರಿತು-ಅಂಜಿಬಿಟ್ಟರು ; ಕೈಯ್ದೆಗೆದರು-ಬಿಲ್ಲೆತ್ತದೆ ಹಿಂದಾದರು; ಇದರೊಳಗೆ-ಈ ಬಿಲ್ಲಿನ ವಿಷಯದಲ್ಲಿ, ಎನಗೆ-ನನಗೆ, ಹೆಸರು-ಕೀರ್ತಿಯು, ಎಯ್ದಬೇಕು-ಬರಬೇಕು, ಎಂದು, ಐಸು ಅಲೇ-ಅಷ್ಟಲ್ಲವೇ ? ಎನುತ-ಎನ್ನುತ್ತ, ಅಯ್ದುಬಾಣವ-ಐದು ಬಾಣಗಳನ್ನು, ಕೊಂಡು-ತೆಗೆದುಕೊಂಡು, ಯಂತ್ರದ-ಮತ್ಸ್ಯಯಂತ್ರದ, ಹೊಳವಂ-ನೆರಳನ್ನು, ಈಕ್ಷಿಸಿದ-ನೋಡಿದನು.

ಟಿಪ್ಪಣಿ॥ ಮತ್ಸ್ಯಯಂತ್ರದ ಕೆಳಗೆ ಇಟ್ಟಿರುವ ಎಣ್ಣೆಯ ಕೊಪ್ಪರಿಗೆಯಲ್ಲಿ ಯಂತ್ರದ ಮೇಲಿರುವ ಮೀನಿನ ನೆರಳನ್ನು ನೋಡಿಕೊಂಡು ತಲೆಯೆತ್ತದೆ ಐದು ಬಾಣಗಳಿಂದ ಹೊಡೆದು ಮೇಲಿರುವ ಮೀನನ್ನು ಕತ್ತರಿಸಿ ಕೆಳಗೆ ಬೀಳಿಸಬೇಕು, ಆದುದರಿಂದ ಅರ್ಜುನನು ಹಾಗೆ ಮಾಡಿದನು

ವಿ॥ (೧) ಮಾಗಧಾದಿಗಳು । ಎಂದು ಪುಲ್ಲಿಂಗ ಬಹುವಚನ ಕರ್ತೃವಿದ್ದಾಗ್ಯೂ ಹೆದರಿತು, ಎಂದು ನಪುಂಸಕೈಕವಚನ ಕ್ರಿಯಾಪದವಿದೆ. ಭಾರತಕವಿಯು ಸಮುದಾಯಾರ್ಥವನ್ನಿಟ್ಟುಕೊಂಡು ಹೀಗೆ ವಿಲಕ್ಷಣವಾಗಿ ಪ್ರಯೋಗಿಸುವುದುಂಟು.

212. ಅರ್ಜುನನು, ತೂಗಿ-ಬಾಣಸಂಧಾನ ಮಾಡಿದ ಬಿಲ್ಲಿನ ಹಗ್ಗವನ್ನು ಹಿಂದಕ್ಕೆ ಮುಂದಕ್ಕೆ ಆಡಿಸಿ, ಕಿವಿವರೆಗೆ-ಕಿವಿಯಪರ್ಯಂತವೂ, ಎಳೆದು-ಸೆಳೆದು, ಅಂಬಿನಲಿ-ಬಾಣದಿಂದ, ಯಂತ್ರವ-ಮತ್ಸ್ಯಯಂತ್ರವನ್ನು ತಾಗಿಸಿದಂ-ತಗುಲಿಸಿದನು ; ಯಂತ್ರಭೇದದಲಿ-ಯಂತ್ರವನ್ನು ಕತ್ತರಿಸುವ ವಿಷಯದಲ್ಲಿ, ಪಾರ್ಥನ-ಅರ್ಜುನನ, ಲಾಗುವೇಗವಂ-ಬಾಣಪ್ರಯೋಗದ ವೇಗವನ್ನು (ಕೈಚಳಕವನ್ನು), ಆರು-ಯಾರು, ಬಲ್ಲರು-ತಿಳಿದಿದ್ದಾರೆ ?

ಕಾರ್ಮುಕಯೋಗಸಿದ್ಧನೆ=ಕಾರ್ಮುಕಯೋಗ-ಧನುರ್ವಿದ್ಯೆಯಲ್ಲಿ, ಸಿದ್ಧನೆ-ವಿದ್ವಾಂಸನಾದವನೇ ? (೧) ಜಾಗು-ಶಹಬಾಸು ! ಧಣುಧಣು-ಶಹಬಾಸು ಶಹಬಾಸು ! ಪೂತು-ಶಹಬಾಸು ! (೨) ಕೋದಂಡಾಗಮತ್ರಿಪುರಾರಿ=ಕೋದಂಡ ಆಗಮ-ಧನುರ್ವಿದ್ಯೆಯಲ್ಲಿ, ತ್ರಿಪುರಾರಿ -ಮಹೇಶ್ವರಪ್ರಾಯನಾದವನೇ ! ಮಝರೆ-ಭಲಾ ! + ಎಂದು, ವಂದಿಸಂದೋಹ-ಹೊಗಳಭಟ್ಟರಗುಂಪು, ಎಂದುದು-ಕೊಂಡಾಡಿತು.

ಭಾವಾರ್ಥ ॥ ಕೋದಂಡಾಗಮತ್ರಿಪುರಾರಿ - ಈಶ್ವರನಂತೆ ಬಾಣ ಪ್ರಯೋಗವಮಾಡತಕ್ಕವನು.

ವಿ॥(೧) ಜಾಗು, ಧಣು, ಪೂತು, ಮಝರೆ-ಇವುಗಳೆಲ್ಲಾ ಕೊಂಡಾಡುವ ಮಾತುಗಳು (ಮಹಾರಾಷ್ಟ್ರಭಾಷೆ) (೨) ಕೋದಂಡ-ಧನುಸ್ಸಿನ ಆಗಮ-ಶಾಸ್ತ್ರ. (ಷ. ತ.) ಆಗಮದಲ್ಲಿ ತ್ರಿಪುರಾರಿ (ಸ. ತ.)

ಉಪ್ತಕಥೆ:—ಅರ್ಜುನನು ಬಾಣವನ್ನು ಪ್ರಯೋಗಿಸಿ ಮತ್ಸ್ಯಯಂತ್ರದ ಮೀನನ್ನು ಕತ್ತರಿಸಿ ಕೆಳಗೆ ಕೆಡಹಿದನು.

213. ವಿಪ್ರನಿಕಾಯ-ಬ್ರಾಹ್ಮಣರ ಸಮೂಹವು, ಆ ಎನುತ-ಆ ಎಂಬದಾಗಿ, ಬೊಬ್ಬಿರಿದು-ಕೂಗಿ, ಕುಣಿದುದು-ಕುಣಿದಾಡಿತು; ಕಮಲಮುಖಿ-ತಾವರೆಯಂತೆ ಮುಖವುಳ್ಳ ದ್ರೌಪದಿಯು, ನಿರ್ದಾಯದಲಿ-ದಾಯತಪ್ಪಿ, ಹಾರುವಗೆ - ಬ್ರಾಹ್ಮಣನಿಗೆ, ಸೇರಿದಳು-ವಶಳಾದಳು, ಎನುತ-ಎನ್ನುತ್ತ, ಹರ್ಷದಲಿ-ಉಬ್ಬುವಿಕೆಯಿಂದ, (೧) ಆ ಯುವತಿಜನಜಲಧಿ=ಆ, ಯುವತಿಜನ-ದ್ರೌಪದಿಯ ಸಖಿಯರೆಂಬ, ಜಲಧಿ-ಸಮುದ್ರವು, ಮಸಗಿತು-ಹೆಚ್ಚಿತು, ಬಾಯಮೌನದ-ಮೌನವಾದ ಬಾಯುಳ್ಳ, ಬೆರಳ ಮೂಗಿನ-ಮೂಗಿನಮೇಲೆ ಬೆಟ್ಟುಳ್ಳ, ರಾಯರು-ದೊರೆಗಳು, ಬಿಗಿದಬೆರಗಿನ, ಆಶ್ಚರ್ಯದಿಂದ ಸ್ತಬ್ಧರಾಗಿ, ಹೊತ್ತು-ಧರಿಸಿದ, ದುಗುಡದಲಿ-ದುಃಖದಿಂದ ಕೂಡಿ, ಇದ್ದರು.

ಭಾವಾರ್ಥ॥—ಹರ್ಷದಲಿ ಆ ಯುವತಿಜನ ಜಲಧಿ ಮಸಗಿತು-ಆ ದ್ರೌಪದೀ ಸಖಿಯರೆಲ್ಲಾ ಬಹಳವಾಗಿ ಉಬ್ಬಿಹೋದರು.

ವಿ ॥ (೧) ಯುವತಿಯರೆಂಬಜನ (ಸಂ. ಪೂ.) ಜನವೆಂಬಜಲಧಿ (ಅ. ಪೂ) ಅದು+ಯುವ ......ಧಿ!(ಗ.)

ಉತ್ತರಾರ್ಧಪದ್ಯದ ಸರಳವಾಕ್ಯಾರ್ಥ ||-ಆ ದ್ರೌಪದೀಸಖಿಯರೆಲ್ಲ ಬಹುವಾಗಿ ಉಬ್ಬಿಹೋದರು. ದೊರೆಗಳೆಲ್ಲ ಕ್ಷತ್ರಿಯರಾದ ನಾವೆಲ್ಲರೂ ಎತ್ತಲಾರದೆ ಹೋದ ಬಿಲ್ಲನ್ನು ಈ ಹಾರುವನು ಎತ್ತಿದನಲ್ಲಾ ! ಎಂದು ಮೌನಧರಿಸಿ ಮೂಗಿನಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯಪಡುತ್ತ ದುಃಖಿತರಾದರು.

214. ಅಲ್ಲಿ - ಆ ಸ್ವಯಂವರಮಂಟಪದಲ್ಲಿ, ನಿಸ್ಸಾಳತತಿ= ನಿಸ್ಸಾಳ - ನಗಾರಿಗಳ, ತತಿ-ಸಮೂಹವು, ಹೆಕ್ಕಳದ - ಅತಿಶಯವಾದ, ಬೆರ್ಚಿನೊಳು-ಆಧಿಕ್ಯದಿಂದ (ಹೆಚ್ಚಿಗೆಯಿಂದ), (೧) ಮೊಳಗಿದುವು-ಧ್ವನಿಮಾಡಲ್ಪಟ್ಟುವ; ದಿವಿಜಾವಳಿಯ-ದೇವತೆಗಳ ಸಮೂಹದ, ದುಂದುಭಿರವದಲಿ-ನಗಾರಿಗಳ ಧ್ವನಿಯೊಡನೆ ಕೂಡಿದ, ಉಬ್ಬಿದ_ಹೆಚ್ಚಾದ, ಸಾಧುವಾದಗಳು-ಸಾಧು ಸಾಧು ಎಂಬ ಮಾತುಗಳು (ಅಂದರೆ ಚೆನ್ನಾಯಿತು ಚೆನ್ನಾಯಿತು ಎಂಬ ಮಾತುಗಳು), + ವ್ಯಾಪಿಸಿದುವು.

ಸರಳತಾತ್ಪರ್ಯ ||—ಅತ್ಯಧಿಕವಾಗಿ ಭೇರಿಯನ್ನು ಹೊಡೆದರು. ದೇವತೆಗಳೂ ಭೇರಿಯನ್ನು ಹೊಡೆದು ಸಾಧು ಸಾಧು ಎಂದು ಅರ್ಜುನನನ್ನು ಹೊಗಳಿದರು.

ವಿ|| (೧) ನಿಸ್ಸಾಳತತಿ, ಎನ್ನುವುದು ಏಕವಚನಕರ್ತೃವಾದರೂ ಜಾತಿವಾಚಕವಾದುದರಿಂದ ಈ ಕ್ರಿಯಾಪದವು ಬಹುವಚನವಾಗಿದೆ.

215. ಆಗಳ್-ತತ್‌ಕ್ಷಣದಲ್ಲಿಯೇ, ನಳಿನಮುಖಿ-ತಾವರೆಹೂವಿನಂತೆ ಮುಖವುಳ್ಳ ದ್ರೌಪದಿಯು, ಕಳಕಳದೊಳ್_ಸಖಿಯರ ಗದ್ದಲದಿಂದ ಕೂಡಿ, ದಂಡಿಗೆಯೊಳ್-ಪಲ್ಲಕ್ಕಿಯಲ್ಲಿ ಕುಳಿತು, ಐತಂದು-ಬಂದು, ಈತನ-ಈ ಅರ್ಜುನನ, ಹೊರೆಯೊಳ್ - ಸಮೀಪದಲ್ಲಿ, ಇಳಿದಳು-ಕೆಳಗೆ ಇಳಿದಳು;+ ದ್ರೌಪದಿಯ, ಹರುಷಲಜ್ಜೆಯಲಿ-ಸಂತೋಷ ಮತ್ತು ನಾಚಿಕೆ ಇವೆರಡರಲ್ಲಿ, (೧) ಬಳತೋಟಿ_ಅಂತಃಕಲಹವು, ಮಸಗಿತು-ಹೆಚ್ಚಾಯಿತು! ದ್ರೌಪದಿಯ, ಕಂಗಳು-ಕಣ್ಣುಗಳು, (೨) ಲಲಿತಮಧುರಾಪಾಂಗದಲಿ= ಲಲಿತ_ಸೊಗಸಾದ, ಮಧುರ_ಇಂಪಾದ, ಅಪಾಂಗದಲಿ-ಕಡೆಗಣ್ಣು ನೋಟದಿಂದ, + ಅರ್ಜುನನನ್ನು, ಮುಕ್ಕುಳಿಸಿ - ಕುಡಿದು, ತಣಿಯುವು-ತೃಪ್ತಿ ಹೊಂದಲಿಲ್ಲ, ನಿತಂಬನಿಯ - ಆ ದ್ರೌಪದಿಯ, ಮೈ-ಶರೀರವು, ಉಬ್ಬಿದ-

ಹೆಚ್ಚಾದ, ಪುಳಕಜಲದಲಿ – ಪುಳಕ- ರೋಮಾಂಚವೆಂಬ (ಕೂದಲು ನೆಟ್ಟಗಾಗುವಿಕೆಯೆಂಬ), ಜಲದಲಿ – ನೀರಿನಲ್ಲಿ, ಮುಳುಗಿ – ಮಗ್ನವಾಗಿ, ಮೂಡಿತು–ಕಾಣಿಸಿಕೊಂಡಿತು.

ಭಾವಾರ್ಥ || ಬಳತೊಟ್ಟಮುಗಿತುಹರುಷಲಜ್ಜೆಯಲಿ–ದ್ರೌಪದಿಯು ಸಂತೋಷವೂ ನಾಚಿಕೆಯೂ ಬಂದರೆಡೆಸೆ ಬಂದು ಜೋಡಾದ ತೋಡಗಿದುವು (ಎಂದರೆ ದ್ರೌಪದಿಗೆ ಸಂತೋಷವೂ ನಾಚಿಕೆಯೂ ಏಕಕಾಲದಲ್ಲಿ ಉಂಟಾದುವು). ಲಲಿತ ಮಧುರಾಪಾಂಗದಲಿ ಮುಕ್ಕುಳಿಸಿತಣಿಯುವುಕಂಗಳು–ದ್ರೌಪದಿಯು ಅರ್ಜುನನನ್ನು ಸೊಗಸಾದ ಇಂಪಾದ ಕಡೆಗಣ್ಣ ನೋಟದಿಂದ ಎಷ್ಟು ನೋಡಿದರೂ ಸಾಕಾಗಲಿಲ್ಲ. ಉಬ್ಬಿದ ಪುಳಕಜಲದಲಿ ಮೂಡಿ ಮುಳುಗಿತು ಮೈನಿತಂಬಿನಿಯು–ದ್ರೌಪದಿಯು ಶರೀರದಲ್ಲಿ ಅತ್ಯಧಿಕವಾಗಿ ರೋಮಾಂಚವುಂಟಾಯಿತು.

ಸರಳತಾತ್ಪರ್ಯ||—ದ್ರೌಪದಿಯು ಸಖಿಯರು ಕೂಗಿ ದಾರಿ ಬಿಡಿಸುತ್ತಿರಲು ಪಲ್ಲಕ್ಕಿಯಲ್ಲಿ ಕುಳಿತು ಅರ್ಜುನನ ಹತ್ತಿರದಲ್ಲಿ ಬಂದು ಇಳಿದಳು. ಅರ್ಜುನನನ್ನು ನೋಡುತ್ತಲೇ ದ್ರೌಪದಿಗೆ ಸಂತೋಷವೂ ನಾಚಿಕೆಯೂ ಏಕಕಾಲದಲ್ಲಿ ಉಂಟಾದುವು. ಬಳಿಕ ದ್ರೌಪದಿಯು ಅರ್ಜುನನನ್ನು ಸೊಗಸಾಗಿ ಇಂಪಾದ ಕಡೆಗಣ್ಣನೋಟದಿಂದ ಎಷ್ಟು ನೋಡಿದರೂ ಸಾಕಾಗಲಿಲ್ಲ. ಅರ್ಜುನನನ್ನು ನೋಡುತ್ತ ದ್ರೌಪದಿಯ ಮೈಯಲ್ಲಿ ಕೂದಲು ಬಹುವಾಗಿ ಉಬ್ಬಿಕೊಂಡಿತು.

ಪ|| (೧) ಬಳಗಣತೊಟ್ಟ (ಕ. ಷ. ತ.) ತತ್ಪುರುಷದಲ್ಲಿ ಪೂರ್ವಪದದ ಅಂತ್ಯಾಕ್ಷರವಾದ ಗು ಎಂಬುದಕ್ಕೆ ಲೋಪ ಬಂದಿದೆ. (೨) ಲಲಿತ ಮಧುರ (ವಿ. ಭ) ಮಧುರ ಅಪಾಂಗ (ವಿ. ಪೂ.)

216. ಸುರಸ್ತೋಮ–ದೇವತೆಗಳ ಸಮೂಹವು, ಜಯಂ–ವಿಜಯವಾಗಲಿ, ಎನೆ–ಎನ್ನುತ್ತಿರಲಾಗಿ, ತರುಣಿ–ದ್ರೌಪದಿಯು, ನಿಜತನುಪರಿಮಳದೊಳು—ನಿಜ–ತನ್ನ, ತನು–ಶರೀರದ, ಪರಿಮಳದೊಳು–ಸುವಾಸನೆಯಿಂದ, ಉರೆ–ಬಹಳವಾಗಿ, ಹೊರೆದ–ವ್ಯಾಪ್ತವಾದ, ಹೂವಿನ ದಂಡೆಯನು–ಪುಷ್ಪದ ಬತ್ತುಸರವನ್ನು, ನಿಜವರನ–ತನ್ನ ಪತಿಯಾದ ಅರ್ಜುನನ, ಕೊರಳಲಿ–ಕಂಠದಲ್ಲಿ, ಹಾಕಿದಳು–ಇಟ್ಟಳು. (ದ್ರೌಪದಿಯು ತಾನು ಕೈಯಲ್ಲಿ ಹಿಡಿದುದರಿಂದ ತನ್ನ ಶರೀರದ ಸುವಾಸನೆ ಹರಡಿಕೊಂಡಿರುವ ಹೂವಿನ ದಂಡೆಯುಸರವನ್ನು ತನ್ನ ಪತಿಯ ಕೊರಳಿಗೆ ಹಾಕಿದಳು ಎಂದು ತಾತ್ಪರ್ಯ.)

ತ್ರೊರವೆ ರಾಮಾಯಣ.

೨೩. ಶ್ರೀರಾಮನು ವನವಾಸಕ್ಕಾಗಿ ಅಯೋಧ್ಯೆಯನ್ನು ಬಿಟ್ಟು ಹೊರಡುವಿಕೆ.

ಹಿಂದಣ ಕಥಾಸಂದರ್ಭ॥—ಸೂರ್ಯನಿಂದ ಹುಟ್ಟಿದ ಮನುಚಕ್ರವರ್ತಿಯ ವಂಶಪರಂಪರೆಯಲ್ಲಿ ದಶರಥಮಹಾರಾಜನು ಜನಿಸಿ ಸುಮಂತ್ರನೆಂಬ ಮಂತ್ರಿಯೊಡಗೂಡಿ ಅಯೋಧ್ಯಾಪಟ್ಟಣದಲ್ಲಿ ಆಳುತ್ತಿದ್ದನು. ಆತನಿಗೆ ಕೌಸಲ್ಯೆ, ಸುಮಿತ್ರೆ, ಕೈಕೆ ಎಂಬ ಮೂವರು ಹೆಂಡತಿಯರಿದ್ದರು. ಹೀಗಿರುವಲ್ಲಿ ಆ ದಶರಥರಾಜನು ಶಂಬರಾಸುರನಿಂದ ಪೀಡಿಸಲ್ಪಟ್ಟ ದೇವೇಂದ್ರನಿಂದ ಪ್ರಾರ್ಥಿತನಾಗಿ ಆತನ ಸಹಾಯಕ್ಕೆ ಯುದ್ಧಸನ್ನಾಹದಿಂದ ಕೂಡಿ ತನ್ನ ಪ್ರಿಯಪತ್ನಿಯಾದ ಕೈಕೆಯನ್ನೂ ಕರೆದುಕೊಂಡು, ಅಮರಾವತಿಗೆ ಹೋಗಿ ಶಂಬರಾಸುರನೊಡನೆ ಯುದ್ಧಮಾಡುವಾಗ ತನ್ನ ರಥದ ಗಾಲಿಯು ಮುರಿಯಲಾಗಿ, ಕೈಕೆಯು ಮುರಿದ ಗಾಲಿಗೆ ತನ್ನ ಕೈಯನ್ನು ಊರೆಯಾಗಿ ಕೊಟ್ಟಳು. ದಶರಥರಾಜನು ಮೆಚ್ಚಿ ನಿನಗೆ ಬೇಕಾದ ಎರಡು ವರಗಳನ್ನು ಕೇಳೆನ್ನಲು, ಆ ಕೈಕೆಯು ಸಮಯ ಬಂದಾಗ ಕೇಳುವೆನೆಂದು ಹೇಳಿಕೊಂಡಳು. ಆಮೇಲೆ ದಶರಥರಾಜನು ವಿಜಯೋತ್ಸವದಿಂದ ಪಟ್ಟಣಕ್ಕೆ ಬಂದು ಸೇರಿದನು.

ಈ ದಶಥರಾಜನ ಜ್ಯೇಷ್ಠಪತ್ನಿಯಾದ ಕೌಸಲ್ಯೆಯಲ್ಲಿ ಶ್ರೀಮನ್ನಾರಾಯಣನು ರಾಮನಾಗಿ ಅವತರಿಸಿದನು. ಸುಮಿತ್ರೆಯಲ್ಲಿ ಲಕ್ಷ್ಮಣ, ಶತ್ರುಘ್ನ ಎಂಬಿಬ್ಬರು ಮಕ್ಕಳೂ, ಕೈಕೆಯಲ್ಲಿ ಭರತನೆಂಬ ಪುತ್ರನೂ ಹುಟ್ಟಿದರು. ಶ್ರೀರಾಮನು ವಿಶ್ವಾಮಿತ್ರ ಮುನಿಯೊಡನೆ ಹೋಗಿ ಆತನ ಯಾಗವನ್ನು ರಕ್ಷಿಸಿ ಜನಕರಾಜನ ಮಿಥಿಲಾಪಟ್ಟಣಕ್ಕೆ ಬಂದು ಅಲ್ಲಿ ಈಶ್ವರನ ಧನುಸ್ಸನ್ನು ಮುರಿಯಲು, ಜನಕರಾಜನು ತನಗೆ ಯಾಗಭೂಮಿಯಲ್ಲಿ ಸಿಕ್ಕಿದ ಮಗಳೆಂದು ಕಾಪಾಡಿದ ಸೀತಾದೇವಿಯನ್ನು ಶ್ರೀರಾಮನಿಗೆ ಕೊಟ್ಟು ವಿವಾಹಮಾಡಿ, ಲಕ್ಷ್ಮಣನಿಗೆ ಔರಸಪುತ್ರಿಯಾದ ಊರ್ಮಿಳೆಯನ್ನು ಕೊಟ್ಟು ಮದುವೆಮಾಡಿ ಭರತನಿಗೆ ತನ್ನ ತಮ್ಮನಾದ ಕುಶಧ್ವಜನ ಮಗಳಾದ ಮಾಂಡವಿಯನ್ನೂ, ಶತ್ರುಘ್ನನಿಗೆ ಮಾಂಡವಿಯ ತಂಗಿಯಾದ ಶ್ರುತಕೀರ್ತಿಯನ್ನೂ ಕೊಡಿಸಿ ವಿವಾಹ ಮಾಡಿಸಿದನು.

ಅನಂತರ ದಶರಥರಾಜನು ಬಹುಸಂತೋಷದಿಂದಿರುತ್ತ ತಾನು ವೃದ್ಧನಾದುದರಿಂದ ಪ್ರಾಪ್ತವಯಸ್ಕನಾದ ಶ್ರೀರಾಮಚಂದ್ರನಿಗೆ ಪಟ್ಟಾಭಿ

ಷೇಕವನ್ನು ಮಾಡಬೇಕೆಂದು ನೆನೆದು ಮಂತ್ರಿಗಳೊಡನೆ ಆಲೋಚಿಸಿ ಮುಹೂರ್ತವನ್ನಿಡಿಸಿದನು. ಬಳಿಕ ರಾಜಾಜ್ಞೆಯಿಂದ ಪಟ್ಟಣವನ್ನಲಂಕರಿಸಿದರು. ಪುರೋಹಿತರಾದ ವಸಿಷ್ಠರು ಶ್ರೀರಾಮನಿಗೆ ಮಂಗಳಸೂತ್ರವನ್ನು ಕಟ್ಟಿದರು. ಇತ್ತ ಕೈಕೆಯು ಮಂಥರೆಯೆಂಬ ತನ್ನ ದಾದಿಯ ದುರ್ಬೋಧನೆಗಳನ್ನು ಕೇಳಿ ತನ್ನ ಸವತಿಯ ಮಗನಾದ ಶ್ರೀರಾಮನಿಗೆ ಪಟ್ಟವಾಗುವುದನ್ನು ಸಹಿಸದೆ ತನ್ನ ಪತಿಯಾದ ದಶರಥಮಹಾರಾಜನನ್ನು ಕುರಿತು, ಪೂರ್ವದಲ್ಲಿ ನೀನು ಎರಡು ವರಗಳನ್ನು ಕೊಟ್ಟಿರುವೆಯಷ್ಟೆ! ನೀನು ಸತ್ಯಸಂಧನಾದರೆ ನನ್ನ ಮಗನಾದ ಭರತನಿಗೆ ಪಟ್ಟಾಭಿಷೇಕ ಮಾಡುವುದು ಒಂದು ವರ;ಶ್ರೀರಾಮನನ್ನು ವನವಾಸಕ್ಕೆ ಕಳುಹಿಸುವುದು ಒಂದು ವರ— ಈ ಎರಡು ವರಗಳನ್ನೂ ಈಗ ಸಮಯವಾದುದರಿಂದ ಪಾಲಿಸಬೇಕು, ಎಂದಳು. ದಶರಥರಾಜನು ಕೇಳಿ ಝುಗ್ಗನೆ ಇಳಿದು ಹೋಗಿ ಬಹು ದುಃಖದಲ್ಲಿ ಮುಳುಗಿದನು. ಕೈಕೆಯು ವಿಘ್ನಮಾಡಿದ ವೃತ್ತಾಂತವು ಪುರದಲ್ಲೆಲ್ಲಾ ಹರಡಿಕೊಂಡಿತು. ಮಂತ್ರಿಗಳು ಕೇಳಿ, ಯೋಚಿಸಿ, ರಾಜನ ಅಭಿಪ್ರಾಯವನ್ನು ತಿಳಿಯಲು ರಾಮನನ್ನು ಉತ್ಸವದಿಂದ ದಶರಥನ ಬಳಿಗೆ ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿ, ಉತ್ಸಾಹಭೇರಿಗಳನ್ನು ಅರಮನೆಯಲ್ಲಿ ಹೊಡಿಸಿದರು. ಪುರದಲ್ಲಿ ನೆಗಳದ್ದ ವೃತ್ತಾಂತವನ್ನಡಗಿಸಿದರು. ಪಟ್ಟಾಭಿಷೇಕ ಮಂಟಪವನ್ನು ಅಲಂಕರಿಸುವಂತೆ ಆಜ್ಞಾಪಿಸಿದರು.

215. ಕುಶನೆ-ಎಲೈ ಕುಶನೇ ! ಕೇಳ್-ಕೇಳು, ಪಟ್ಟಾಭಿಷೇಕದ-ದೊರೆತನದ ಅಭಿಷೇಕದ, ವಸತಿ-ಮಂಟಪವು, ಶೃಂಗಾರಿಸಿತು-ಅಲಂಕರಿಸಲ್ಪಟ್ಟಿತು; (೧) ಹೊಸಪರಿಯ-ಹೊಸರೀತಿಯಾದ, ನೃಪ......ಚಯ— ನೃಪಲಾಂಛನ-ಛತ್ರ ಚಾಮರ ಮೊದಲಾದ ರಾಜಚಿಹ್ನೆಗಳೇ, ಆದಿ-ಮೊದಲಾದ, ವಸ್ತು-ಪಟ್ಟಾಭಿಷೇಕಪದಾರ್ಥಗಳ, ಚಯ-ಸಮೂಹಗಳು, ನೆರೆದುವು-ತುಂಬಿಕೊಂಡುವು; ಬಸಗೆ-ಮಂಗಳವು, ತತ್ಪುರವರನಂ-ಆ ಶ್ರೇಷ್ಠ ಪಟ್ಟಣವಾದ ಅಯೋಧ್ಯೆಯನ್ನು, ಅವಲಂಬಿಸಿತು-ಆಶ್ರಯಿಸಿತು; ಮುನಿ-ವಸಿಷ್ಠಋಷಿಯು, ನಿಮಿಷದಲಿ-ಒಂದು ನಿಮಿಷಕಾಲದಲ್ಲಿ, ಆ ಸುಮಂತ್ರನ-ಮಂತ್ರಿಯಾದ ಆ ಸುಮಂತ್ರನನ್ನು, ದಶರಥನ-ದಶರಥ ಮಹಾರಾಜನ, ಬಳಿಗೆ-ಸಮೀಪಕ್ಕೆ, ಅಟ್ಟ-ಕಳುಹಿಸಿ, ರಾಮನ-ಶ್ರೀರಾಮ ಚಂದ್ರನ, ಬಳಿಗೆ-ಸಮೀಪಕ್ಕೆ, ಬಂದ-ಬಂದನು.

ಭಾವಾರ್ಥ||—ಬಗೆಗೆತ್ತಪ್ಪುದವರವನವಲಂಬಿಸಿತು—ಆ ಶ್ರೇಷ್ಠ ಪಟ್ಟಣವಾದ ಅಯೋಧ್ಯೆಯು ಮಂಗಳಕರವಾಗಿದ್ದಿತು.

ಟಿಪ್ಪಣಿ||—ಶಾಸ್ತ್ರೋಕ್ತವಾಗಿ ಹಣೆಗೆ ಪಟ್ಟವನ್ನು ಕಟ್ಟಿ ಪುಣ್ಯ ನದಿಗಳ ಜಲದಿಂದಲೂ, ಓಷಧಿಗಳ ರಸದಿಂದಲೂ ಸ್ನಾನಮಾಡಿಸುವುದಕ್ಕೆ "ಪಟ್ಟಾಭಿಷೇಕ" ವೆಂದು ಹೆಸರು.

ವಿ||—(೧) ಹೊಸದು+ಪರಿ (ಕ. ವಿ. ಪೂ.)

ಟಿಪ್ಪಣಿ||—ರಾಮಾಯಣವನ್ನು ವಾಲ್ಮೀಕಿಮುನೀಂದ್ರನು ರಾಮನ ಮಕ್ಕಳಾದ ಲವ, ಕುಶ ಎಂಬಿಬ್ಬರಿಗೂ ಹೇಳಿದನು.

ಹೇಳುವುದಕ್ಕೆ ಕಾರಣ:—ಶ್ರೀರಾಮನು ಒಂದಾನೊಂದು ಕಾರಣ ದಿಂದ, ಏಳು ತಿಂಗಳ ಗರ್ಭಿಣಿಯಾದ ಸೀತಾದೇವಿಯನ್ನು ಲಕ್ಷ್ಮಣ ನೊಡನೆ ಅರಣ್ಯಕ್ಕೆ ಕಳುಹಿಸಿದನು. ಅರಣ್ಯದಲ್ಲಿ ವಾಲ್ಮೀಕಿಋಷಿಯು ಈ ಸೀತಾದೇವಿಯನ್ನು ಕಂಡು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ ಪೋಷಿಸುತ್ತಿರಲು ಸೀತಾದೇವಿಯು ನವಮಾಸ ತುಂಬಿ ಇಬ್ಬರು ಕುಮಾರಕರನ್ನು ಪಡೆದಳು. ಆ ಬಾಲಕರಿಗೆ ವಾಲ್ಮೀಕಿಯು ಲವ, ಕುಶ ಎಂದು ಹೆಸರಿಟ್ಟು ಸಕಲವಿದ್ಯಾಭ್ಯಾಸವನ್ನೂಮಾಡಿಸಿ ಶಸ್ತ್ರವಿದ್ಯೆಯನ್ನೂ ಚೆನ್ನಾಗಿ ಕಲಿಸಿದನು. ಹೀಗಿರಲು ಒಂದುದಿವಸ ಆ ಬಾಲಕರು ವಾಲ್ಮೀಕಿ ಯನ್ನು ಕುರಿತು ಮುನಿನಾಥನೇ! ನಮ್ಮನ್ನು ಪಡೆದ ತಂದೆಯು ಯಾರು? ನಮ್ಮ ವಂಶವು ಯಾವುದು? ಎಂದು ಕೇಳಿದರು. ಆಗ ವಾಲ್ಮೀಕಿ ಋಷಿ ವರನು ರಾಮಾಯಣಕಥೆಯನ್ನು ಲವ, ಕುಶರಿಗೆ ಬೋಧಿಸಿದನು.

216. ರಘುನಂದನನು-ಶ್ರೀರಾಮನು, ಬಂದ, ಮುನಿಪನ-ವಸಿಷ್ಠ ನೆಂಬ ಮುನಿಶ್ರೇಷ್ಠನನ್ನು, ಭಕ್ತಿಪೂರ್ವಕದಿಂದ-ಭಕ್ತಿಯನ್ನು ಮುಂದಿ ಟ್ಟುಕೊಂಡು, (ಭಕ್ತಿಯನ್ನು ತೋರಿಸುತ್ತ), ವಿಧಿ....ವಿಧಾನದಲಿ=ವಿಧಿ-ಶಾಸ್ತ್ರದಲ್ಲಿ, ವಿಹಿತ-ಹೇಳಲ್ಪಟ್ಟ, ಗುರುಪೂಜಾ-ದೊಡ್ಡವರನ್ನು ಪೂಜಿಸ ತಕ್ಕ, ವಿಧಾನದಲಿ-ಕ್ರಮದಿಂದ, ಸತ್ಕರಿಸಿದನು ಅಲ್ಲ-ಉಪಚರಿಸಿದನು ಅಲ್ಲವೇ? ಅರವಿಂದಮುಖಿಸಹಿತ-ತಾವರೆಹೂವಿನಂತೆ ಮುಖವುಳ್ಳ ಸೀತೆ ಯೊಡನೆ, ಎಮಗೆ-ನಮಗೆ, ಕಾನನದೊಳು-ಅರಣ್ಯದಲ್ಲಿ, ಪರಿಭ್ರಮಣ-ಸುತ್ತುವಿಕೆಯು, ಸಂಭವಿಸಿತು - ಪ್ರಾಪ್ತವಾಯಿತು, ಎಂಬ, ಇದು ಒಂದು-ಈ ಒಂದು, ಕನಸನು-ಸ್ವಪ್ನವನ್ನು, ಕಂಡೆನು-ನೋಡಿದೆನು; +

ಎಂದು, ಆ ಮುನಿಪತಿಗೆ-ಋಷಿಶ್ರೇಷ್ಠನಾದ ಆ ವಸಿಷ್ಠನಿಗೆ, ಎಂದಸು-ಹೇಳಿದನು (ರಾಮನು ಸೀತೆಯೊಡನೆ ಅರಣ್ಯದಲ್ಲಿ ಸಂಚರಿಸುವಹಾಗೆ ಸ್ವಪ್ನ ಕಂಡೆನು ಎಂದು ಹೇಳಿದನು).

217. ಅನಿತರಲಿ-ಅಷ್ಟರಲ್ಲಿಯೇ, (೧) ಕಂದೆರೆದೆನು-ಕಣ್ಣನ್ನು ಬಿಟ್ಟೆನು; ಇದು-ಈ ಸ್ವಪ್ನವು, ಮನಕೆ-ಮನಸ್ಸಿಗೆ, ಏನು-ಸ್ವಲವೂ, ಚೆಂದವಾಗಿರದು-ಸಂತೋಷಕರವಾಗಿ ಇರುವುದಿಲ್ಲ; ಮುಂದೆ-ಮುಂದಕ್ಕೆ, ರಾಜ್ಯಸಂಪದದ-ರಾಜ್ಯಸಂಪತ್ತಿನ, ಆಗಮುಸ್ಥಿತಿಗೆ - ಪಟ್ಟಾಭಿಷೇಕಶಾಸ್ತ್ರ ವಿಧಾನಕ್ಕೆ, ನೀವು, ಏನೆಂದುಕಂಡಿರಿ-ಯಾವರೀತಿಯಾಗುವುದೆಂದು ತಿಳಿದಿದ್ದೀರಿ? ಎನಲು-ಎನ್ನಲಾಗಿ, ಮುನಿನಾಥ-ವಸಿಷ್ಠಮುನೀಂದ್ರನು, ಮಗುಳ್-ಮತ್ತೆ, ಇಂತು ಎಂದಂ-ಹೀಗೆ ಹೇಳಿದನು, ನಿನಗೆ, ಆಯಸ-ಶ್ರಮವು, ತೋರಿ-ಉಂಟಾಗಿ, ಬಳಿಕ-ಆಮೇಲೆ, ಪುರಂದರನ-ದೇವೇಂದ್ರನ, ವೈಭವದ-ಸಂಪತ್ತಿಗೆ, (೨) ಸರಿಸಿರಿ-ಸಮಾನವಾದ ಸಂಪತ್ತು, ಅಹುದು-ಪ್ರಾಪ್ತವಾಗುವುದು, ಎಂದ-ಎಂದನು.

ಸರಳತಾತ್ಪರ್ಯ ॥ ಹಾಗೆ ಸ್ವಪ್ನವನ್ನು ಕಂಡು ತತ್‌ಕ್ಷಣ ಕಣ್ಣು ಬಿಟ್ಟೆನು. ಈ ಸ್ವಪ್ನವು ಮನಸ್ಸಿಗೆ ಸಂತೋಷಕರವಾಗಿಲ್ಲ. ನನಗೆ ಮುಂದೆ ರಾಜ್ಯ ಪಟ್ಟಾಭಿಷೇಕಶಾಸ್ತ್ರವು ನಡೆವುದರ ವಿಷಯದಲ್ಲಿ ನಿಮಗೇನು ತೋರುತ್ತದೆ ? ಎನ್ನಲು ವಸಿಷ್ಠಮುನೀಂದ್ರನು, ನಿನಗೆ ಶ್ರಮವುಂಟಾಗಿ ಬಳಿಕ ಇಂದ್ರನಂತೆ ಸಂಪತ್ತು ಉಂಟಾಗುವುದು, ಎಂದನು.

ವಿ॥—(೧) ಕಣ್ದೆರೆದೆನು (ಕ್ರಿ.) (೨) ವಿ. ಪೂ. (ಅರಿ. ಸ.)

218. (೧) ಬೊಮ್ಮ........ಪ್ರಭಾಕರಂ = ಬೊಮ್ಮಕೋಟಿ-, ಕೋಟಿಜನಬ್ರಹ್ಮರ, ಕಿರೀಟ-ಕಿರೀಟಗಳಿಂದ, ಮಂಡಿತ-ಅಲಂಕರಿಸಲ್ಪಟ್ಟ ನಿರ್ಮಳ-ಪರಿಶುದ್ಧವಾದ, ಅಂಘ್ರಿ-ಪಾದದ, ನಖ-ಉಗುರೆಂಬ, ಪ್ರಭಾಕರಂ - ಸೂರ್ಯವುಳ್ಳವನಾದ ಶ್ರೀರಾಮನು, ನಿಮ್ಮ, ಕರುಣಾಕಟಾಕ್ಷ ರಕ್ಷಣೆ = ಕರುಣಾ-ಕೃಪೆಯಿಂದ ಕೂಡಿದ, ಕಟಾಕ್ಷ-ಕಡೆಗಣ್ಣೋಟದಿಂದ, ರಕ್ಷಣೆ-ಕಾಪಾಡುವಿಕೆಯು, ಎಮ್ಮಮೇಲೆ-ನಮ್ಮ ವಿಷಯದಲ್ಲಿ, ಇರಲು-ಇರಲಾಗಿ, ಆವದುರ್ಘಟಂ-ಯಾವಕೇಡುಕು, ಎಮ್ಮ-ನಮ್ಮನ್ನು, ಏನು ಮಾಡುವುದು - ಏನುಮಾಡುತ್ತೆ ? ನಾವ್ - ನಾವು, (೧) ನಿರ್ದೈವರೇ-ದೈವಸಹಾಯವಿಲ್ಲದವರೇ ? ಎನುತ-ಎನ್ನುತ್ತ, ನರರವೊಲು-ಮನು

ಷ್ಯರಹಾಗೆ (ಅಂದರೆ ತಾನು ನಾರಾಯಣನಾದಾಗ್ಗೂ ಮನುಷ್ಯರಂತೆ ನಟನೆ ಮಾಡಬೇಕೆಂದು), ಆ ಮುನೀಂದ್ರಂಗೆ - ಆ ವಸಿಷ್ಠಋಷೀಶ್ವರನಿಗೆ, ಉಮ್ಮಹದೊಳು-ಸಂತೋಷದಿಂದ, ಎರಗಿದನು-ನಮಸ್ಕರಿಸಿದನು.

ಭಾವಾರ್ಥ॥ ಬೊಮ್ಮಕೋಟಿ....ಪ್ರಭಾಕರನು-ಅನೇಕ ಬ್ರಹ್ಮರಿಂದ ನಮಸ್ಕಾರ ಮಾಡಿಸಿಕೊಳ್ಳತಕ್ಕ ವಿಷ್ಣುವಿನ ಅವತಾರವಾದ ರಾಮನು.

ವಿ॥ (೧) ಬೊಮ್ಮರಕೋಟಿ....(ಷ. ತ.) ಅರಿ ಸ॥ ಕೋಟಿಯ ಕಿರೀಟಗಳು (ಷ. ತ.) ಕಿರೀಟಗಳಿಂದ ಮಂಡಿತ (ತೃ. ತ.) ಮಳವಿಲ್ಲದ್ದು ನಿರ್ಮಳ (ನ. ಬ. ವ್ರೀ.) ನಿರ್ಮಳವಾದ ಅಂಘ್ರಿ (ವಿ. ಪೂ) ಅಂಘ್ರಿಯ ನಖ (ಷ. ತ.) ನಖವೆಂಬ ಪ್ರಭಾಕರ (ಅ. ಪೂ) ಮಂಡಿತವಾದ ನಿ.... ಪ್ರಭಾಕರವುಳ್ಳವನು (ಬ.ವ್ರೀ.) (೨) ದೈವವಿಲ್ಲದವರು (ನ. ಬ. ವ್ರೀ.)

219. ಅರಸಂ ಆಗು_ದೊರೆಯಾಗು! ಅಧಿರಾಜಂ ಆಗು-ರಾಜನಿಗೆ ರಾಜನಾಗು (ಅಂದರೆ ಚಕ್ರವರ್ತಿಯಾಗು)! ಉರ್ವರೆಗೆ-ಸಮಸ್ತ ಸಸ್ಯಗಳಿಂದ ಕೂಡಿದ ಭೂಮಿಗೆ, ಪತಿಯಾಗು-ಪ್ರಭುವಾಗು! ಅಖಿಳಸೂನೃತಚರಿತಂ ಆಗು=ಅಖಿಳ_ಸಮಸ್ತವಾದ, ಸೂನೃತ_ಸತ್ಯಪ್ರಿಯವಾದ, ಚರಿತಂ ಆಗು_ಸ್ವಭಾವವುಳ್ಳವನಾಗು! ಅರಿವಿಜಯಂ ಆಗು-ಶತ್ರುಗಳನ್ನು ಗೆಲ್ಲುವವನಾಗು! (೧) ಸಮಸ್ತಸುಜನರಿಗೆ-ಎಲ್ಲಾ ಸಜನರಿಗೂ, ಸುರಮಹೀರುಹಂ-ಕಲ್ಪವೃಕ್ಷಪ್ರಾಯನಾದವನು, ಆಗು! ಲಕ್ಷ್ಮೀವರನವೊಲು_ಶ್ರೀಮನ್ನಾರಾಯಣನ ಹಾಗೆ, ಸಾದ್ಗುಣ್ಯ....ಯುತಂ=(೧) ಸಾದ್ಗುಣ್ಯ-ಸುಗುಣಿತನವು, ಸಕಲ_ಸಮಸ್ತವಾದ, ಐಶ್ವರಿಯ-ಸಂಪತ್ತು ಇವುಗಳಿಂದ, ಯುತಂ-ಕೂಡಿದವನು, ಆಗು! ಎಂದು,ಮುನಿ_ವಸಿಷ್ಠಋಷಿಯು, ಹರುಷದಲಿ-ಸಂತೋಷದಿಂದ, ಹರಸಿದನು-ಆಶೀರ್ವಾದ ಮಾಡಿದನು.

ಭಾವಾರ್ಥ॥ ಸಮಸ್ತಸುಜನರಿಗೆ ಸುರಮಹೀರುಹನಾಗು_-ಸಜ್ಜನರಿಗೆಲ್ಲ ಕಲ್ಪವೃಕ್ಷದಂತೆ ಇಷ್ಟಾರ್ಥಗಳನ್ನು ಕೊಡು.

ವಿ॥(೧) ಸತ್‌ಗುಣಗಳುಳ್ಳವನು (ಬ. ವ್ರೀ.) ಸದ್ಗುಣನಭಾವಂ= ಸಾದ್ಗುಣ್ಯಂ (ತದ್ಧಿತಭಾವನಾಮ).

220. ಆ ಮುನಿಪ_ಆ ವಸಿಷ್ಠಮುನೀಂದ್ರನು, ಬಿಸರುಹಪ್ರಿಯಕುಲದ=ಬಿಸರುಹಪ್ರಿಯ_ಸೂರ್ಯನ, ಕುಲದ_ವಂಶದಲ್ಲಿ ಹುಟ್ಟಿದವನಾದ, ಮುನಿಮಾನಸಸರೋವರರಾಜಹಂಸನಂ= ಮುನಿ-ಋಷಿಗಳ, ಮಾನಸ-

ಮನಸ್ಸೆಂಬ,ಸರೋವರ-ಕೊಳಕ್ಕೆ, ರಾಜಹಂಸನಂ-ರಾಜಹಂಸಪಕ್ಷಿಯಂತಿರುವವನಾದ ರಾಮನನ್ನು, ಬಸೆದು-ಪ್ರೀತಿಸಿ,ಮಂಗಳಮಜ್ಜನವ-ಮಂಗಳಸ್ನಾನವನ್ನು,ಮಾಡಿಸಿದನು;(೧)ಬಸೆಗೆವರೆ-ಮಂಗಳವಾದ್ಯವು, ಘುಲ್ಲೈಸೆ-ಧ್ವನಿಮಾಡಲು, +ರಾಮನು, ನೂತನ....ಣಂಗಳೊಳ್=ನೂತನ-ಹೊಸದಾದ, ವಸನ-ಬಟ್ಟೆಗಳು, ದಿವ್ಯ-ಸೊಗಸಾದ, ವಿಭೂಷಣಂಗಳೊಳ್-ಒಡವೆಗಳು ಇವುಗಳಿಂದಕೂಡಿ, ಮೂರ್ಧ-ಅಭಿಷೇಕದ-ತಲೆಯಲ್ಲಿ ಪುಣ್ಯನದೀತೀರ್ಥವನ್ನುಎರೆಯುವುದರ (ಅಂದರೆ ಪಟ್ಟಾಭಿಷೇಕಕಾಲದಲ್ಲಿಯು), ರಾಜತೇಜದಲಿ-ರಾಜತೇಜಸ್ಸಿನಿಂದ, ಎಸೆದೆನ್ಯೆ-ಪ್ರಕಾಶಿಸಿದನು.

ವಿ|| ಬಸಗೆಯ-ಮಂಗಳದ, ಪರೆ-ವಾದ್ಯ,(ಕ. ಷ. ತ). ಈ ಪದ್ಯದ ಪೂರ್ವಾರ್ಧದಲ್ಲಿ ಎರಡು ಕರ್ಮಪದಗಳಿರುವದರಿಂದ, ದ್ವಿಕರ್ಮಕ ಕರ್ತ್ರರ್ಥಕಪ್ರಯೋಗವು.

ಟಿಪ್ಪಣಿ|| ಗರಿಗಳು ಬಿಳುಪಾಗಿಯೂ, ಕೊಕ್ಕೂ ಕಾಲೂ ಕೆಂಪಾಗಿಯೂ ಇರುವ ಹಂಸಕ್ಕೆ "ರಾಜಹಂಸ" ವೆಂದು ಹೆಸರು.

221. ಶ್ರೀರಾಮನು, ಮನ-ಮನಸ್ಸು, ದಣಿಯೆ-ತೃಪ್ತಿಹೊಂದುವ ಹಾಗೆ, ದಕ್ಷಿಣೆಗೂಡಿ-ದಕ್ಷಿಣಾದ್ರವ್ಯದೊಡನೆ, (೧) ಕನ್ಯಾಧೇನುದಾನವಂ-ಕನ್ಯಾದಾನ ಗೋದಾನಗಳನ್ನು, ಮಾಡಿದನು (ಎಂದರೆ ಹುಡುಗಿಯರನ್ನೂ ಹಸುಗಳನ್ನೂ ದಾನ ಮಾಡಿದನು); ಅವನಿಸುರ ಅನುರರ-ಬ್ರಾಹ್ಮಣರ, ಸಿರಿಯ-ಸಂಪತ್ತಿನ, ಆದಂ-ಆ, ಸಡಗರವ-ಸಂಭ್ರಮವನ್ನು, ಆಡಲಿ ಏಂ-ಏನುಹೇಳಲಿ ? (ಅಂದರೆ ಅಂತ್ಯವಾಗಿ ಸಂಪತ್ತಿನ ಸಂಭ್ರಮದಿಂದ ಇದ್ದರು ಎಂದು ಭಾವ); (೨) ಝಾಡಿವೆಳಗಿಸಲಿ-ಒತ್ತೊತ್ತಾಗಿ ಉರಿಯುತ್ತಿರುವ ದೀಪಗಳ ಬೆಳಕಿನಿಂದ ಕೂಡಿ, ಆರತಿಗಳು, ಎಡೆಯಾಡಿದುವು-ಸುತ್ತಾಡಿದುವು ; ಕಳಕಳಿಕೆ-ಗದ್ದಲವು, ಮಿಗೆ-ಹೆಚ್ಚುತ್ತಿರಲು, ಕಂಚುಕಿ ಜನದ-ಆಳುಗಳ, ಕೈಗಳಲಿ-ಹಸ್ತಗಳಲ್ಲಿ, ಕಂಬಿಗಳು-ದಾರಿ ಬಿಡಿಸುವ ಕೋಲುಗಳು (ಲಟ್ಟಿಗಳು), ಮುಂಡಾಡಿದುವು-ಮುದ್ದಾಡಿದವು (ಒತ್ತಾಗಿ ಅಲ್ಲಾಡಿಸಲ್ಪಟ್ಟುವು).

ಸರಳತಾತ್ಪರ್ಯ|| ರಾಮನು ಬೇಕಾದಷ್ಟು ಕನ್ಯಾದಾನ ಗೋದಾನಗಳನ್ನು ಮಾಡಿ ದಕ್ಷಿಣೆ ಕೊಟ್ಟನು. ಬ್ರಾಹ್ಮಣರ ಸಂಪತ್ತಿನ ಸಂಭ್ರಮವನ್ನೇನುಹೇಳಲಿ ? ಸ್ತ್ರೀಯರು ಹರಿವಾಣದಲ್ಲಿ ದೀಪಗಳನ್ನಿಟ್ಟು

ಕೊಂಡು ಆರತಿಯೆತ್ತಿದರು. ಆಳುಗಳು ಕೂಗುತ್ತ ಕೈಯಲ್ಲಿ ಕೋಲುಗಳನ್ನು ಹಿಡಿದುಕೊಂಡು ಅಳ್ಳಿಡಿಸುತ್ತಿದ್ದರು.

ವಿ॥ ಕನ್ಯೆಯರೂ ಧೇನುಗಳೂ (ದ್ವಂ) ಧೇನುಗಳದಾನ (ಷ. ತ.) (೨) ಝಾಡಿಯಾದ-ಬತ್ತಾದ, ಬೆಳಕು (ಕ. ವಿ. ಪೂ.)

222. +ರಾಮನು, ಕ್ಷಿತಿಪವಿಬುಧರ-ಬ್ರಾಹ್ಮಣರ, ವಿಮಲ ಮಂತ್ರಾಕ್ಷತೆಯ=ವಿಮಲ-ಪರಿಶುದ್ಧವಾದ, ಮಂತ್ರ-ಆಶೀರ್ವಾದಮಂತ್ರದ, ಅಕ್ಷತೆಯ-ಅಕ್ಕಿಯಕಾಳನ್ನು, ಕೈಕೊಳುತ-ತೆಗೆದುಕೊಳ್ಳುತ್ತ, ಮುನಿಪತಿಯ-ವಸಿಷ್ಠಮುನೀಂದ್ರನ, ಅನುಜ್ಞೆಯಲಿ-ಅಪ್ಪಣೆಯಿಂದ, ಅಖಿಳ ತೂರ್ಯತ್ರಯದ=ಅಖಿಳ-ಸಮಸ್ತವಾದ, ತೂರ್ಯತ್ರಯದ-ನಾಟ್ಯ ಸಂಗೀತ ವಾದ್ಯಗಳೆಂಬ ಈ ಮೂರರ, ರಭಸದಲಿ-ಸಂಭ್ರಮದಿಂದ ಕೂಡಿ, (೧) ಹೊಂಬೆಸದ-ಚೆನ್ನದ ಕೆಲಸಮಾಡಿದ, ರಂಚೆಯದ-ಆನೆಯ ಜೂಲುಳ್ಳ (ಕೌದಿಯುಳ್ಳ), ರತುನಲಹರಿಯ-ರತ್ನಗಳ ಹೊಳಪಿನ, ಲಳಿಯ-ಅತಿಶಯವುಳ್ಳ, ಭದ್ರಾ....ಕಂಧರದಿ=ಭದ್ರ-ಮಂಗಳಕರವಾದ, ಆಯತ-ದೊಡ್ಡದಾದ, ಮತಂಗಜ-ಆನೆಯ, ಕಂಧರದಿ-ಕುತ್ತಿಗೆಯಲ್ಲಿ ಇರುವ, (೨) ಹೊಂಗದ್ದುಗೆಯ-ಚೆನ್ನದ ಅಂಬಾರಿಯನ್ನು, ನಿಜಸತಿಸಹಿತ-ತನ್ನ ಪತ್ನಿಯೊಡನೆ, ಅಡರಿದನು-ಹತ್ತಿದನು.

ತಾತ್ಪರ್ಯ॥—ರಾಮನು ಬ್ರಾಹ್ಮಣರಿಂದ ಆಶೀರ್ವಾದ ಮಂತ್ರಾಕ್ಷತೆಯನ್ನು ತೆಗೆದುಕೊಂಡು ವಸಿಷ್ಠರ ಆಜ್ಞೆಯಿಂದ, ನಾಟ್ಯ ಗೀತ ವಾದ್ಯಗಳ ಸಂಭ್ರಮದಿಂದ ಕೂಡಿ ಚೆನ್ನದ ಕೆಲಸ ಮಾಡಿದ ಜೂಲು ಹೊದಿಸಿದ, ರತ್ನಾಭರಣಗಳಿಂದಲಂಕರಿಸಿದ ಮಂಗಳಕರವಾದ ದೊಡ್ಡದಾದ ಆನೆಯ ಕೊರಳನಲ್ಲಿ ಹಾಕಿರುವ ಚಿನ್ನದ ಅಂಬಾರಿಯಮೇಲೆ ಹೆಂಡತಿಯೊಡನೆ ಕುಳಿತುಕೊಂಡನು.

ಟಿ॥ ತೂರ್ಯತ್ರಯ.—ನಾಟ್ಯ, ಸಂಗೀತ, ವಾದ್ಯ.

ವಿ॥ (೧) ಹೊನ್ನಬೆಸ (ಕ. ಷ. ತ) ಹೊನ್ನ+ಗದ್ದುಗೆ (ಕ.ಷ ತ.)

223. ನರಪಾಲತತಿ-ರಾಜರಸಮೂಹವು, ಬಳಸಿದುದು-ಸುತ್ತುಕಟ್ಟಿಕೊಂಡಿತು, ಚತುರಂಗಬಲಂ=ಚತುರಂಗ-ನಾಲ್ಕುಬಗೆಯಾದ, ಬಲಂ-ಸೈನ್ಯವು, ಪೆಕ್ಕಳಿಸಿದುದು-ವ್ಯಾಪಿಸಿಕೊಂಡಿತು, ಕೈವಾರಿಗಳು-ಹೊಗಳಭಟ್ಟರು, ಎಡಬಲದಲಿ=ಎಡದಭಾಗ ಮತ್ತು ಬಲದಭಾಗಗಳಲ್ಲಿ, ಬಿರುದು

ಗಳ-ಗುಣಾತಿಶಯ ಪ್ರಸಿದ್ಧಿಗಳನ್ನು, ಉಗ್ಗಡಿಸಿದರು-ಕೂಗಿಹೇಳಿದರು,-ಈ ರಾಮನು, (೧) ನಿಳಯನಿಳಯದ-ಮನೆಮನೆಯ, ನಳಿನಮುಖಿಯರ-ಸ್ತ್ರೀಯರ ರತ್ನಾವಳಿಯ=ರತ್ನ-ರತ್ನಗಳ, ಆವಳಿಯ-ಸಮೂಹದಿಂದ ಕೂಡಿದ, ದೀಪ ಆವಳಿಯ-ಆರತಿಯ ದೀಪಗಳ ಸಮೂಹದ, ಸಂಭ್ರಮ ದಿಂದ-ಸಡಗರದಿಂದ, (೨) ರಾಜಬೀದಿಯಲಿ-ದೊಡ್ಡಬೀದಿಯಲ್ಲಿ, ಬಂದನು.

ವಿ॥ (೧) ವೀಪ್ಸಾಸಮಾಸ, (೨) ರಾಜನು ಬರತಕ್ಕ ಬೀದಿ (ಮ.ಉ.) ಅರಿ. ಸ

224, ತಳಿತ-ಗುಂಪಾಗಿರುವ, ಪಲ್ಲವ-ತೋರಣಕ್ಕೆ ಕಟ್ಟಿದ ಚಿಗುರುಗಳು, ಪಲ್ಲವವಂ-ಕಾಡುಮರಗಳ ಚಿಗುರುಗಳನ್ನೂ, ಉಜ್ವಳಿಪ-ಪ್ರಕಾಶಮಾನವಾದ, ಹಮ್ರ್ಯಾಳಿಗಳು=ಹರ್ಮ್ಯ-ಉಪ್ಪರಿಗೆಗಳ, ಆಳಿ ಗಳು-ಸಾಲುಗಳು, ಚಿತ್ರ ಅಚಲವನು-ವಿಚಿತ್ರವಾದ ಬೆಟ್ಟಗಳನ್ನೂ, ಆ ರಾಮಾವಳಿಯ=ಆರಾಮ-ಶೃಂಗಾರವನಗಳ ಆವಳಿಯ-ಸಮೂಹದಲ್ಲಿರುವ ಶಿಖಿಶುಕಪಿಕವ್ರಜದ=ಶಿಖಿ-ನವಿಲುಗಳು, ಶುಕ-ಗಿಣಿಗಳು, ಪಿಕ-ಕೋಗಿಲೆ ಗಳು ಇವುಗಳ, ವ್ರಜದ-ಸಮೂಹದ, ಉಲುಹು-ಶಬ್ದವು, ವಿಪಿನವಿಹಂಗ ಮದ-ಕಾಡುಹಕ್ಕಿಗಳ, (೧) ಕಟ್ಟುಲುಹ-ಹೆಚ್ಚಾದ ಶಬ್ದವನ್ನೂ, ಸೂಚಿ ಸುತ-ಸೂಚನೆಮಾಡುತ್ತ, ಅವನಿಜಾಪತಿಗೆ-ಸೀತಾಪತಿಯಾದ ರಾಮನಿಗೆ, ವನ....ಪದವಿಯಂ=ವನ-ಕಾಡಿನಲ್ಲಿ, ವಿಲಸತ್-ಪ್ರಕಾಶಮಾನವಾದ, ಅಭಿ ನವ-ಹೊಸದಾದ, ರಾಜಪದವಿಯಂ-ದೊರೆತನವನ್ನು (ಅಂದರೆ ಹೊಸದಾದ ಅರಸ್ಯಾಧಿಪತ್ಯವನ್ನು), ಸೂಚಿಸುತ - ಸೂಚನೆಮಾಡುತ್ತ, ಇರ್ದುದೈ-ಇದ್ದಿತಲ್ಲವೇ ?

ತಾತ್ಪರ್ಯ ॥ ರಾಮನು ಆನೆಯಮೇಲೆ ರಾಜಬೀದಿಯಲ್ಲಿ ಬಂದಾಗ, ತೋರಣದ ಚಿಗುರುಗಳು ಕಾಡುಮರಗಳ ಚಿಗುರುಗಳಹಾಗೆಯೂ ಉಪ್ಪರಿಗೆ ಸಾಲುಗಳು ವಿಚಿತ್ರವಾದ ಬೆಟ್ಟಗಳಹಾಗೂ ಶೃಂಗಾರವನದಲ್ಲಿರುವ ನವಿಲು ಗಿಳಿ ಕೋಗಿಲೆಗಳ ಧ್ವನಿಯು ಕಾಡುಹಕ್ಕಿಗಳ ಧ್ವನಿಯಂತೆಯೂ ಕಾಣುತ್ತಿದ್ದುದರಿಂದ ರಾಮನಿಗೆ ಮುಂದೆ ಉಂಟಾಗುವ ವನವಾಸವನ್ನು ಇವು ಈಗಲೇ ಸೂಚನೆ ಮಾಡುತ್ತಿವೆಯೋ ಎನ್ನುವಹಾಗೆ ಇದ್ದುವು.

ಭಾವಾರ್ಥ॥ ಸೂಚಿಸುತಿರ್ದುದ್ಗೈ....ಜಾಪತಿಗೆ-ರಾಮನಿಗೆ ಉಂಟಾ ಗುವ ಅರಣ್ಯವಾಸವನ್ನು ಸೂಚಿಸುತಿದ್ದುವು.

225. ಸಮಸ್ತ....ಜನ = ಸಮಸ್ತ-ಸಕಲರಾದ ಚಮೂಪ-ಸೈನ್ಯಾಧಿಪತಿಗಳು, ಸಚಿವ - ಮಂತ್ರಿಗಳು, ನಿಯೋಗಿ - ಅಧಿಕಾರಿಗಳು, ಬಂಧು-ನೆಂಟರು ಇವರುಗಳೆಂಬ, ಜನ-ಜನವು, + ದಶರಥರಾಜನ ಮನೋ ವ್ಯಥೆಯನ್ನು ಕಂಡು, ಕದಡಿದ-ಕಲಕಿಹೋದ, ಅಂತಃಕರಣಗಳ-ಮನಸ್ಸು ಳ್ಳವರಾಗಿ, ಗದಗದಿತಕಂಠದ=ಗದಗದಿತ-ಸರಬಿಗಿದುಕೊಂಡು ಹೊರಡುವ ಧ್ವನಿಯಿಂದ ಕೂಡಿದ, ಕಂಠದ - ಕುತ್ತಿಗೆಯುಳ್ಳವರಾಗಿ, (೧) ಕಂಬನಿ ಯಲಿ-ಕಣ್ಣೀರಿನ ಬಿಂದುಗಳಿಂದ ಕೂಡಿ, ಇದ್ದುದು-ಇದ್ದಿತು; ಸುಮಂ ತ್ರಸು, ಇದಿರುವಂದು-ಎದುರುಗೊಂಡು, ಮುರಿವಿಸ-ಮುರಿದುಹೋದ, ಮುದದ-ಸಂತೋಷವುಳ್ಳವನಾಗಿ, ಹೊಳೆವ-ಕಾಣುತ್ತಿರುವ, ಅಶ್ರುಗಳ-ಕಣ್ಣೀರಿನ ಬಿಂದುಗಳುಳ್ಳವನಾಗಿ, ಸಂತಾಪದಲಿ-ಸಂಕಟದಿಂದ, ರಘು ಪತಿಯ-ರಾಮನನ್ನು, ಮದಕರಿಯಿಂದ-ಮದದಾನೆಯ ಮೇಲಿನಿಂದ, ಇಳೆಗೆ-ಕೆಳಗೆ, ಇಳುಹಿದನು-ಇಳಿಸಿದನು. (ದಶರಥರಾಜನ ಮನೋವೈಕಲ್ಯ ವನ್ನುನೋಡಿ ರಾಮನ ಪಟ್ಟಾಭಿಷೇಕ ವಿಘ್ನವಾಯಿತಲ್ಲಾ ಎಂದು ಸಂತಾಪ ದಿಂದ ರಾಮನನ್ನು ಸುಮಂತ್ರನು ಆನೆಯಿಂದಿಳಿಸಿದನು.)

ಭಾವಾರ್ಥ॥—ಮುರಿವಿನಮುದದ-ಸಂತೋಷರಹಿತನಾಗಿ.

ವಿ॥ (೧) ಕಣ್ಣುಪನಿ (ಕ. ಪ. ಹ.)

226. ಮಂತ್ರೀಶ-ಸುಮಂತ್ರನೆಂಬ ಮಂತ್ರಿಶ್ರೇಷ್ಠನು, ಒಳಹೊ ಗುತ-ಒಳಕ್ಕೆ ನುಗ್ಗುತ್ತ, ದೊದ್ದೆಯ-ಜನದ ಗುಂಪನ್ನು, ತೆವರಿ-ಚದರಿಸಿ, ಉಳಿದವರಂ-ಇತರ ಜನರನ್ನು, ಹೊಗಿಸಬೇಡಿ-ಒಳಕ್ಕೆ ಬಿಡಬೇಡಿರಿ ಎಂದು, ಅವಸರದ ಸೇವಕರಿಗೆ-ಬಾಗಿಲಿನ ಊಳಿಗದವರಿಗೆ, ನೇಮವಂ-ಅಪ್ಪಣೆಯನ್ನು, ಇತ್ತು-ಕೊಟ್ಟು, ವಸಿಷ್ಠಮುನಿಸಹಿತ - ವಸಿಷ್ಠಋಷಿ ಯಿಂದ ಕೂಡಿದವನಾಗಿ, ಅವನಿತನುಜಾಪತಿಗೆ-ಸೀತಾಪತಿಯಾದ ರಾಮ ನಿಗೆ, ಕೈಕೊಟ್ಟು - ಹಸ್ತಲಾಘವನ್ನು ಕೊಟ್ಟು, ಅವನಿಪನ-ದಶರಥ ರಾಯನ, ಬಳಿಗಾಗಿ-ಸಮೀಪಕ್ಕೆ ಹೋಗುವುದಕ್ಕೋಸ್ಕರ, ಕೈಕೆಯ-ಕೈಕೇಯಿದೇವಿಯ, ಭವನದತ್ತಲು - ಮನೆಯಕಡೆಗೆ, ದುಗುಡದಲಿ-

ವ್ಯಸನದಿಂದ, ತಿರುಗಿದನು_ಹೊರಟನು. (ದಶರಥನು ಕೈಕೆಯ ಮನೆಯಲ್ಲಿ ದುಃಖಿಸುತ್ತ ಇದ್ದುದರಿಂದ ಮಂತ್ರಿ ಅಲ್ಲಿಗೆ ಹೊರಟನು ಎಂದು ತಾತ್ಪರ್ಯ.)

227 ಆರಘುಪತಿ - ಆ ರಾಮನು, ಯುವತಿಯರ - ಸ್ತ್ರೀಯರ, ಗುಜುಗುಜಿನ_ಗುಸುಗುಂಪಲು ಮಾತುಳ್ಳ, ಶೂನ್ಯಉತ್ಸವದ_ಯಾವ ಸಂಭ್ರಮವೂ ಇಲ್ಲವಿರುವ, ನೃಪಮಂದಿರವ_ಅರಮನೆಯನ್ನೂ, ಜಾಡ್ಯದ_ಅರಮನೆಯ ಜನರಿಗೆ ಉತ್ಸಾಹವಿಲ್ಲದಿರುವಿಕೆಯೆಂಬ, ಜವನಿಕೆಯ_ತೆರೆಯಿಂದುಂಟಾದ, ಜಂಜಡವ - ತೊಂದರೆಯನ್ನೂ, ಕಾಣುತ - ನೋಡುತ, ಇಂತು ಎಂದು_ಈ ಮುಂದೆ ಹೇಳುವಂತೆ, ನುಡಿದನು_ಮಾತಾಡಿದನು;+ ಆ ರಘುಪತಿ, ಸುಮಂತ್ರಂಗೆ_ಸುಮಂತ್ರನನ್ನು ಕುರಿತು, ನಮಗೆ, ಅವನಿ_ಭೂಮಿಯು, ಅಸಾಧ್ಯಂ_ದೊರೆಯಲಾರದು, ಎಂಬ_ ಎನ್ನುವ, ಈ ವ್ಯವಹರಣೆ_ಈ ರೀತಿಯು, ಗೋಚರಿಸುತ ಇದೆ_ಕಂಡುಬರುತ್ತಿದೆ; ಉತ್ತರಂ_ನನ್ನಮಾತಿಗೆ ಪ್ರತಿವಾಕ್ಯವು, ಸಂಭವಿಸಲಿ_ಹೊರಡಲಿ, ಎಂದನು.

ಸರಳತಾತ್ಪರ್ಯ॥ ರಾಮನು ಅರಮನೆಯಲ್ಲಿ ಸ್ತ್ರೀಯರು ಗುಸುಗುಂಪಲು ಮಾತನಾಡಿಕೊಳ್ಳುತ್ತ ಯಾವ ಸಂಭ್ರಮವೂ ಇಲ್ಲದೇ ಇರುವುದನ್ನೂ ಎಲ್ಲರೂ ಉತ್ಸಹವಿಲ್ಲದಿರುವುದನ್ನೂ ಕಂಡು ನಮಗೆ ಪಟ್ಟಾಭಿಷೇಕವಾಗುವುದಿಲ್ಲವೆಂಬುದಾಗಿ ತೋರುತ್ತದೆ. ಇದಕ್ಕೇನುತ್ತರವೆಂದು ಸುಮಂತ್ರನಿಗೆ ಹೇಳಿದನು.

ಭಾವಾರ್ಥ ॥ ಜಾಡ್ಯದಜವನಿಕೆಯ ಜಂಜಡವಕಾಣುತ_ಎಲ್ಲರೂ ಉತ್ಸಾಹವಿಲ್ಲದೆ ದುಃಖಿಸುವುದನ್ನು ನೋಡುತ್ತ.

228. + ಸುಮಂತ್ರನ, ಹೃದಯ_ಮನಸ್ಸು, ಕಳವಳಸಿದುದು_ಚಾಂಚಲ್ಯಹೊಂದಿತು; ನಯನತಂಬು_ಕಣ್ಣೀರು, ಕಂಗಳ_ಕಣ್ಣುಗಳನ್ನು, (೧) ಹೊದಿಸಿದುವು_ಮುಚ್ಚಿದುವು; (೨) ಮರುಮಾತು_ಉತ್ತರವು, ಉದಿಸದೆ_ಹೊರಡದೆ, ಮಂತ್ರೀಶ_ಸುಮಂತ್ರನು, ಮಸ್ತಕವ_ತಲೆಯನ್ನು, ಬಾಗಿದನು_ಬಗ್ಗಿಸಿಕೊಂಡನು, ರಘುಪತಿ-ಶ್ರೀರಾಮನು, ಸುಮಂತ್ರನ, ವದನಚೇಷ್ಟೆಯ_ಮುಖದ ವಿಕಾರವನ್ನು, ಕಂಡು_ನೋಡಿ, ಬೆದರಿದನು_ಭಯಪಟ್ಟನು; ತಂದೆಯ_ಜನಕನಾದ ದಶರಥರಾಜನು, ಹದನು_ಸ್ಥಿತಿಯು,

ಅದು ಏನು-ಎಂತಹುದು? ಎಂದು, ಅರಸಂ-ದಶರಥರಾಜನು, ಇದ್ದ ಎಡೆಗಾಗಿ-ಇದ್ದಸ್ಥಳಕ್ಕೋಸ್ಕರ, ನಡೆತಂದ-ಬಂದನು.

ಭಾವಾರ್ಥ || ಕಂಗಳಹೊದಿಸಿದುವು ನಯನಾಂಬು - ಕಣ್ಣಿನಲ್ಲಿ ನೀರು ತುಂಬಿಕೊಂಡಿತು.

ವಿ|| (೧) ನಯನಾಂಬು ಎಂಬ ಕರ್ತೃಪದವು ಏಕವಚನವಾಗಿದ್ದಾಗ್ಯೂ ಜಾತಿವಾಚಕವಾದುದರಿಂದ ಹೊದಿಸಿದುವು, ಎನ್ನುವ ಕ್ರಿಯಾಪದವು ಬಹುವಚನವಾಗಿದೆ. ಮರುವಾದವಾತು (ಕ. ವಿ. ಪೂ.)

229. ವಿತತ....ವಿಹ್ವಲನ=ವಿತತ-ಹೆಚ್ಚಾಗಿ, ಗಳಿತ-ಸುರಿಯುತ್ತಿರುವ, ಅಶ್ರು-ಕಣ್ಣೀರುಗಳ, ಪ್ರಕರ-ಸಮೂಹದಿಂದ, ಪೂರಿತ-ತುಂಬಲ್ಪಟ್ಟುದಾದಕಾರಣ, ನಿಮೀಲಿತ-ಮುಚ್ಚಿ ಇರುವ, ನೇತ್ರ-ಕಣ್ಣುಗಳುಳ್ಳವನಾಗಿಯೂ, ನಿರ್ಗತ-ಸ್ತಬ್ಧನಾಗಿಯೂ, ಗತ-ಹೋದ, ವಚಃ-ಮಾತುಳ್ಳವನಾಗಿಯೂ, ವಿಹ್ವಲನ-ಚಿಂತಾಕ್ರಾಂತನಾಗಿಯೂ, ಶೋಕೋ.... ವಶನ=ಶೋಕ-ದುಃಖದ ಉದ್ರೇಕ-ಹೆಚ್ಚುಗೆಯಿಂದ ಪರವಶನ-ಮೈಮರೆತವನಾಗಿಯೂ, ಸತಿಯ-ಹೆಂಡತಿಯಾದ ಕೈಕೆಯ, ಕರ್ಕಶ......ನ್ವಿತನ= ಕರ್ಕಶ-ಕಠಿನವಾದ, ಕಲುಷ-ದುಷ್ಟವಾದ, ವಾಕ್-ಮಾತೆಂಬ, ಅಸಿ-ಕತ್ತಿಯ, ಹತಿ-ಪೆಟ್ಟಿನಿಂದ, ನಿರೋಧಿತ-ತಡೆಯಲ್ಪಟ್ಟ, ಹೃದಯ-ಮನಸ್ಸಿನ, ಬಾಧಾ-ನೋವಿನಿಂದ, ಅನ್ವಿತನ-ಕೂಡಿದವನಾಗಿಯೂ ಇದ್ದ ದಶರಥನನ್ನು, ಆರಾಮ-ಆ ರಾಮನು, ಕಾಣುತ್ತ-ನೋಡುತ್ತ, ಕಯ್ಯಕರದಿನಲಿ - ಚಿಂತೆಯಿಂದ ಕೆನ್ನೆಯಮೇಲೆ ಕೈಯಿಟ್ಟುಕೊಂಡು, ಇರ್ದಂ-ಇದ್ದನು.

ತಾತ್ಪರ್ಯ|| ಕಣ್ಣೀರು ಸುರಿಯುತ್ತಿರುವುದರಿಂದ ಕಣ್ಣನ್ನು ಮುಚ್ಚಿಕೊಂಡು ಸ್ತಬ್ಧನಾಗಿ ಮಾತಾಡುವುದಕ್ಕೆ ತೋರದೆ ಚಿಂತಾಕ್ರಾಂತನಾಗಿ ಶೋಕ ಹೆಚ್ಚಿ ಮೈಮರೆತು, ಕೈಕೆಯ ಕಠಿನವಾದ ದುಷ್ಟಮಾತಿನಿಂದ ಮನಸ್ಸಿನಲ್ಲಿ ನೊಂದು ಇರುವ ದಶರಥರಾಜನನ್ನು ನೋಡಿ ಚಿಂತೆಯಿಂದ ರಾಮನು ಕೆನ್ನೆಯಮೇಲೆ ಕೈಯಿಟ್ಟುಕೊಂಡಿದ್ದನು.

230. ಮಂತ್ರೀಶನು-ಸುಮಂತ್ರನು, ಆ ಸಮಯದಲಿ-ಆ ಕಾಲದಲ್ಲಿ, ಮನಮರುಗಿ-ವ್ಯಥೆಪಟ್ಟು, ರಾಜರಾಜಾಧೀಶನನು=ರಾಜರಾಜ-

ಮಹಾರಾಜರಿಗೆ, ಅಧೀಶನನು-ಒಡೆಯನಾದ (ಅಂದರೆ ಚಕ್ರವರ್ತಿಯಾದ ದಶರಥನನ್ನು), ಮಧುರವಚೋವಿಳಾಸದಲಿ_ಇಂಪಾದ ಮಾತಿನ ವೈಖರಿ ಯಿಂದ, ಒಯ್ಯನೆ_ಮೆಲ್ಲಗೆ, ನುಡಿಸಿದನು_ಮಾತನಾಡಿಸಿದನು; (೧) ಈಸು ನಿರ್ಬಂಧದ - ಇಷ್ಟು ಬಂಧನವಾಡಿರುವ, ನಿರೋಧಕ್ಲೇಶ - ತಡೆದಿರುವ ದುಃಖವು, ಆರಿಂದ - ಯಾರಿಂದ, ಏನುಕಾರಣ - ಯಾವಕಾರಣದಿಂದ, ದೇವರ-ಸ್ವಾಮಿಯಾದ ತಮ್ಮ, ಅಂಗದಲಿ-ಅಂತರಂಗದಲ್ಲಿ (ಅಂದರೆ ಮನ ಸ್ಸಿನಲ್ಲಿ), ವಾಸವಾದುದು-ನೆಲೆಗೊಂಡಿತು;+ಎಂದು, ಆ ಮಂತ್ರಿ ಎಂದನು.

ಉತ್ತರಾರ್ಧದ ತಾತ್ಪರ್ಯ॥ ಇಷ್ಟುಮಟ್ಟಿಗೆ ಏನೂತೋರದಂತೆ ತಡೆ ದಿರುವ ದುಃಖವು ಯಾರಿಂದ ಏನುಕಾರಣ ತಮ್ಮ ಮನಸ್ಸಿನಲ್ಲಿ ಉಂಟಾ ಯಿತು ? ಎಂದು ಆ ಮಂತ್ರಿ ಎಂದನು.

ವಿ॥ (೧) ಇದು ಎಂಬುದರ ಮೇಲೆ ಪರಿಮಾಣಾರ್ಥದಲ್ಲಿ ಸು ಪ್ರತ್ಯಯ ಬಂದು ಈಸು, ಎಂದಾಯಿತು.

231. ತರಣಿವಂಶದ-ಸೂರ್ಯವಂಶದ, ಸಾರ್ವಭೌಮರಿಗೆ-ಚಕ್ರ ವರ್ತಿಗಳಿಗೆ, ದುಶ್ಚಿತ್ತ-ದುಃಖದಿಂದಕೂಡಿದ ಮನಸ್ಸು, ಎರವು-ದೂರದಲ್ಲಿ ರತಕ್ಕುದು, ಅಲಾ_ಅಲ್ಲವೇ ? ಮನುಕುಲದ_ಮನುಚಕ್ರವರ್ತಿಯ ವಂಶದ, ಅರಸುಗಳಿಗೆ_ದೊರೆಗಳಿಗೆ, ಅದು-ಆ, ವಿಷಾದಂ_ವ್ಯಸನವು, ತಾನು, (೧) ಅಪ್ರಸಿದ್ಧಂ_ರೂಢಿಯಲ್ಲಿ ಇಲ್ಲದೇ ಇರತಕ್ಕುದು, ಅಲೆ_ಅಲ್ಲವೇ? (ಅಂದರೆ ವ್ಯಸನವೆನ್ನುವುದು ಯಾವಾಗಲೂ ಇಲ್ಲದೆ ಇರತಕ್ಕುದು ಅಲ್ಲವೇ?); ಅರಿ ವಿಜಯವೀರರಿಗೆ-ಶತ್ರುಗಳನ್ನು ಜಯಿಸತಕ್ಕ ಶೂರರಿಗೆ, ಚಿಂತಾಸ್ಪರುಶಂ- ಕೊರಗುವಿಕೆಯ ಸಂಬಂಧವು, ಉಂಟೇ-ಇರುವುದೇ?ಜೀಯ_ಪ್ರಭುವೇ! ಯೋಗೋತ್ಕರ-ಷದೇಹ=ಯೋಗ_ರಾಜಯೋಗದಿಂದ ಉಂಟಾದ, ಉತ್ಕ ರುಷ_ಉತ್ಕೃಷ್ಟತ್ವದಿಂದ ಕೂಡಿದ, ದೇಹ_ಶರೀರವುಳ್ಳವನೇ ! (ಅಂದರೆ ರಾಜಯೋಗದಿಂದ ಉತ್ಕೃಷ್ಟವಾದ ಶರೀರವುಳ್ಳವನೇ ! ಎಂದು ಭಾವ) ವ್ಯಥೆ-ದುಃಖವು, ಅದುವಿಕೆ_ಏತಕ್ಕೋಸ್ಕರ 7 ಎಂದು, ಆತ-ಆ ಸುಮಂ ತ್ರನು, ಬೆಸಗೊಂಡ-ಕೇಳಿದನು.

ಭಾವಾರ್ಥ॥ ತರಣಿವಂಶದ....ದುಶ್ಚಿತ್ತ-ಸೂರ್ಯವಂಶದ ಚಕ್ರವರ್ತಿ ಗಳಿಗೆ ಮನೋವ್ಯಥೆಯು ಯಾವಾಗಲೂ ಇಲ್ಲವಲ್ಲವೇ ?

ವಿ॥ (೧ ಪ್ರಸಿದ್ಧವಲ್ಲದುದು (ನ ತ.) (೨) ಯೋಗದಿಂದ ಉತ್ಕರ್ಷ (ತೃ. ತ.) ಉತ್ಕರ್ಷಯುಕ್ತವಾದ ದೇಹವುಳ್ಳವನು (ಬ. ವ್ರೀ.)

232. + ಸುಮಂತ್ರನಾಡಿದ, ಆ ಮಧುರಚನದ-ಆ ಇಂಪಾದ ಮಾತಿನ, (೧) ವಿಳಾಸೋದ್ದಾಮಗಾರುಡಮಂತ್ರಂ= ವಿಳಾಸ-ವೈಖರಿಯೆಂಬ, ಉದ್ದಾಮ-ಮಹತ್ತಾದ, ಗಾರುಡಮಂತ್ರಂ-ಗರುಡನ ಮಂತ್ರವು, ಆ ಮಹಾ....ದಷ್ಟನನು= ಆ, ಮಹತ್-ದೊಡ್ಡದಾದ, ದುಷ್ಟಅಂಗನಾ-ಕೆಟ್ಟ ಸ್ತ್ರೀಯಾದ ಕೈಕೆಯು, ರಸನಾ-ನಾಲಗೆಯೆಂಬ, ಅಹಿ-ಹಾವಿನಿಂದ (ಸರ್ಪದಿಂದ), ದಷ್ಟನನು-ಕಚ್ಚಲ್ಪಟ್ಟ ದಶರಥನನ್ನು, ಎಬ್ಬಿಸಿತು-ಎತ್ತಿ ಕೂಡಿಸಿತು ; + ದಶರಥನು, ಬಂದಾತ-ಬಂದವನು, ರಾಮನೇ-ರಾಮಚಂದ್ರನೇ ! ನುಡಿವ ಆತ-ಮಾತಾನಾಡುವವನು, ಜಗತ್ ಅಭಿರಾಮನೇ-ಲೋಕದಲ್ಲಿ ಸುಂದರನಾದ ರಾಮನೇ ! ಮಂಗಳನಾಮನೇ-ಶುಭಕರವಾದ ಹೆಸರುಳ್ಳ ರಾಮನೇ ! ಎಂದು, (೨) ದಳಪತಿಯ-ಸೈನ್ಯಾಧಿಪತಿಯಾದ ಸುಮಂತ್ರನನ್ನು, ಮಗನು ಎಂದು-ಪುತ್ರನೆಂದು ತಿಳಿದು, ಅಪ್ಪಿದನು-ತಬ್ಬಿಕೊಂಡನು. (ದುಃಖದಿಂದ ಭ್ರಾಂತನಾಗಿ ಸುಮಂತ್ರನನ್ನೇ ಮಗನಾದ ರಾಮನೆಂದು ಅಪ್ಪಿಕೊಂಡನು.)

ಪೂರ್ವಾರ್ಧದ ತಾತ್ಪರ್ಯ ॥ ಗರುಡಮಂತ್ರದಿಂದ ಹಾವು ಕಚ್ಚಿದವನು ಎದ್ದು ಕುಳಿತುಕೊಳ್ಳುವಹಾಗೆ, ಆ ಸುಮಂತ್ರನ ಇಂಪಾದ ಮಾತಿನ ವೈಖರಿಯಿಂದ ದುಷ್ಟಕೈಕೆಯ ಕಠಿನವಾಕ್ಯದಿಂದ ಮನೋವ್ಯಥೆಗೊಂಡ ದಶರಥನು ದುಃಖ ಬಿಟ್ಟೆದ್ದು ಕುಳಿತನು.

ಭಾವಾರ್ಥ ॥ ದುಷ್ಟ ಕೈಕೆಯಾಡಿದ ಕಠಿನ ವಾಕ್ಯವನ್ನು ಕೇಳಿ ಮನೋವ್ಯಥೆಗೊಂಡಿದ್ದ ದಶರಥನು ಸುಮಂತ್ರನ ಮಾತನ್ನು ಕೇಳಿ ದುಃಖ ತೊಲಗಿ ಎದ್ದು ಕುಳಿತುಕೊಂಡನು.

ವಿ॥ (೧) ಗಾರುಡ-ಗರುಡನ ಸಂಬಂಧಿಯಾದುದು. ಗಾರುಡವಾದ ಮಂತ್ರ. (ವಿ. ಪೂ.) ಉದ್ದಾಮವಾದ ಗಾರುಡಮಂತ್ರ (ವಿ. ಪೂ.) ವಿಳಾಸವೆಂಬ ಉದ್ದಾಮಗಾರುಡ ಮಂತ್ರ (ಅ. ಪೂ.) (೨) ದಳದ-ಸೈನ್ಯದ, ಪತಿ (ಷ. ತ.) ಅರಿ ಸ.

೨೩೩. ಜೀಯ-ಪ್ರಭುವೇ ! ನಾನು ಸುಮಂತ್ರಕನು-ಸುಮಂತ್ರನು (ನಿನ್ನ ಮಗನಾದ ರಾಮನಲ್ಲ, ಎಂದು ಭಾವ) ; ರಘುರಾಯನ-ಶ್ರೀರಾಮನ, ಅಭಿಷೇಚನದ-ಪಟ್ಟಾಭಿಷೇಕವೆಂಬ, ರಾಜ್ಯಶ್ರೀಯ ವರಣೀಯಕೆ-ರಾಜ್ಯಲಕ್ಷ್ಮಿಯ ವಿವಾಹಕ್ಕೆ, ನಿಮ್ಮ ಚಿತ್ತದಲಿ-ಮನಸ್ಸಿನಲ್ಲಿ, ಆವುದ ಅಭಿಮತ-ಏನು ಅಭಿಪ್ರಾಯ ಇದೆ ? ರಾಯತನದ ಅಭಿಮುಖದ-ದೊರೆತನವನ್ನು ಎದುರುನೋಡುತ್ತಿರುವ, (೧) ಕಮಲದಳಾಯತಾಂಬಕ=ಕಮಲ-ತಾವರೆಹೂವಿನ, ದಳ-ಎಸಳಿನಂತೆ, ಆಯತ-ವಿಸ್ತಾರವಾದ, ಅಂಬಕ-ಕಣ್ಣುಳ್ಳ ಶ್ರೀರಾಮಚಂದ್ರನು, ಬಂದು, ಇಹನು-ಇರುವನು ; ಮುನಿರಾಯನು-ಋಷಿಶ್ರೇಷ್ಠನಾದ ವಸಿಷ್ಠನು, ಐತಂದು ಇಹನು-ಬಂದಿರುವನು; ತನಗೆ-ನನಗೆ, ನೇಮಂ-ಅಪ್ಪಣೆಯು, ಆದು ಏನು-ಏನಾಗುತ್ತದೆ ?+ ಎಂದು ಸುಮಂತ್ರನು, ಎಂದ-ಹೇಳಿದನು.

ಭಾವಾರ್ಥ ॥ ರಘುರಾಯನಭಿಷೇಚನದ ರಾಜ್ಯಶ್ರೀಯ....ನಿಮ್ಮ ಚಿತ್ತದಲಿ-ಶ್ರೀರಾಮನಿಗೆ ಪಟ್ಟಾಭಿಷೇಕವಾಗಿ ರಾಜ್ಯವನೊಪ್ಪಿಸುವ ವಿಷಯದಲ್ಲಿ ತಮ್ಮ ಮನೋಭಿಪ್ರಾಯವೇನು ? ರಾಯತನದಭಿಮುಖದ ಕಮಲದಳಾಯತಾಂಬಕ ಬಂದಿಹನು-ಪಟ್ಟಾಭಿಷೇಕಕ್ಕೆ ಸಿದ್ಧನಾಗಿರುವ, ಯೌವನಾವಿರ್ಭಾವದಿಂದ ಅಗಲವಾದ ಕಣ್ಣುಳ್ಳ ಶ್ರೀರಾಮನು ಬಂದಿರುವನು.

ವಿ॥ (೧) ಕಮಲದಳ (ಷ. ತ.) ದಳದಂತೆ ಆಯತ (ಉ. ಪೂ.) ಆಯತವಾದ ಅಂಬಕವುಳ್ಳವನು (ಬ. ವ್ರೀ.)

234. ಮಗನೆ-ಪುತ್ರನೇ ! ಬಂದ್ಯೆ-ಬಂದೆಯಾ ? ಮನುಕುಲಾಂಬರಗಗನಮಣಿ=ಮನು-ಮನುಚಕ್ರವರ್ತಿಯ, ಕುಲ-ವಂಶವೆಂಬ, ಅಂಬರ ಆಕಾಶಕ್ಕೆ, ಗಗನಮಣಿ-ಸೂರ್ಯಪ್ರಾಯನಾದವನೇ ! ಬಂದ್ಯೆ, ಮನೋರಥ-ನನ್ನ ಇಷ್ಟಾರ್ಥ ಸ್ವರೂಪನಾದವನೇ ! ಸುಗುಣ-ಒಳ್ಳೆಯ ಗುಣವುಳ್ಳವನೇ ? ಬಂದ್ಯೆ ? ಸೂನೃತವ್ರತ=ಸೂನೃತ-ಸತ್ಯಪ್ರಿಯವಾದ ಮಾತೇ, ವ್ರತ-ನೋಹಿಯಾಗುಳ್ಳವನೇ ! ಬಂದೆಯ ಐ-ಓ ಬಂದೆಯಾ ? ಎನುತ-ಎನ್ನುತ್ತಾ, ಸತ್ಯದತಗಹಿನ-ನಿಜದ ಸಂಬಂಧವುಳ್ಳ, ಅವನೀನಾಥನು-ದಶರಥರಾಜನು, ಒಗುವ-ಸುರಿಯುವ, ನಯನ ಉದಕದಲಿ-ಕಣ್ಣೀರಿನಿಂ

ದಲೂ, (೧) ಅರೆದಿಟ್ಟಿಗಳ-ಕಣ್ಣುಗಳ ಅರ್ಧಭಾಗಗಳ, ನೋಟದಲ್ಲಿ-ನೋಡುವಿಕೆಯಿಂದಲೂ, + ರಾಮನನ್ನು, ಅಪ್ಪಿ-ತಬ್ಬಿಕೊಂಡು, ಅರಘು ನಾಥಗೆ-ಆ ರಾಮನಿಗೆ, ಇಂತು-ಈ ಮುಂದೆ ಹೇಳುವಂತೆ, ಎಂದ-ಹೇಳಿ ದನು.

ಭಾವಾರ್ಥ॥ ಮನುಕುಲಾಂಬರಗಗನಮಣಿ-ಮನುವಂಶಕ್ಕೆ ಕೀರ್ತಿ ಪ್ರಕಾಶಮಾಡುವವನೇ ! ಸೂನೃತವ್ರತ-ಸತ್ಯಪ್ರಿಯನಾದ ಮಾತನ್ನೇ ಆಡುವವನೇ ! ಸತ್ಯದತಗಳ್ಪಿನಅವನೀನಾಥ-ಸತ್ಯವನ್ನುಬಿಡದಿರುವ ದಶರಥ ರಾಜನು.

ವಿ॥ (೧) ದಿಟ್ಟಿಗಳ+ಅರೆಗಳು=ಅರೆದಿಟ್ಟಿಗಳು (ಕ. ಅ. ಭಾ.)

235. ಕಂದ-ಮಗನೇ ! ಕೇಳ್-ಕೇಳು, ಎನ್ನ-ನನ್ನ, ಅಣುಗ ಪ್ರೀತಿಪಾತ್ರನೇ ! ಕೇಳು ; ಅಂ-ನಾನು, ಒಂದ-ಒಂದನ್ನು, ನೆನೆದರೆ—ಯೋಚಿಸಿದರೆ, ದೈವ-ಅದೃಷ್ಟವು, ತಾ-ತಾನು, ಬೇರೊಂದ-ಮತ್ತೊಂದನ್ನು, ನೆನೆದುದು-ಯೋಚಿಸಿತು, ದೈವಗತಿಗೆ-ನಮ್ಮ ದೈವವ್ಯಾಪಾರವನ್ನು, ಈ ಕೈಕೆ-ಈ ಕೈಕೆಯು, ಅನುಸಾರಿ-ಅನುಸರಿಸಿರುವಳು ; + ಎಂದು, ದಶರಥನು, ಎಂದು-ಹೇಳಿ, ಮೇಲುತ್ತರಕೆ-ಮುಂದಣ ಮಾತಿಗೆ, ನಾಲಗೆ-ನಾಲಗೆಯು, ಬಂದುಬಂದು-ಮುಂದಕ್ಕೆ ಬಂದುಬಂದು, ಒಳಸರಿದು-ಒಳಕ್ಕೆ ಎಳೆದುಕೊಂಡು, ಮೆಲ್ಲನೆ-ಮೆಲ್ಲಗೆ, ನಿಂದು-ನಿಂತುಕೊಂಡು, ಬಳಿಕ-ಅನಂತರದಲ್ಲಿ, ಕಲಿಸುಮಂತ್ರಂಗೆ-ಶೂರನಾದ ಸುಮಂತ್ರನನ್ನು ಕುರಿತು, ಈ ಮಾತಂ-ಈ ಮುಂದೆ ಹೇಳುವ ಮಾತನ್ನು, ಎಂದನು-ಹೇಳಿದನು.

ಭಾವಾರ್ಥ॥ಆನೊಂದನೆನೆದರೆ ದೈವತಾಬೇರೊಂದ ನೆನೆದುದು-ತಾನು ಪಟ್ಟಾಭಿಷೇಕ ಮಾಡಬೇಕೆಂದು ಯೋಚಿಸಿದರೆ ದುರದೃಷ್ಟವಶದಿಂದ ಪಟ್ಟಾಭಿಷೇಕಕ್ಕೆ ವಿಘ್ನಬಂದಿತು. ದೈವಗತಿಗೀಕೈಕೆಯನುಸಾರಿ-ನಮ್ಮ ದುರದೃಷ್ಟದಿಂದ ಈ ಕೈಕೆಗೆ ದುರ್ಬುದ್ಧಿ ಹುಟ್ಟಿ ವಿಘ್ನಮಾಡಿದಳು. ಮೇಲುತ್ತರಕೆ ನಾಲಗೆ ಬಂದುಬಂದೊಳಸರಿದು ಮಾತನ್ನಾಡಬೇಕೆಂದು ಯತ್ನಿಸಿದರೂ ಆಡಲಾರದೆ.

236. ಇದು-ಈ, ನಿವಾಸಂ-ಮನೆಯು, ಈಸುದಿನಪರಿಯಂತ-ಇಷ್ಟುದಿನಗಳವರೆಗೂ, ವಿಭವದ-ಸಂಪತ್ತಿನ, ವಾಸ-ನೆಲೆಯು, ಸೊಬ

ಗಿನ - ಸೌಭಾಗ್ಯದ ಸೆಜ್ಜೆ - ಉಪ್ಪರಿಗೆಯು (ಅಥವಾ ಶಯ್ಯಾಗೃಹವು), ಸುಖದ_ಸೌಖ್ಯದ, ಸುದೇಶ_ಬಳ್ಳಿಯು ಸುಸ್ಥಳವು, ಸುನ್ಮಾನದ_ಉತ್ಸಾಹದ, ಸುಧಾಂಬುಧಿ-ಕ್ಷೀರಸಮುದ್ರವು, ಸಿರಿಯ -ಲಕ್ಷ್ಮಿಯ, ನೆಲೆವೀಡು_ವಾಸ ಸ್ಥಳವು, ಲೇಸಿಗೆ_ಶ್ರೇಯಸ್ಸಿಗೆ, ಆಗರ_ಗಣಿಯು, ಶುಭದ_ಮಂಗಳದ, ಬಹಳತಕೋಶ-ಹೆಚ್ಚಾದ ಬಂಡಾರವು, ಸಂತಸದ-ಸಂತೋಷದ, ಇಕ್ಕೆ-ಸ್ಥಾನವು, ಸೊಂಪಿನ-ಸಮೃದ್ಧಿಯ, ವಾಸಂ-ಮನೆಯು, ಆಗಿ, ಇರ್ದುದು-ಇದ್ದಿತು,+ಎಂದು, ಆ ಭೂಪ-ಆ ದಶರಥರಾಜನು, ಎಂದನು-ಹೇಳಿದನು.

ಭಾವಾರ್ಥ॥ ಇದುವರೆಗೂ ನಮ್ಮ ಮನೆಯು ಸಂಪತ್ತು, ಸೌಭಾಗ್ಯ ಸುಖ, ಉತ್ಸಾಹ, ಲಕ್ಷ್ಮಿ, ಶ್ರೇಯಸ್ಸು, ಶುಭ, ಸಂತೋಷ, ಸಮೃದ್ಧಿ ಇವುಗಳಿಂದ ಪೂರ್ಣವಾಗಿದ್ದಿತು ಎಂದು ದಶರಥರಾಜನು ಹೇಳಿದನು.

237. ಇಂದು - ಈಗ (ಅಂದರೆ ಕೈಕೆಯು ದುರ್ವಾಕ್ಯವಾಡಿದ ಮೇಲೆ ಎಂದು ಭಾವ), ಇದು-ಈ, ಭವನಂ-ಮನೆಯು, (೧) ಅಶುಭದ-ಅಮಂಗಳದ, (೨) ಆಡುಂಬೊಲನು-ಆಟದವನವು,ಕುಹಕದ-ಕೆಟ್ಟಆಲೋಚನೆಯ, ಪಸರ-ಅಂಗಡಿಯು, ಚಿಂತೆಯ-ಕೊರಗುವಿಕೆಯ, ಸಂತೆ-ಸಂತೆಗಟ್ಟು, ದುಃಖದ-ಬಾಧೆಯ, ವಸತಿ-ಮನೆಯು, ದುಗುಡದ_ಶೋಕದ, ಬೀಡು_ಸ್ಥಾನವು, ದುಮ್ಮಾನದ_ಉತ್ಸಾಹಭಂಗದ, ಜನಸ್ಥಾನ_ಮಂಟಪವು, ಅಸುಖದ-ಕಷ್ಟದ, ಆರವೆ-ತೋಟವು, ಭೇದ-ಅಗಲುವಿಕೆಯು, ಪುದಿದ-ತುಂಬಿದ, ಆಯಸದ_ಶ್ರಮದ, ಜಾಳಗೆ_ಜೇಲವು (ಬಲೆಯು), ಜವನ-ಯಮನ, ಮನೆ-ವಾಸಸ್ಥಾನವು, ರಕ್ಕಸಿಯ-ರಾಕ್ಷಸಿಯು (ಪಿಶಾಚಿಯು), ಮಠ-ಚಾವಡಿಯು, ಆಯ್ತು-ಆಯಿತು.

ಭಾವಾರ್ಥ॥ ಕೈಕೆಯು ದುಷ್ಟವಾಕ್ಯವಾಡಿ ಪಟ್ಟಾಭಿಷೇಕ ವಿಘ್ನ ಮಾಡಿದುದರಿಂದ ಈಗ ಈ ಮನೆಯು ಅಶುಭ, ಕೆಟ್ಟ ಮಾತು, ಚಿಂತೆ, ಬಾಧೆ, ಶೋಕ, ಉತ್ಸಾಹಭಂಗ, ಕಷ್ಟ, ಅಗಲುವಿಕೆಯು ಶ್ರಮ ಇವುಗಳಿಂದ ವ್ಯಾಪ್ತವಾಯಿತು, ಮತ್ತು ಯಮನ ಮನೆಯಂತೆಯೂ, ರಾಕ್ಷಸಿ ಇರುವ ಮಠದಂತೆಯೂ, ಭಯಂಕರವಾಯಿತು.

ವಿ॥ (೧) ಶುಭವಲ್ಲದುದು (ನ. ತ.) ಆಡುವುದು+ಪೊಲಂ (ಗ.)

238. ನಾವು, ಇಂದು-ಈಗ, ನರಪತಿಗಳೊಳು_ದೊರೆಗಳಲ್ಲಿ, ಭಾಗ್ಯದಲಿ-ಐಶ್ವರ್ಯವಿಷಯದಲ್ಲಿ, ಬಾಹಿರರು_ಹೊರಗಾದವರು, ಅಲಾ ಅಲ್ಲವೇ ? ನಾವು, ಸುಕೃತದೊಳು-ಪುಣ್ಯವಿಷಯದಲ್ಲಿ, ಅರೆಗಲಸಿಗಳು-ಸ್ವಲ್ಪಭಾಗಮಾತ್ರ ಸೇರಿದವರು, ಅಲಾ_ಅಲ್ಲವೇ ? ಹರಹರಾ-ಶಿವಶಿವಾ ! ಮಹಾದೇವ_ಶ್ರೇಷ್ಠದೇವನೇ ! ಪರಮಹರುಷದ್ರುಮದ_ಅತಿ ಸಂತೋಷ ವೆಂಬ ಮರದ, ಬೇರಿಂಗೆ-ಬೇರಿಗೆ, ಉರಿಯಂ-ಬೆಂಕಿಯ ಜ್ವಾಲೆಯನ್ನು, ಉರೆ_ಬಹಳವಾಗಿ, ಚಾಚಿದೆವು ಅಲಾ-ಬಿಡ್ಡಿದೆವಲ್ಲವೇ ! ನಾವು, (೧) ಕಡುದುರಿತಕಾಯರು = ಕಡು-ಬಹಳವಾದ, ದುರಿತ-ಪಾಪದಿಂದ ಕೂಡಿದ, ಕಾಯರು-ಶರೀರವುಳ್ಳವರು, ಅಲೇ-ಅಲ್ಲವೇ ?+ ಎಂದು, ಮಹೀಪಾಲ-ದಶರಥರಾಜನು, ಎಂದನು_ಹೇಳಿದನು.

ಸರಳತಾತ್ಪರ್ಯ ॥ 1. ನಾವು ಈಗ ದೊರೆಗಳೊಳಗೆಲ್ಲ ನಿರ್ಭಾಗ ರಾದೆವು ಅಲ್ಲವೇ ? 2. ಹೀನಪುಣ್ಯರಾದೆವಲ್ಲವೇ ? ಶಿವಶಿವಮಹಾದೇವಾ ! 3. ನಮ್ಮ ಅತಿಸಂತೋಷವನ್ನೆಲ್ಲ ಹಾಳುಮಾಡಿಕೊಂಡೆವಲ್ಲವೇ ? 4. ನಾವು ಬಹುಪಾಪ ಮಾಡಿದವರಲ್ಲವೇ ? ಎಂದು ದಶರಥನೆಂದನು.

ವಿ॥ (೧) ಕಡಿದು+ದುರಿತ (ವಿ. ಪೂ) ಆರಿ ಸ. ದುರಿತಕಾಯರು (ಬ. ವ್ರೀ.)

239. ಎಲೆ ಸುಮಂತ್ರಕ-ಎಲೈ ಸುಮಂತ್ರನೇ, ಹೇಳ-ಮಾತ ನ್ನಾಡಿ, ಫಲಂ ಏನು-ಪ್ರಯೋಜನವೇನು ? ಮೇಲಂ-ಮುಂದೆ ಬರುವು ದನ್ನು, ಅರಿಯದೆ_ತಿಳಿಯದೆ, ಈಗಾತಾಳಗೆ_ಈ ಕೆಡುಕಳಿಗೆ,ಅಸುರ ಅಮ ರರ-ರಾಕ್ಷಸರ ಮತ್ತು ದೇವತೆಗಳ, ಸಂಗ್ರಾಮದಲಿ-ಯುದ್ಧ ನಡೆಯು ವಾಗ, ವರವೆರಡ-ಎರಡು ವರಗಳನ್ನು, ಕೊಟ್ಟೆನು-ಇತ್ತೆನು; ಇವಳು_ಈ ಕೈಕೆಯು, ಎನಗೆ-ನನಗೆ, ಬಾಳ-ಕತ್ತಿಯನ್ನು, ಚಾಚಿದಳು-ಹಾಕಿ ದಳು;+ ಆ ಕತ್ತಿಯು, ಬಂದು, ಗೋನಾಳಗೆ-ಕುತ್ತಿಗೆಗೆ, ಬಿಡ್ಡಿದೆ_ತಗುಲಿ ಕೊಂಡಿದೆ ; ಇವಳು-ಈ ಕೈಕೆಯು, (೧) ತನಗೆ-ನನ್ನ, ನಾಲಗೆಗೆ-ಜಿಹ್ವೆಗೆ, ನರಸುಕ್ಕನು_ನರಗಳು ಸುಕ್ಕಿಕೊಳ್ಳುವ ಔಷಧವನ್ನು, ತಂದು, ಇಕ್ಕಿದಳು-ಇರಿಸಿದಳು.

ಸರಳತಾತ್ಪರ್ಯ ॥ 1. ಎಲೈ ಸುಮಂತ್ರನೇ! ಹೇಳಿ ಪ್ರಯೋಜನ ವೇನು ? ಈ ಕೆಡುಕಳಾದ ಕೈಕೆಗೆ ದೇವಾಸುರರ ಯುದ್ಧದಲ್ಲಿ ಮುಂದೆ

ಟರುವುದನ್ನರಿಯದೆ ಎರಡು ವರ ಕೊಟ್ಟೆನು. 2. ಇವಳು ನಾನು ಕತ್ತಿರಿದುಕೊಂಡು ಪ್ರಾಣಬಿಡುವಹಾಗೆ ಕಠಿನವಾಗಿ ಮಾತ ಗಳನ್ನಾಡಿದಳು ಮತ್ತು ಪ್ರತಿಮಾತನ್ನಾಡುವುದಕ್ಕೆ ಅವಕಾಶವಿಲ್ಲದಂತೆ ಮಾಡಿಬಿಟ್ಟಳು.

ವಿ॥ (೧) ಷಷ್ಠ್ಯರ್ಥದಲ್ಲಿ ಚತುರ್ಥಿ ಬಂದಿದೆ.

240. ಎಲೆ ಮಂತ್ರಿ ಕೇಳ್. ಒಟ್ಟೆಗೆ - ಭ್ರಷ್ಟೆಯಾದ ನನಗೆ ಉತ್ತರವಿದ್ಯವ-ಮುಂದಣ ವಿದ್ಯಮಾನವನ್ನು, ಅರಿಯದೆ-ತಿಳಿಯದೆ ಕೊಟ್ಟರು ಉಂಟೆ-ವರವನ್ನು ಕೊಟ್ಟವರುಂಟೇ ? ಕೊಟ್ಟವರಂ-ಕೊಟ್ಟಂ ತಹ ವರಗಳು,ಎರಡು, ಉಂಟು-ಇವೆ; ಅವರು-ಆ ದಶರಥಮಹಾರಾಜರು, ಅಂದು-ಆ ದೇವಾಸುರರ ಯುದ್ಧದಕಾಲದಲ್ಲಿ, ಬೇಡದೆ-ನಾನಾಗಿ ಪ್ರಾರ್ಥಿ ಸದೆ, ಕೊಟ್ಟರು- ಎರಡುವರ ಕೊಟ್ಟರು; ಭಾವಿಸದೆ - ಬೇರೆಯೋಚನೆ ಮಾಡದೆ, ಸದ್ಧರ್ಮಮಾರ್ಗದಲಿ= ಸತ್- ಒಳ್ಳೆಯ, ಧರ್ಮಮಾರ್ಗದಲಿ- ನ್ಯಾಯರೀತಿಯಿಂದ, ಮನಮುಟ್ಟ - ಮನಃಪೂರ್ವಕವಾಗಿ, ನುಡಿಯಲಿ- ಹೇಳಲಿ;+ಆಗ ವರ ಕೊಟ್ಟುಬಿಟ್ಟು, ಈಗ, ಕೊದಕುಳಿಗುಟ್ಟುತ ಇಹರು ಸಂತಾಪಪಡುತ್ತಿರುವರು;ಇದನು-ಇದರ ಕಾರಣವನ್ನು, ಅರಿಯೆ-ತಿಳಿ ಯೆನು, ನೀ-ನೀನು, ಕೇಳು, ಎಂದು, ಆಕೈಕೆ, ಎಂದಳು-ಹೇಳಿದಳು.

ತಾತ್ಪರ್ಯ ॥ ಹಿಂದಣ ಪದ್ಯದಲ್ಲಿ ದಶರಥನು ಮೇಲನರಿಯದೆ ಕೊಟ್ಟೆ ನೀಗಾತಾಳಿಗೆ........ವರವೆರಡ ಎಂದು ಹೇಳಿದ ಮಾತಿಗೆ ಉತ್ತರ ಹೇಳುತ್ತಾಳೆ:—ಎಲೈ ಮಂತ್ರಿ ! ಕೇಳು ಭ್ರಷ್ಟೆಯಾದ ನನಗೆ ಮುಂದೆ ಬರುವುದನ್ನು ತಿಳಿಯದೆ ವರ ಕೊಡಬಹುದೇ ? ಇವರು ನನಗೆ ಎರಡು ವರಗಳನ್ನೇನೋಕೊಟ್ಟರು ನಾನುಬೇರೆ ಪ್ರಾರ್ಥಿಸಲಿಲ್ಲ. ನಾನು ಬೇಡದೆ ಇವರಾಗಿಯೇ ವರ ಕೊಟ್ಟುದುಂಟೋ ಇಲ್ಲವೋ ಇದನ್ನು ಬೇರೆ ಯೋ ಚನೆ ಮಾಡದೆ ಧರ್ಮದಲ್ಲಿ ದೃಷ್ಟಿಯಿಟ್ಟು ಮನಃಪೂರ್ವಕವಾಗಿ ಹೇಳಲಿ. ಆಗ ವರಕೊಟ್ಟುಬಿಟ್ಟು ಈಗ ಸಂತಾಪಪಡುತ್ತಿರುವರು. ಇದೇನೋ ಕಾಣೆನು. ನೀ ಕೇಳು, ಎಂದು ಕೈಕೆಯು ಹೇಳಿದಳು.

241. ಎನಗೆ-ನನಗೆ, ಅಪಕೀರ್ತಿ - ಅಪಯಶಸ್ಸು, ಬಂದುದು- ಬಂದಿತು. ಬಂದು ವರದಲಿ-ಬಂದು ವರದ ವಿಷಯದಲ್ಲಿ, ನಿಜನಂದನಂಗೆ- ನನ್ನ ಮಗನಾದ ಭರತನಿಗೆ, ರಾಜ್ಯವನು-ಪಟ್ಟಾಭಿಷೇಕಮಾಡಿ ರಾಜ್ಯ

ಕೊಡುವುದನ್ನು, ಬೇಡಿದೆನು-ಪ್ರಾರ್ಥಿಸಿದೆನು; ಒಂದರಲಿ - ಮತ್ತೊಂದು ವರದ ವಿಷಯದಲ್ಲಿ, ರಾಮಂಗೆ-ರಾಮನಿಗೆ, ಅಡವಿಯ-ಅರಣ್ಯದ, ಒಡೆತನವ - ಪ್ರಭುತ್ವವನ್ನು, ಬೇಡಿದೆನು; + ಈ ದಶರಥ ಮಹಾರಾಜರು, ಮೊದಲು-ನೀನು ಬರುವುದಕ್ಕೆ ಮುಂಚೆ, ಇಂದುಮುಖಿಯರ ಸಾಕ್ಷಿಯಲಿ-ಈ ಸ್ತ್ರೀಯರ ಎದುರಾಗಿಯೇ, ಈ ವರವ-ಈ ಎರಡುವರವನ್ನೂ, ಎನಗೆ-ನನಗೆ, ಬಂದಿಸಿದರು-ಕೊಟ್ಟರು; ನೀಂ-ನೀನು, ಬಂದಬಳಿಕ-ಇಲ್ಲಿಗೆ ಬಂದಮೇಲೆ, ನಿಮ್ಮ, ರಾಯರಿಗೆ-ದಶರಥರಾಜರಿಗೆ, ಅನುಮಾನಂ ಆಗಿದೆ-ಸಂದೇಹವಾಗಿದೆ.

ಭಾವಾರ್ಥ ॥ ಒಂದರಲಿ ರಾಮಂಗಡವಿಯೊಡೆತನವ ಬೇಡಿದೆನು-ರಾಮನನ್ನು ವನವಾಸಕ್ಕೆ ಕಳುಹಿಸಬೇಕೆಂದು ಒಂದು ವರವನ್ನು ಕೇಳಿಕೊಂಡೆನು.

ತಾತ್ಪರ್ಯ॥ ನನಗೇನೋ ಅಪಕೀರ್ತಿ ಬಂದಿತು. ನನ್ನ ಮಗ ಭರತನಿಗೆ ಪಟ್ಟಾಭಿಷೇಕ ಮಾಡುವುದು ಒಂದು ವರ. ರಾಮನನ್ನು ವನವಾಸಕ್ಕೆ ಕಳುಹಿಸುವುದು ಒಂದು ವರ. ಈ ಎರಡು ವರಗಳನ್ನು ಇವರನ್ನು ಕೇಳಿಕೊಂಡೆನು. ನಾನು ಕೋಪಿಸಿಕೊಂಡು ಮಲಗಿರಲು ಇವರು ಮಾತನ್ನಾಡುವಾಗ, ನೀವು ಆಡಿದ ಮಾತನ್ನು ಬೇರೆ ಯೋಚಿಸದೆ ನಡಿಸುವುದು ಖಂಡಿತವೇ ? ಎಂದು ಕೇಳಲು, ಖಂಡಿತವೇ ಸರಿ, ಎಂದು ನೀನು ಬರುವುದಕ್ಕೆ ಮೊದಲು ಈ ಹೆಂಗುಸರ ಎದುರಾಗಿಯೇ ನನಗೆ ಈ ಎರಡು ವರವನ್ನು ನಂಬಿಕೆಯಿಂದ ಕೊಟ್ಟರು. ನೀನು ಬಂದಮೇಲೆ ನಿಮ್ಮ ರಾಯರಿಗೆ ಆ ವರ ನಡಿಸಲು ಅನುಮಾನವುಂಟಾಗಿದೆ.

242. ಮನುಕುಲದ - ಮನುವಂಶದ, ರಾಯರಲಿ_ದೊರೆಗಳಲ್ಲಿ, ಹುಸಿ_ಅಸತ್ಯವು (ಸು.ಕ್ತಿ.), ಸಂಜನಿಸದು_ಉಂಟಾಗುವುದಿಲ್ಲ, ಎಂದು-ಎಂದು ತಿಳಿದುಕೊಂಡು, (೧) ಒಳಗರಿಯದೆ-ಮರ್ಮವನ್ನು ತಿಳಿಯದೆ, ನಿಮ್ಮವರ_ನಿಮ್ಮ ಮಹಾರಾಜರನ್ನು,ಎನ್ನಯ_ನನ್ನ, ತನುಜಗೆ-ಮಗನಿಗೆ, ಅಧಿರಾಜತ್ವವನು - ದೊರೆತನವನ್ನು, (೨) ಬೇಡಿದೆನು_ಪ್ರಾರ್ಥಿಸಿಕೊಂಡೆನು; ಜನಿತ - ವಿಶ್ವಮಾತ್ರ, ಸತ್ಯಕೆಮರಳದಲೆ ಇರಲ್_ಸತ್ಯವನ್ನು ಬಿಡದೆ ಇರಲು, ಇನಿತು_ದೊರೆತ್ವ_ವಿಷ್ಣು ಅಸಾಧ್ಯವೆ ? ಸಾಕು_ಬಿಡು,

ನೀಂ-ನೀನು, ರಘುನಂದನಗೆ-ರಾಮನಿಗೆ, ಪಟ್ಟವಕಟ್ಟಿ-ಪಟ್ಟಾಭಿಷೇಕ ವನ್ನು ಮಾಡಿ, ನೆರಹು-ರಾಜ್ಯಪಟ್ಟಾಭಿಷೇಕವನ್ನು ನೆರವೇರಿಸು;+ಎಂದು, ಆ ಕೈಕೆ ಎಂದಳು-ಹೇಳಿದಳು.

ವಿ॥ (೧) ಬಳಗಂ+ಅರಿಯುದೆ (ಕ್ರಿ.) (೨) ಈ ಪದ್ಯದ ಪೂರ್ವಾರ್ಧದಲ್ಲಿ ದ್ವಿಕರ್ಮಕ ಕರ್ತ್ರರ್ಥಕ ಪ್ರಯೋಗವು.

243. ಬೇಡಿದ-ಪ್ರಾರ್ಥಿಸಿದ, ವರವಂ - ಇಷ್ಟಾರ್ಥವನ್ನು, ಈಯಲ್ಕೆ-ಕೊಡುವುದಕ್ಕೆ, ಈತನು-ಈ ದಶರಥರಾಜನು, ದಧೀಚಿ........ ಖ್ಯಾತರೊಳಗೆ=ದಧೀಚಿ-ದಧೀಚಿ ಋಷಿಯು, ಶಿಬಿ-ಶಿಬಿಯು, ಜೀಮೂತ ವಾಹನ-ಜೀಮೂತವಾಹನನು, ಬಲಿ-ಬಲಿಯು, ಕಪೋತ-ಪಾರಿವಾಳದ ಹಕ್ಕಿಯು, ಎಂಬ, ಆಖ್ಯಾತರೊಳಗೆ-ಹೆಸರುಳ್ಳವರಿಗಿಂತಲೂ, ಏನು ಅಗ್ಗಳನೆ-ಉತ್ತಮನೇ ಏನು ? (ಶ್ರೇಷ್ಠನೇ) [ಅಲ್ಲ ಕನಿಷ್ಠನೆಂದು ಭಾವ.] ಎಲೆ ಮಂತ್ರಿ ! ಮಾತು-ಇನ್ನು ಮಾತಾಡುವುದು, ಅದು ಏಕೆ-ಏತಕ್ಕೆ ? ಸಾಕು-ಬಿಡು, ಇನ್ನು, ಅವನಿಯಬಯಕೆ-ನನ್ನ ಮಗನಿಗೋಸ್ಕರ ರಾಜ್ಯವನ್ನಪೇಕ್ಷಿಸುವುದು, ಎತಕೆ-ಏತಕ್ಕೆ ? ರಘುಸಂಜಾತಗೆ-ರಾಮನಿಗೆ, ಅಭಿಷೇಕವನು-ಪಟ್ಟಾಭಿಷೇಕವನ್ನು ಮಾಡಲಿಕೆ-ಮಾಡುವುದಕ್ಕೆ, ಅವನಿಪನ-ದಶರಥರಾಜನನ್ನು, ಎಬ್ಬಿಸು-ಏಳಿಸು.

ಪೂರ್ವಾರ್ಧದ ತಾತ್ಪರ್ಯ ॥ ದಧೀಚಿಋಷಿ, ಶಿಬಿಚಕ್ರವರ್ತಿ, ಜೀಮೂತವಾಹನ ಮಹಾರಾಜ, ಬಲಿಚಕ್ರವರ್ತಿ, ಪಾರಿವಾಳದಹಕ್ಕಿ, ಇವರು ಪೂರ್ವದಲ್ಲಿ ಬೇಡಿದ ವರಗಳನ್ನು ಕೊಟ್ಟು ಹೆಸರುಗೊಂಡಿದ್ದಾರೆ. ಈ ದಶರಥರಾಜನು ಬೇಡಿದ ವರವನ್ನು ಕೊಡುವುದಕ್ಕೆ ಅಂತಹ ಪ್ರಸಿದ್ಧರಾದ ದಧೀಚಿ ಮೊದಲಾದವರಿಗಿಂತಲೂ ಉತ್ತಮನೇ ?

244. ದೊಡ್ಡಿತೇ-ಆಶ್ಚರ್ಯವೇಸರಿ; ಕ್ಷತ್ರಿಯರಿಗೆ-ಅರಸುಗಳಿಗೆ, ಈಕಡುಬದ್ಧತನಂ-ಇಂತಹ ಬಲುಗಟ್ಟಿಗತನವು(ಎಂದರೆ ಆಡಿದ ಮಾತನ್ನು ನಡಿಸಲಾರದ ಗಂಡಾಗುಂಡಿ ಮಾಡುವ ಬಲುಗಟ್ಟಿಗತನವು), ಇರಬೇಕು; ರಾಮಂಗೆ-ರಾಮನಿಗೆ, ಬಡ್ಡಿದ - ಉಂಟುಮಾಡಿದ, ಈ ಕನಡು ಬಂದ-ಈ ದೋಷಕಾರ್ಯವೊಂದನ್ನು, ತಪ್ಪಿಸಿ-ಪರಿಹರಿಸಿ, ನೆನೆದ-ಯೋಚಿಸಿದ, ಮತಿ-ನಿಮ್ಮ ಬುದ್ಧಿಯು, ಲೇಸು-ಉತ್ತಮವಾದದು (ಅಂದರೆ ರಾಮನಿಗೆ

ವನವಾಸವಾಗುವಂತೆ ನಾನು ಮಾಡಿದ ಮೋಸಕಾರ್ಯವನ್ನು ತಪ್ಪಿಸಿ ಯೋಚಿಸಿದ ನಿಮ್ಮ ಬುದ್ಧಿಯೇ ಉತ್ತಮವಾದುದು). ಅಪಕೀರ್ತಿ ವಧು-ಅಪಯಶಸ್ಸೆಂಬ ಹೆಂಗಸು, + ಇವರಿಗೆ, * ಬೊಡ್ಡಿ-ನಾಯಿಕೆಯಾದಳು, ದೂದು-ದೂತಿಯಾದಳು ; ರಘುಸಗರರು - ಈ ದಶರಥರಾಜನ ವಂಶದ ಪೂರ್ವರಾಜರಾದ ರಘು ಸಗರ ಎಂಬಿವರು, ಸಲೆ-ಬಹಳವಾಗಿ, ದೊಡ್ಡಿದರು-ಸತ್ಯಸಂಧರಾದ ಮಹಾತ್ಮರು; ಅವರೊಳಗೆ-ಆರಘು ಸಗರ ರಾಜರಲ್ಲಿ, (೧) ‡ ಆಡ್ಡನಗೆ-ಮುಖತಿರುಗಿಸಿಕೊಂಡು ನಗುವಿಕೆಯು, ಹೊಗದಂತೆ-ಪ್ರವೇಶಿಸದಹಾಗೆ (ಉಂಟಾಗದಹಾಗೆ), ಮಾಡುವುದು-ಮಾಡತಕ್ಕದು, ಇಂದು-ಈಗ, ನಿಮಗೆ, ಉಚಿತ-ಯುಕ್ತವಾದುದು.

ತಾತ್ಪರ್ಯ॥ ಇದು ಆಶ್ಚರ್ಯವೇಸರಿ. ಅರಸುಗಳಿಗೆ ಆಡಿದ ಮಾತನ್ನು ನಡಿಸಲಾರದೆ ಗಂಡಾಗುಂಡಿಮಾಡುವ ಇಂತಹ ಬಲಗಟ್ಟಿಗತನವಿರಬೇಕು. ರಾಮನು ವನವಾಸಮಾಡುವಂತೆ ನಾನು ಮಾಡಿದೆ. ಮೋಸಕಾರ್ಯವನ್ನು ತಪ್ಪಿಸಿ ಯೋಚಿಸಿದ ನಿಮ್ಮ ಬುದ್ಧಿಯೇ ಉತ್ತಮವಾದುದು.

ಇವರು ಸತ್ಯವನ್ನು ಮೀರಿದುದರಿಂದ ಅಪಕೀರ್ತಿಯು ಪ್ರಾಪ್ತವಾಯಿತು. ಇವರ ಹಿಂದಣ ರಾಜರಾದ ರಘು ಸಗರ ಇವರು ಮಹಾ ಸತ್ಯಸಂಧರಾದ ಮಹಾತ್ಮರು. ಇವರು ಅಸತ್ಯಕ್ಕೆ ಬಿದ್ದುದರಿಂದ ಅಂತಹ ಸತ್ಯಶಾಲಿಗಳಾದ ರಘು ಸಗರರು ನಮ್ಮ ವಂಶದ ದಶರಥನು ಸತ್ಯ ತಪ್ಪಿದನಲ್ಲಾ! ಎಂದು ಮುಖತಿರುಗಿಸಿಕೊಂಡು ನಗದಂತೆ ಮಾಡುವುದು (ಅಂದರೆ ಮಾತನ್ನು ನಡಿಸುವುದು) ನಿಮಗೆ ಈಗ ಯುಕ್ತವಾದದು.

ಭಾವಾರ್ಥ ॥ ಬೊಡ್ಡಿದೂದಪಕೀರ್ತಿವಧು-ಇವರಿಗೆ ಅಪಯಶಸ್ಸು ಪ್ರಾಪ್ತವಾಯಿತು; ಅವರೊಳಗೆಡ್ಡನಗೆಹೊಗದಂತೆ ಮಾಡುವುದುಚಿತನಿಮ್ಮಗಿಂದು-ಆ ರಘು ಸಗರರು ನಮ್ಮ ವಂಶದ ದಶರಥನು ಅಸತ್ಯಕ್ಕೆ ಬಿದ್ದನಲ್ಲಾ ! ಎಂದು ಮುಖ ತಿರುಗಿಸಿಕೊಂಡು ನಗದಂತೆ ಮಾಡುವುದು (ಸತ್ಯ

---

* "ಒಡ್ಡಿದು ಅಪಕೀರ್ತಿವಧು" ಎಂಬ ಪಾಠವು ಚೆನ್ನಾಗಿದೆ, ಅರ್ಥ॥ ಅಪಕೀರ್ತಿವಧು-ಅಪಯಶಸ್ಸೆಂಬ ಹೆಣ್ಣು, ಒಡ್ಡಿದುದು -ಸಂಘಟಿಸಿತು (ಅಂದರೆ ಅಪಯಶಸ್ಸು ಗಂಟುಬಿದ್ದಿತು ಎಂದು ಭಾವ).

‡ ಮೂಲದಲ್ಲಿ "ಅಡ್ಡನಗ" ಎನ್ನುವುದು "ಅಡ್ಡನಗೆ" ಎಂದಿರಬೇಕು,

ದಿಂದನಡೆಯುವುದು) ನಿಮಗೆ ಈಗ ಯುಕ್ತ, [ಅಸ್ಮನಗೆ-ಅರ್ಥವಾದ ನಗೆ (ಮಂದಹಾಸ) ಎಂದೂ ಅರ್ಥಮಾಡಬಹುದು].

ವಿ॥ (೧) ಅರ್ಧವಾದ ನಗೆ (ಶ. ವಿ. ಪ್ರೂ)

245. ಈಕ್ಷಿತಿಪ-ಈ ದಶರಥರಾಜನು, + ರಾಮನು ವನವಾಸಕ್ಕೆ ಹೋದರೆ, ಸುತವಿಯೋಗದೊಳು-ಮಗನಾದ ರಾಮನ ಅಗಲುವಿಕೆಯಿಂದ, ಅಳಿಯದೆ ಇರನು-ಸಾಯದೇ ಇರುವುದಿಲ್ಲ; ನೀವು, ಎಂದೂಯಾವಾಗಲೂ, ಉಗ್ರಪಾತಿವ್ರತೆಯರೊಳಗೆ-ಮಹಾಗರತಿಯಲ್ಲಿ,ಅಗ್ಗಳರು-ಶ್ರೇಷ್ಠರು, ಅಪಕೀರ್ತಿ-ಅಪಯಶಸ್ಸು, ನಿಮ್ಮನು-ನಿಮ್ಮನ್ನು, ನೆಮ್ಮುಗು-ಆಶ್ರಯಿಸುವುದು; ಕ್ಷಿತಿಯು-ಭೂಮಿಯಲ್ಲಿರುವ (೧) ಕುಜನರ-ದುರ್ಜನರ, ಜಿಹ್ವೆ-ನಾಲಗೆಯು, ಕಡುಕಊರಿತು-ಬಹಳ ಕ್ರೂರವಾದುದು; (೨) ಕದರ್ಥದಿಂ-ದುರಭಿಪ್ರಾಯದಿಂದ (ಅಂದರೆ ಭರತನಿಗೆ ರಾಜ್ಯವಾಗುವ ಅಭಿಪ್ರಾಯದಿಂದ), ಅವನಿಪಾಲಚ್ಯುತಿಗೆ-ದಶರಥರಾಜನ ವಿನಾಶಕ್ಕೆ, ಮನವನು-ಮನಸ್ಸನ್ನು, ಮಾಡುವುದು-ಮಾಡತಕ್ಕುದು, ನಿಮಗೆ, ಉಚಿತಂ ಅಲ್ಲ-ಯುಕ್ತವಾದುದಲ್ಲ; + ಎಂದು, ಸುಮಂತ್ರನು, ಎಂದ-ಹೇಳಿದನು.

ಭಾವಾರ್ಥ॥ ನಿಮ್ಮನುನೆಮ್ಮುಗಪಕೀರ್ತಿ-ನಿಮಗೆ ಅಪಯಶಸ್ಸು ಬರುವುದು; ಕ್ಷಿತಿಯಕುಜನರಜಿಹ್ವೆಕಡುಕಊರಿತು-ಭೂಮಿಯ ಜನಗಳೆಲ್ಲರೂ ಕೈಕೆಯು ಇಂತಹ ಘಾತುಕತನವನ್ನು ಮಾಡಿದಳೆಂದು ಬಹು ಕ್ರೂರವಾಗಿ ಮಾತನ್ನಾಡುವರು (ಕುಜನರು, ಎಂದು ಮರ್ಮೋದ್ಘಾಟನೆಯ ಮಾತು, ಸಾಮಾನ್ಯವಾಗಿ ಎಲ್ಲಾ ಜನಗಳೂ ಎಂದು ನಿಜಾಭಿಪ್ರಾಯ).

ವಿ॥ (೧) ಕುತ್ಸಿತರಾದ ಜನರು (ಪ್ರಾ ಕ.) (೨) ಕುತ್ಸಿತವಾದ (ಅರ್ಥಂ (ಪ್ರಾ ಕ.)

246. ನಿಮ್ಮ, ಕುಮಾರನು-ಮಗನಾದ ಭರತನು, ಈ ಧರೆಯು-ಈ ಭೂಮಿಯು, ಅರಸುತನದಲಿ-ದೊರೆತನದಲ್ಲಿ, ಇರಲಿ; ರಾಘವೇಶ್ವರಂ-ರಾಮನು, ಭೂಸುರನು ಆಗಿ-ಬ್ರಾಹ್ಮಣನಾಗಿಯೇ, ಇರಲಿ; ಬಳಿಕ-ಅನಂತರ, ರಘುಪತಿ-ರಾಮನು, (೧) ರಾಜಋಷಿತ್ವದಲಿ-ಕ್ಷತ್ರಿಯಮುನಿಧರ್ಮದಿಂದ (ಅಂದರೆ ವಾನಪ್ರಸ್ಥಾಶ್ರಮವನು, ಸ್ವೀಕರಿಸಿ), ಇರಲಿ; ನಿಮಗೆ - ಅಂದರೆ ಕನಿಷ್ಠಪುತ್ರನಾದ ಭರತನಿಗೆ), ಧರೆಯುಸಿರಿ-ರಾಜ

ಸಂಪತ್ತು (ಪಟ್ಟಾಭಿಷೇಕವು), ಮೆರೆವುದು-ಪ್ರಕಾಶಿಸುತ್ತದೆ (ಒಪ್ಪುತ್ತೆ); ಮನು ಆದಿರಾಯರ-ಮನು ಎಂಬವನೇ ಮೊದಲಾದ ನಿಮ್ಮ ವಂಶದ ದೊರೆಗಳ, ತರುಣಿಯರು-ಹೆಂಡತಿಯರು, ನಗದಂತೆ-ಅಪಹಾಸ್ಯ ಮಾಡದ ಹಾಗೆ, ಮಾಡುವುದು-ಹೀಗೆ ಮಾಡತಕ್ಕದು, ನಿಮಗೆ, ಉಚಿತ-ಯುಕ್ತ ವಾದುದು; ಎಂದ-ಎಂದು ಸುಮಂತ್ರನು ಹೇಳಿದನು.

ತಾತ್ಪರ್ಯ॥ ನಿನ್ನ ಬಲಾತ್ಕಾರದಿಂದ ಚಿಕ್ಕಮಗನಾದ ನಿಮ್ಮ ಭರತ ನಿಗೆ ರಾಜ್ಯವಾಗಲಿ. ದೊಡ್ಡಮಗನಾದ ರಾಮನು ಬಡಬ್ರಾಹ್ಮಣನಂತೆ ರಾಜ್ಯಭಾರವಿಲ್ಲದೆ ವನದಲ್ಲಿ ನಿತ್ಯಕರ್ಮಗಳನ್ನು ಮಾಡಿಕೊಂಡು ಇದ್ದು ಕೊಂಡಿರಲಿ. ಮುದುಕನಾದ ಮೇಲೆ ಕ್ಷತ್ರಿಯ ಋಷಿಯ ಧರ್ಮವನ್ನು ಕೈಕೊಂಡು ತಪಸ್ಸುಮಾಡಲಿ ರಾಜ್ಯಭಾರವು ನಿಮ್ಮ ಚಿಕ್ಕಮಗನಿಗೇ ಒಪ್ಪುತ್ತೆ. ನಿಮ್ಮ ವಂಶದ ಮನು ಮೊದಲಾದ ರಾಜರ ಹೆಂಡತಿಯರೆಲ್ಲಾ ನಮ್ಮವಂಶದ ಕೈಕೆಯು ದುಷ್ಟೆಯೆಂದು ನಗದೆ ಗುಣಾಢ್ಯೆಯೆಂದು ಶ್ಲಾಘನೆ ಮಾಡುವಂತೆ ಹೀಗೆ ಮಾಡುವುದೇ ನಿಮಗೆ ಯುಕ್ತವಾದುದು ಎಂದು ಸುಮಂತ್ರನು ಹೇಳಿದನು. (ಇದು ಮರ್ಮೋದ್ಘಾಟನೆಯಾಗಿ ಆಡಿದ ಮಾತು. ಇದೆಲ್ಲಾ ಸರಿಯಾದುದಲ್ಲವೆಂದು ಅಭಿಪ್ರಾಯ)

ನಿಜಾಭಿಪ್ರಾಯ-ನಿಮ್ಮ ವಂಶದ ಕ್ಷತ್ರಿಯರಲ್ಲಿ ದೊಡ್ಡಮಗನಿಗೆ ರಾಜ್ಯಕೊಡುವುದೂ, ಆತನು ಅನೇಕಕಾಲ ರಾಜ್ಯಭಾರ ಮಾಡಿದಮೇಲೆ ಮುದುಕನಾದಾಗ ಯುವರಾಜನಿಗೆ ರಾಜ್ಯಕೊಟ್ಟು ಕ್ಷತ್ರಿಯ ಋಷಿಯಾಗಿ ತಾನು ತಪಸ್ಸುಮಾಡುವುದೂ ವಂಶಪಾರಂಪರ್ಯವಾಗಿ ಬಂದ ಪದ್ಧತಿಯಾ ಗಿದೆ. ಹಾಗಲ್ಲದೆ ನಿಮ್ಮ ಚಿಕ್ಕ ಮಗನಾದ ಭರತನಿಗೆ ದೊರೆತನ ಕೊಡು ವುದು ಸರಿಯಲ್ಲ. ದೊಡ್ಡಮಗನಾದ ರಾಮನು ರಾಜ್ಯಭಾರವಿಲ್ಲದೆ ಬಡಬ್ರಾ ಹ್ಮಣನಂತೆ ವನದಲ್ಲಿ ನಿತ್ಯಕರ್ಮಗಳನ್ನಾಚರಿಸಿಕೊಂಡೇ ಇದ್ದು ಕೊನೆಗೆ ಕ್ಷತ್ರಿಯ ಋಷಿಯಾಗಿ ತಪಸ್ಸುಮಾಡುವುದೂ ಸರಿಯಲ್ಲ. ನಿಮ್ಮ ಭರತ ನಿಗೆ ರಾಜ್ಯಕೊಡುವುದು ಧರ್ಮವೇ? ನಿಮ್ಮ ವಂಶದ ಮನು ಮೊದಲಾದ ರಾಜರ ಹೆಂಡತಿಯರೆಲ್ಲಾ ನಮ್ಮ ವಂಶದ ಕೈಕೆಯು ದೊಡ್ಡ ಮಗನನ್ನು ಬಿಟ್ಟು ಚಿಕ್ಕಮಗನಿಗೆ ರಾಜ್ಯಕೊಡುವಂತೆ ಅನ್ಯಾಯಮಾಡಿದಳಲ್ಲಾ! ಎಂತಹ ದುಷ್ಟೆಯು? ಎಂದು ನಿಮ್ಮನ್ನು ಅಪಹಾಸಮಾಡುತ್ತಾರೆ. ಹಾಗೆ

ಅಪಕೀರ್ತಿ-ಹೊಂದುವುದು ನಿಮಗೆ ಯುಕ್ತವಾದುದಲ್ಲ, ಎಂದು ಸುಮಂತ್ರನು ಎಂದನು.

ವಿ|| (೧) ರಾಜನಾದ+ಋಷಿ (ವಿ. ಪೂ.) ಋಷಿಯು+ಭಾವಂ= ಋಷಿತ್ವಂ (ತದ್ಧಿತಾಂತ).

247. ಬೇಡಿದ-ನೀವು ಪ್ರಾರ್ಥಿಸಿದ, ಈ ವರದಿಂದ-ಈ ವರದ ಕಾರಣದಿಂದ, ನೃಪತಿಯು ಕೂಡಿಕೊಂಡು-ರಾಮ ದಶರಥರಾಜರೊಡನೆ, ವನಪ್ರವಾಸವ-ಅರಣ್ಯವಾಸವನ್ನು, ಮಾಡುವೆನು-ಮಾಡುತ್ತೇನೆ (ಅಂದರೆ ರಾಮನೂ ದಶರಥನೂ ನಾನೂ ಕೂಡ ವನಕ್ಕೆ ಹೋಗುತ್ತೇವೆ, ಎಂದು ಭಾವ); ಮರೆ ಏನು-ಗುಟ್ಟೇನು ? (ಅಂದರೆ ಪ್ರಕಾಶವಾಗಿಯೇ ಹೇಳುತ್ತೇನೆ ಎಂದು ಭಾವ); ಮನದ-ಮನಸ್ಸಿನ, ಅನುತಾಪಂ - ಸಂತಾಪವು, ಇನ್ನು, ಏಕೆ-ಏತಕ್ಕೆ ? ನಿಮಗೆ, ಬೋಡಿ-ಬಂದು ಕೊರತೆಯು, ಆಗದ ಪೊಲು-ಆಗದೆ ಇರುವಂತೆಯೂ, ಈ ನೃಪಂ - ಈ ದಶರಥರಾಜನು, ಆಡಿ-ಮಾತುಕೊಟ್ಟು, ಹುಸಿ-ಸುಳ್ಳು, ಹೊಗದಂತೆ-ಉಂಟಾಗದಹಾಗೂ,+ ಮಾಡಿ, ಕೀರ್ತಿಯ-ಯಶಸ್ಸನ್ನು, ಜೋಡಿಸುವೊಡೆ-ಹೊಂದಿಸುವುದಕ್ಕೆ, ಇದು, ಸಮಯಂ-ಸರಿಯಾದ ಕಾಲವು, ಎಂದು, ಸುಮಂತ್ರ, ಕೈಮುಗಿದ-ಹಸ್ತಗಳನ್ನು ಜೋಡಿಸಿದನು (ವಂದಿಸಿದನು).

248. ಸುಮಂತ್ರ—ಎಲೈ ಸುಮಂತ್ರನೇ ! ಬಿಡು—ಈ ಮಾತು ಸಾಕು ; ಎಮ್ಮೊಡನೆ-ನಮ್ಮ ವಿಷಯದಲ್ಲಿ, (೧) ಕುಮಂತ್ರಕೃತ್ಯವ-ಕೃತ್ರಿಮಾಲೋಚನೆಯ ಕಾರ್ಯವನ್ನು, ನಡಿಸಬೇಡ-ಮಾಡಬೇಡ; ರಘುಗಳ-ರಘುವಂಶದ ದೊರೆಗಳ, ಮಡದಿಯರು - ಹೆಂಡತಿಯರು, ಎಮ್ಮ-ನಮ್ಮನ್ನು, ನಗಲಿ-ಅಪಹಾಸಮಾಡಲಿ ; (೨) ಆದದುಷ್ಕೀರ್ತಿ-ಬಂದ ಅಪ ಯಶಸ್ಸು, ನೆಮ್ಮಲಿ-ಆಶ್ರಯಿಸಲಿ,+ನಿಮ್ಮ ಮಾತಿಗೆ, ಪುನರುಕ್ತಿ-ಎರಡು ಮಾತು, ಬಡರಿಸಿಲಿ - ಉಂಟಾದಾಗ್ಗ್ಯ, ನಮ್ಮ ಯ - ನಮ್ಮ, ನುಡಿಗೆ-ಮಾತಿಗೆ, + ಪುನರುಕ್ತಿ-ಎರಡುಮಾತು, ಹೊಗದು-ಉಂಟಾಗದು ; ಈ ಜಂಜಡೆಯತನವನು-ಈ ಕೃತ್ರಿಮಸಂಧಾನವನ್ನು, ಅಂ-ನಾವು, ಬಲ್ಲೆವು-ತಿಳದಿದ್ದೇವೆ ; ಕೆಲಕೆಸಾರು-ಆಕಡೆಗೆ ಹೋಗು ; + ಎಂದು ಕೈಕೆಯು, ಸುಮಂತ್ರಕನ-ಸುಮಂತ್ರನನ್ನು ಕುರಿತು, ಎಂದಳು-ಹೇಳಿದಳು.

ಭಾವಾರ್ಥ ॥ ಕುಮಂತ್ರಕೃತ್ಯವ ನಡಿಸಬೇಡವೆನ್ನೊಡನೆ-ನನ್ನ ಕೂಡ ಕುಹಕದಮಾತನ್ನಾಡಬೇಡ; ನಿಮ್ಮಲಿಯಾದ ದುಷ್ಕೀರ್ತಿ-ಬಂದ ಅಪಯಶಸ್ಸುನಮಗೆ ಬರಲಿ; ಬಡರಿಸಲಿ....ಹೊಗದು-ನೀವು ಆಡಿದ ಮಾತಿಗೆ ತಪ್ಪಿ ಎರಡು ಮಾತನ್ನಾಡಿದಾಗ್ಯೂ ನಾವು ಎರಡು ಮಾತಾಡುವುದಿಲ್ಲ.

ವಿ॥(೧) ಕುತ್ಸಿತವಾದ + ಮಂತ್ರಂ (ಪ್ರಾ.ಕ.) ಕುಮಂತ್ರದ+ಕೃತ್ಯಂ (ಷ. ತ.) (೨) ದುಷ್ಟವಾದ + ಕೀರ್ತಿ (ಪ್ರಾ. ಕ.) ಆದುದು-ದುಷ್ಕೀರ್ತಿ (ಗ.)

249. ಸುಮಂತ್ರ-ಎಲೈ ಸುಮಂತ್ರನೇ, ನೀನು, ಆಡಿದ-ಹೇಳಿದ, (೧) ಸುಭಾಷಿತಂ-ಒಳ್ಳೆಯಮಾತು (ಅಂದರೆ ಅರಸನ ಸತ್ಯ ಕೆಡದಂತೆ ಮಾಡುವಮಾತು), ಯಥಾರ್ಥ-ಸತ್ಯವಾದುದು; ಎಂದು, ನಂಬಿ ಇಹುದು-ನಂಬಿರತಕ್ಕುದು ; ಅದಕೆ-ಆ ಮಾತಿಗೆ, ಹೊರೆ-ಭಾರವು (ವ್ಯತ್ಯಾಸವು), ಹೊಗದಂತೆ-ಉಂಟಾಗದಹಾಗೆ, ನಡಿಸುವೆವು-ನೆರವೇರಿಸುತ್ತೇವೆ; ಎಂದು, ಮುನಿ-ವಸಿಷ್ಠಋಷಿಯು, ನುಡಿಯೆ-ಹೇಳಲು, ಆತಂ- ಆ ಸುಮಂತ್ರನು, ಆಡಿದ-ಹೇಳಿದ, ತುದಿಯಕೊಸರನು-ತುದಿನಾಲಗೆಯ ಮಾತನ್ನು (ಅಂದರೆ ರಾಮನನ್ನು ವನವಾಸಕ್ಕೆ ಕಳುಹಿಸುವ ಮಾತನ್ನು), ಇನ್ನು, + ನೀನು ಗದಿಸಬೇಡ-ಹೇಳಬೇಡ; ನುಡಿ-ಆ ಮಾತು, ನಿಮ್ಮ, ರಾಯನ - ದಶರಥ ರಾಜನ, ವದನದಲಿ-ಬಾಯಿಯಲ್ಲಿ, ಹುಟ್ಟಲಿ-ಹೊರಡಲಿ, + ಎಂದು, ಕೈಕೆ, ಮುನಿಪತಿಗೆ-ವಸಿಷ್ಠಮುನೀಂದ್ರನಿಗೆ, ಎಂದಳು-ಹೇಳಿದಳು.

ಭಾವಾರ್ಥ ॥ ಅದಕೆ ಹೊರೆಹೊಗದಂತೆ ನಡಿಸುವೆವು-ಆ ಮಾತಿಗೆ ವ್ಯತ್ಯಾಸಬಾರದಂತೆ ನಡಿಸುವೆವು.

ವಿ ॥ (೧) ಸುಷ್ಠು ಆದ ಭಾಷಿತಂ (ಪ್ರಾ. ಕ.)

250. ನೀಂ - ನೀವು, ಬೇಡಿದದು-ಕೇಳಿದುದು, ಐಸು ಅಲೇ-ಅಷ್ಟೇ ಅಲ್ಲವೇ ? ತಾಂ-ನೀವು, ಕೇಳಿದ ಆ ಮಾತು, ಏಸುದೊಡ್ಡಿತು-ಎಷ್ಟು ದೊಡ್ಡದು ? (ಅಂದರೆ ಏನು ಅಸಾಧ್ಯ !) ತಂದೆ-ನನ್ನ ಜನಕನಾದ ದಶರಥರಾಜನು, ಆಡಿದ-ಹೇಳಿದ, ಭಾಷೆಗೆ-ಮಾತಿಗೋಸ್ಕರ, ಇದಕೋ-ಇಗೋ ! ಭಾಷೆ-ನಾನು ಕೊಟ್ಟಮಾತು ; + ಎಂದು, ಆ ಜನನಿಗೆ-ಆ ಮಲತಾಯಿಯಾದ ಕೈಕೆಯನ್ನು ಕುರಿತು, ಆರಾಮ-ಆ ರಾಮನು, ಎನುತ-ಹೇಳುತ್ತಾ, ಎಮ್ಮ-ನಮ್ಮ, ಅವನೀಶನಲಿ-ದಶರಥ ರಾಜನಲ್ಲಿ, ಅನೃತಂ-

ಅಸತ್ಯವು, ಹೊಗದಂತೆ-ಉಂಟಾಗದಹಾಗೆ, ಲೇಸುಮಾಡಿದಿರಿ-ಹಠಹಿಡಿದು ಒಳ್ಳೆಯದನ್ನು ಮಾಡಿದಿರಿ; ಕಲ್ಮಷವಂ-ಕಸರನ್ನು, ಉಗಿದಬಿಟ್ಟ (ಎಂದರೆ ಕಸರು ಇಲ್ಲದಿರುವ), ಅನ್ವಯದ-ನಮ್ಮ ವಂಶವೆಂಬ, ಭೂಷಣವ_ಆಭರಣ ವನ್ನು, ಘಟದಲಿ - ಪರೀಕ್ಷೆಯೆಂಬ ಶರಾವೆಯಲ್ಲಿ (ಪರೀಕ್ಷೆಯೆಂಬ ಮಣ್ಣಿನ ತಟ್ಟೆಯಲ್ಲಿ), ಕಾಸಿದಿರಿ-ಕಾಸಿನೋಡಿದಿರಿ.

ಭಾವಾರ್ಥ॥ ಘಟದಲಿಕಾಸಿದಿರಿ ಕಲ್ಮಷವನುಗಿದನ್ವಯಯದಭೂಷ ಣವ-ದೋಷರಹಿತವಾದ ನಮ್ಮ ವಂಶದಲ್ಲಿ ದೋಷವಿದೆಯೋ ಇಲ್ಲವೋ ಎನ್ನುವುದನ್ನು, ವರ ಕೊಟ್ಟುದನ್ನು ನಡಿಸಿಕೊಡಬೇಕೆಂದು ಹಠ ಮಾಡು ವುದರಿಂದ ಪರೀಕ್ಷೆಮಾಡಿ ನೋಡಿದಿರಿ.

251. ಭರತನು, ರಾಜ್ಯವನು-ರಾಷ್ಟ್ರವನ್ನು, ಆಳಲಿ-ರಕ್ಷಿಸಲಿ; ನೀಂ-ನೀವು, ನರಪತಿಯ-ದಶರಥರಾಜನ, ಚರಣಾರವಿಂದದ-ಪಾದಕಮ ಲದ, ಪರಮಸೇವಾನಿರತರು-ಬಹು ಶೂಶ್ರೂಷಾಸಕ್ತರು, ಆಗಿ ಇರಿ ; ನಿಮ್ಮ, ಅನುಜ್ಞೆಯಲಿ - ಅಪ್ಪಣೆಯಿಂದ, ಚರಿಸುವೆನು-ಹೊರಡುವೆನು ; ನೀಂ-ನೀವು, ನುಡಿದ-ಹೇಳಿದ, ವರುಷದ-ಹದಿನಾಲ್ಕು ವರುಷಗಳ, ಪರಿ ಗಣದಪರಿಯಂತಂ-ಲೆಕ್ಕದವರೆಗೂ, ವನವಾಸವನು-ಅರಣ್ಯವಾಸವನ್ನು, ಗೋಚರಿಸುವೆನು-ಗೋಚರಪಡಿಸುವೆನು; + ಎಂದು, ಆ ರಾಮ, ಕೈಕೆಗೆ, ಎಂದನು.

252. ಆ ಸಕಲ......ವಾಸ=ಆ, ಸಕಲ-ಸಮಸ್ತವಾದ, ಲೋಕ-ಪ್ರಪಂಚಗಳಲ್ಲಿಯೂ, ಏಕ-ಅದ್ವಿತೀಯವಾದ (ಸಾಮ್ಯವಿಲ್ಲದ), ಲೀಲಾ-ವ್ಯಾಪಾರಕ್ಕೆ, ಆವಾಸ-ವಾಸಸ್ಥಾನವಾದ ತೊರವೆಯರಾಯನು-ತೊರವೆ ಯೆಂಬ ಊರಿನ ಸ್ವಾಮಿಯಾದ ನರಸಿಂಹನೆಂಬ ನಾರಾಯಣನ ಅವತಾರ ವಾದ ರಾಮನು, ಆ ಸತಿಯಂ-ಆ ಕೈಕೆಯನ್ನು, ಉಪಚರಿಸಿ-ಆದರಿಸಿ, ಶ್ರುತಿ.........ಲಾಪದಿಂದ=ಶ್ರುತಿ-ವೇದವು, ಧರ್ಮಶಾಸ್ತ್ರ-ಮಾನವ ಮೊದ ಲಾದ ಸ್ಮೃತಿಗಳು ಇವುಗಳ, ವಿಳಾಸವಚನ_ವಿಧಿವಾಕ್ಯದ, ಆಳಾಪದಿಂದ-ಹೇಳುವಿಕೆಯಿಂದ, ಪಿತನ-ತಂದೆಯಾದ ದಶರಥರಾಜನ, ಆಯಾಸವನು-ಬಳಲುವಿಕೆಯನ್ನೂ, ಅನುತಾಪವನು-ಸಂತಾಪವನ್ನೂ, ಬಿಡಿಸಿ_ಪರಿಹರಿಸಿ (ಎಂದರೆ ಶ್ರುತಿ ಸ್ಮೃತಿ ವಾಕ್ಯಗಳಿಂದ ಸಮಾಧಾನಹೇಳಿ ತಂದೆಯು ಬಳಲಿಕೆ

ಯನ್ನೂ ಸಂತಾಪವನ್ನೂ ಪರಿಹರಿಸಿ ಎಂದು ಭಾವ); ಅಮರೇಂದ್ರಾದಿಗಳು=ಅಮರೇಂದ್ರ - ದೇವೇಂದ್ರನೇ, ಆದಿಗಳು - ಮೊದಲಾದವರು, ನಲಿಯೆ-ಸಂತೋಷಿಸಲು, ಆ ವನವಾಸವನು - ಆ ಅರಣ್ಯವಾಸವನ್ನು, ಕೈಕೊಂಡನು-ಸ್ವೀಕರಿಸಿದನು.

ಟಿಪ್ಪಣಿ ॥ ಈ ರಾಮಾಯಣ ಕವಿಯು ತೊರವೆಯರಾಯ ಎಂದು ತಾನು ವಾಸವಾಗಿದ್ದ ತೊರವೆ ಎಂಬ ಗ್ರಾಮದಲ್ಲಿ ತನ್ನ ಇಷ್ಟದೇವತೆಯಾದ ನರಸಿಂಹಸ್ವಾಮಿಯ ಅಂಕಿತವನ್ನು ಸೂಚಿಸಿದ್ದಾನೆ. ಧರ್ಮಶಾಸ್ತ್ರ-ಸರಿಯಾದ ಆಚರಣೆಯನ್ನು ಹೇಳುವ ಶಾಸ್ತ್ರ.

---

23. ಸ್ಯಮಂತಕೋಪಾಖ್ಯಾನ (ಭಾಗವತ)

ಸೂ ॥ (೧) ಆ ಸತ್ರಾಜಿತಾಖ್ಯನು=ಆ, ಸತ್ರಾಜಿತ - ಸತ್ರಾಜಿತನೆಂಬ, ಆಖ್ಯನು-ಹೆಸರುಳ್ಳ ದೊಡ್ಡ ಯಾದವನು, (೨) ಹೊತ್ತುದುರಿತವ-ಕೃಷ್ಣನಮೇಲೆ ದೂರು ಹೊರಿಸಿದುದರಿಂದ ತಾನು ಧರಿಸಿದ ಪಾಪವನ್ನು, ಪರಿಹರಿಸಲು ಎಂದು - ನಿವಾರಣೆಮಾಡಿಕೊಳ್ಳಬೇಕೆಂದು, ನಿತ್ಯಾತ್ಮಕಂಗೆ-ಶಾಶ್ವತವಾದ ಸ್ವರೂಪವುಳ್ಳ ಶ್ರೀ ಕೃಷ್ಣನಿಗೆ, ಒಲಿದು-ಪ್ರೀತಿಸಿ, ಸತ್ಯಭಾಮಾದೇವಿಯನು-ತನ್ನ ಮಗಳಾದ ಸತ್ಯಭಾಮಾದೇವಿಯನ್ನು, ಇತ್ತನು-ಮದುವೆಮಾಡಿಕೊಟ್ಟನು.

ಪಾ॥ (೧) ಸತ್ರಾಜಿತಾಖ್ಯನು (ಬ್ರ. ಪ್ರೀ.) ಆ ಸತ್ರಾಜಿತಾಖ್ಯನು (ಗ.) (೨) ಹೊತ್ತುದು+ದುರಿತಂ (ಗ.)

ಟಿಪ್ಪಣಿ॥ ಸೂ, ಎಂದರೆ ಸೂಚನೆ-ಎಂದರೆ ಕಥಾಭಾಗವನ್ನು ಸಂಕ್ಷೇಪಿಸಿ ತೋರಿಸುವುದು.

253. ಅರಸ-ಪರೀಕ್ಷಿದ್ರಾಜನೇ ! ಕೇಳು. ಆ ದ್ವಾರಕಾಪುರವರದಲಿ-ಪ್ರಸಿದ್ಧವಾದ ಶ್ರೇಷ್ಠವಾದ ದ್ವಾರಕಾಪಟ್ಟಣದಲ್ಲಿ, ಆ ಸತ್ರಾಜಿತಾಖ್ಯನು-ಆ ಸತ್ರಾಜಿತನೆಂಬ ಹೆಸರುಳ್ಳ ಯಾದವೇಶ್ವರನು, ತರಣಿಯನು-ಸೂರ್ಯನನ್ನು, ತತ್ತ್ವದಭಾವಬಳಕುತಿಯಲಿ-ಪರಮಾತ್ಮಸ್ವರೂಪವೆಂಬ ಅಭಿಪ್ರಾಯದಿಂದ ಕೂಡಿದ ಭಕ್ತಿಯಿಂದ, ಭಜಿಸಿದನು-ತಪಸ್ಸಿನಿಂದ

ಸೇವಿಸಿದನು;+ಸೂರ್ಯನು, ಇರದೆ-ಉಪೇಕ್ಷಿಸದೆ, ನಿಜಭಕ್ತಂಗೆ-ತನ್ನ ಪೂಜಕನಾದ, ಆತಂಗೆ-ಆ ಸತ್ರಾಜಿತನಿಗೆ, ರತ್ನವನು-ಸ್ಯಮಂತಕವೆಂಬ ಮಣಿಯನ್ನು, ಕರುಣಿಸಿದನು-ಕೃಪೆಮಾಡಿದನು (ಕೊಟ್ಟನು) ; ಬಳಿಕ-ಅನಂತರದಲ್ಲಿ, ಆ ಪರಮಗುಣನಿಧಿ-ಆ ಉತ್ಕೃಷ್ಟಗುಣಗಳಿಗೆ ನಿಕ್ಷೇಪ ಸ್ಥಾನವಾದ ಸತ್ರಾಜಿತನು,ಅಂದು-ಆ ಕಾಲದಲ್ಲಿ, (೧) ಆ ದ್ವಾರಕಾಪುರಕೆ-ಆ ದ್ವಾರಕಾಪಟ್ಟಣಕ್ಕೆ, ಬಂದನು.

ಭಾವಾರ್ಥ ॥ ತರಣಿಯನುಭಜಿಸಿದನುತತ್ತ್ವದಭಾವಭಕುತಿಯಲಿ-ಸಾಕ್ಷಾತ್ಪರಮಾತ್ಮನೇ ಸೂರ್ಯನೆಂದು ಭಾವಿಸಿ ಭಕ್ತಿಯಿಂದ ಉಪಾಸನೆ ಮಾಡಿದನು.

ಟಿಪ್ಪಣಿ ॥ ಸ್ಯಮಂತಕೋಪಾಖ್ಯಾನವು ಭಾಗವತದಲ್ಲಿ ಸೇರಿದುದು. ಇದನ್ನು ಶುಕಮುನಿಯು ಪರೀಕ್ಷಿದ್ರಾಜನಿಗೆ ಹೇಳಿದನು.

ಸಂದರ್ಭ ॥ ಅಭಿಮನ್ಯು ಪುತ್ರನಾದ ಪರೀಕ್ಷಿದ್ರಾಜನು ಬೇಟೆಗೆ ಹೋಗಿ ಅಲ್ಲಿ ಸಮಾಧಿಯೋಗದಲ್ಲಿದ್ದ ಶಮೀಕಋಷಿಯನ್ನು ಕುರಿತು ನಾನು ಹೊಡೆದ ಮೃಗವು ಎಲ್ಲಿಹೋಯಿತು ? ಎನ್ನಲು ಆತನು ಮೌನವ್ರತ ದಿಂದ ಉತ್ತರ ಕೊಡದಿರಲಾಗಿ, ಆತನ ಕೊರಳಿಗೆ ಬಂದು ಸತ್ತ ಸರ್ಪ ವನ್ನು ಮಾಲೆಹಾಕಿ ಹೋದನು. ಬಳಿಕ ಆ ಮುನಿಯ ಪುತ್ರನಾದ ಶೃಂಗಿಋಷಿಯು ಇದನ್ನು ನೋಡಿ ಕೋಪದಿಂದ ತನ್ನ ತಂದೆಗೆ ಈ ಅಪ ಮಾನ ಮಾಡಿದವನು ಸರ್ಪದಷ್ಟನಾಗಿ ಸಾಯಲಿ, ಎಂದು ಶಾಪವನ್ನಿತ್ತನು. ಪರೀಕ್ಷಿದ್ರಾಜನು ಇದನ್ನು ಕೇಳಿ ಋಷಿಯ ಶಾಪಪ್ರಕಾರ ತನ್ನ ಜೀವಿತ ಕಾಲವು ಏಳುದಿವಸಗಳದ್ದುದರಿಂದ ಅಷ್ಟರೊಳಗಾಗಿ ಪರಲೋಕಗತಿಗೆ ಸಾಧನಮಾಡಿಕೊಳ್ಳಬೇಕೆಂದು ಮುಕ್ತಿದಾಯಕವಾದ ವ್ಯಾಸಕೃತವಾದ ಭಾಗವತವನ್ನು ವ್ಯಾಸರ ಪುತ್ರರಾದ ಶುಕಮುನೀಂದ್ರರಿಂದ ಕೇಳಿದನು.

254. ಅಂಬುರುಹಮಿತ್ರನ-ಸೂರ್ಯನ, ಬಕುತ-ಭಕ್ತನಾದ ಸತ್ರಾಜಿತನು, ತರಣಿ-ಸೂರ್ಯನು, ತನಗೆ, ಇತ್ತ-ಕೊಟ್ಟ, ಅಮಲರತ್ನ ವನು-ನಿರ್ಮಲವಾದ ಸ್ಯಮಂತಕರತ್ನವನ್ನು, ಇರದೆ-ಬಿಡದೆ, ಕೊರಳಲಿ-ಕತ್ತಿನಲ್ಲಿ, ಧರಿಸಿಕೊಂಡು-ಅಲಂಕರಿಸಿಕೊಂಡು, +ಸಮುದ್ರತೀರದಿಂದ, ಪುರವರಕೆ-ಶ್ರೇಷ್ಠವಾದ ದ್ವಾರಕಾಪಟ್ಟಣಕ್ಕೆ, ಬರುತ ಇರಲು-ಬರುತ್ತಿ

ರಲಾಗಿ, (೧) ಪುರವಾಸಿಜನ-ಆ ಪಟ್ಟಣದಲ್ಲಿ ವಾಸಿಸುವ ಜನಗಳು, ಕಂಡು-ನೋಡಿ, ಇರದೆ-ಕೂಡಲೇ, ನೋಡುವೆವು-ಕೃಷ್ಣನನ್ನು ನೋಡೋಣ, ಎನುತ-ಎನ್ನುತ್ತಾ, ಹರಿತಂದು-ಓಡಿಬಂದು, ಇರದೆ-ಬಡನೆಯೇ, ಕೃಷ್ಣಂಗೆ-ತಮ್ಮ ಅರಸಾದ ಕೃಷ್ಣಸ್ವಾಮಿಗೆ, ಕೈಮುಗಿದು-ಹಸ್ತಗಳನ್ನು ಜೋಡಿಸಿಕೊಂಡು, ಬಿನ್ನಹಮಾಡಿದರು-ವಿಜ್ಞಾಪಿಸಿಕೊಂಡರು.

ವಿ॥ (೧) ಪುರವಾಸಿ (ಉಪ. ಸ.) ವಾಸಿಜನ (ವಿ. ಪೂ.)

255. ದೇವದೇವರ-ದೇವತೆಗಳಿಗೆ ಒಡೆಯರಾದ ನಿಮ್ಮ, ಚರಣ....ಕೆ=ಚರಣಕಮಲ-ತಾವರೆಹೂವಿನಂತಿರುವ ಪಾದಗಳ, ಯುಗ-ಎರಡರ, ಅವಲೋಕನಕೆ-ಸಂದರ್ಶನಕ್ಕೋಸ್ಕರವಾಗಿ, ರಾಜೀವಸಖಂ-ಸೂರ್ಯನು, ಇಂದು-ಈಗ, ಇದೆ ಬಂದಂ-ಇನ್ನೇನು ಬಂದನು ; ಇದೋ-ಇಲ್ಲಿನೋಡಿ ; ಈಕ್ಷಿಸುವವರ-ಅವನನ್ನು ನೋಡುವವರ, ದೃಷ್ಟಿಗಳು-ಕಣ್ಣುಗಳು, ಸೀವುತ ಇವೆ-ಸುಟ್ಟುಹೋಗುತ್ತಲಿವೆ ; ಅಧಿಕಕೃಪಾವಲೋಕನದಿಂದ-ಅಧಿಕ-ಹೆಚ್ಚಾದ, ಕೃಪಾ-ದಯಿಂದ ಕೂಡಿದ, ಅವಲೋಕನದಿಂದ-ದೃಷ್ಟಿಯಿಂದ, ರಕ್ಷಿಸುವುದು-ನಮ್ಮನ್ನು ಕಾಪಾಡಬೇಕು, ಎಂದು, ಜನಗಳು, ಎನಲು-ಹೇಳಿಕೊಳ್ಳಲಾಗಿ, ರಾಜೀವನಾಭನು-ಕೃಷ್ಣನು, ನೋಡಿ-ಈಕ್ಷಿಸಿ, ನಗುತ-ನಗುತ್ತಾ, ಅವರೊಡನೆ-ಆ ಜನಗಳ ಕೂಡ, ಇಂತು ಎಂದನು (ಸತ್ರಾಜಿತನು ಸ್ಯಮಂತಕರತ್ನವನ್ನು ಕೊರಳಿಗೆ ಹಾಕಿಕೊಂಡು ಬರುತ್ತಿರಲು ಆ ರತ್ನದ ತೇಜಸ್ಸನ್ನು ನೋಡಿ ಸೂರ್ಯನೇ ಬರುತ್ತಾನೆಂದು ಜನರು ಭ್ರಾಂತಿಗೊಂಡರು).

256. ಮುರವೈರಿ-ಶ್ರೀಕೃಷ್ಣನು, ನಗುತ-ನಗುತ್ತಾ, ಕಂಜಸಖನು-ಸೂರ್ಯನು, ಅಲ್ಲ ಅಲ್ಲ-ಅಲ್ಲ ಅಲ್ಲವು; ಬೆದರದೆ ಇರಿ-ಹೆದರಬೇಡಿರಿ ಅಂಜದೆ ಇರಿ ಅಂಜದೆ ಇರಿ-ಭಯಪಡಬೇಡಿರಿ;ಭಯಪಡಬೇಡಿರಿ; ಬರಿದೇ-ವ್ಯರ್ಥವಾಗಿ (ಸುಮ್ಮನೆ), ಗುಂಜೆ-ಗುರುಗಂಜಿಯು, ಮಾಣಿಕಂ-ಮಾಣಿಕ್ಯರತ್ನವು (ಕೆಂಪುರತ್ನವು), ಎಂಬ-ಎಂದು ಹೇಳುವ, ಮರುಳುಗಳಂತೆ-ಮೂರ್ಖರಹಾಗೆ (ಅಥವಾ) (ಹುಚ್ಚರಹಾಗೆ,) ಮತಿಗೆಟ್ಟು-ಬುದ್ಧಿಗೆಟ್ಟು (ಭ್ರಾಂತಿಹೊಂದಿ) (ಅಂದರೆ ಸ್ಯಮಂತಕರತ್ನಧರಿಸಿದ ಸತ್ರಾಜಿತನನ್ನು ಸೂರ್ಯನೆಂದು ಭ್ರಾಂತಿಗೊಂಡು) ಅಂಜದೆ ಇರಿ ; ಸತ್ರಾಜಿತನು, ವರಕಂ

ಜಸಖರಂ-ಶ್ರೇಷ್ಠನಾದ ಸೂರ್ಯನು, ಇತ್ತ-ತನಗೆ ಕೊಟ್ಟ, ಅಮಳರತ್ನ ಸುರಂಜಿತನು - ಅಮಳ - ಸ್ವಚ್ಛವಾದ, ರತ್ನ-ಸ್ಯಮಂತಕಮಣಿಯಿಂದ, ಸುರಂಜಿತನು-ಚೆನ್ನಾಗಿ ಪ್ರಕಾಶಿಸುವಂತಹವನಾಗಿ, ಬರುತ ಇಹನು-ಬರುತ್ತ ಇರುವನು ; ಎಂದನು-ಎಂದು ಹೇಳಿದನು.

257. ಮಧುವೈರಿ - ಕೃಷ್ಣನು, ಎನುತ ಇರಲು-ಜನರೊಡನೆ ಹೀಗೆ ಹೇಳುತ್ತಿರಲಾಗಿ, + ಸತ್ರಾಜಿತನು, ತನ್ನಯ-ತನ್ನ, ಮನೆಯ-ಗೃಹವನ್ನು, ಹೊಕ್ಕನು-ಪ್ರವೇಶಿಸಿದನು ; ಪೂಜಿಸುತ್ತ ಇರಲು-ಆ ರತ್ನವನ್ನು ಪೂಜಿಸುತ್ತಿರಲಾಗಿ, (೧) ಮಣಿರಥನು-ರತ್ನಖಚಿತವಾದ ರತ್ನವುಳ್ಳವನಾಗಿ, ಸಂಜನಿಸಿದನು-ಆದನು ; ಧನವಂತನು-ದ್ರವ್ಯವುಳ್ಳವನು, ಆದನು; ಮಣಿ-ಆ ಸ್ಯಮಂತಕರತ್ನವು, (೨) ದಿನದಿನದಲಿ-ಪ್ರತಿದಿವಸದಲ್ಲಿಯೂ, (೩) ಎಂಟೆಂಟುಭಾರದ-ಎಂಟೆಂಟು ಭಾರದತೂಕವುಳ್ಳ, ಕನಕವನು-ಚಿನ್ನವನ್ನು, (೪) ಕೊಡುವುದು-ಕೊಡುತ್ತಿದ್ದಿತು; ಅದರೊಳು-ಆ ರತ್ನದಿಂದ, ಅಧಿ........ಭಯಂ = ಅಧಿ-ಮನೋವ್ಯಥೆಯು, ವ್ಯಾಧಿ-ರೋಗವು, ದುರ್ಭಿಕ್ಷ-ಕ್ಷಾಮವು, ಆದಿ-ಮೊದಲಾದವುಗಳ ದೆಸೆಯಿಂದುಂಟಾಗುವ, ಭಯಂ-ಅಂಜಿಕೆಯು, ಜನಿಸದು-ಸಂಭವಿಸದು, ಎಂದ-ಎಂದು ಶುಕಮುನಿಯು ಹೇಳಿದನು.

ವಿ॥ (೧) (ಬ. ವ್ರೀ.) (೨) ವೀಪ್ಸಾಸಮಾಸ (೩) ಕ ಸ. ದ್ವಿ. (೪) ಇತಿಹಾಸವನ್ನು ಹೇಳುವುದರಿಂದ ಭೂತಕಾಲ ಕ್ರಿಯೆಗೆ ಪ್ರತಿಯಾಗಿ ಭವಿಷ್ಯತ್ಕಾಲದ ಕ್ರಿಯಾಪದವಿದೆ.

ಟಿಪ್ಪಣಿ ॥ ಭಾರ ಎಂದರೆ ೨೦ ತೊಲೆಗಳ (ರೂಪಾಯಿಗಳ) ತೂಕವುಳ್ಳುದು. ೮ ಭಾರಕ್ಕೆ ೧೬೦ ರೂಪಾಯಿಗಳ ತೂಕವಾಯಿತು.

258. ಒಂದುದಿನ - ಒಂದಾನೊಂದು ದಿವಸ, ಗೋವಿಂದನು - ಕೃಷ್ಣನು, ಆ ಸತ್ರಾಜಿತನ-ಆ ಸತ್ರಾಜಿತನನ್ನು, ಕರೆದು-ಕೂಗಿ, ತತ್ರತ್ನವನು-ಆ ಸ್ಯಮಂತಕವ ಣಿಯನ್ನು, ಯದುನೃಪಾಲಂಗೆ-ಯದುವಂಶದ ದೊರೆಯಾದ ಉಗ್ರಸೇನನಿಗೆ, ಈವುದು - ಕೊಡಬೇಕು, ಎಂದನು-ಎಂದು ಹೇಳಿದನು ; ಎಂದೊಡೆಯು - ಕೃಷ್ಣನು ಹೀಗೆ ಹೇಳಿದಾಗ್ಯೂ, ಮಂದಮತಿ-ಅಲ್ಪಬುದ್ಧಿಯುಳ್ಳ ಸತ್ರಾಜಿತನು, ಧನಲೋಭದಲಿ = ಧನ-

ದ್ರವ್ಯದ, ಲೋಭದಲಿ-ಅತ್ಯಾಶೆಯಿಂದ, ಕೊಡದೆ-ಆ ರತ್ನವನ್ನು ಈಯದೆ, ನಿಜಮಂದಿರದಲೇ-ತನ್ನ ಮನೆಯಲ್ಲಿಯೇ, ಪೂಜಿಸುತ್ತ-ಪೂಜೆಮಾಡುತ್ತ, ಮುಕುಂದನ-ಕೃಷ್ಣನ, ಆಜ್ಞೆಯ-ಅಪ್ಪಣೆಯನ್ನು, ಮೀರಿ-ಅತಿಕ್ರಮಿಸಿ, ಉಬ್ಬಿಸಲಿ-ಗರ್ವದಿಂದ, ಲೆಕ್ಕಿಸದೆ-ಗಣನೆಗೆ ತಾರದೆ (ಲಕ್ಷ್ಯಮಾಡದೆ), ಇರ್ದಂ-ಇದ್ದನು. (ಉಗ್ರಸೇನನು ಕೃಷ್ಣನ ತಾಯಿಯಾದ ದೇವಕಿಯ ತಂದೆ).

259. ಅರಸ-ಪರೀಕ್ಷಿದ್ರಾಜನೇ! ಕೇಳು; ಇರಲು-ಹೀಗಿಯೇ ಇರಲು, ಸತ್ರಾಜಿತನ, ತಮ್ಮನು-ಕನಿಷ್ಠಸಹೋದರನಾದ ಪ್ರಸೇನನು, ಮಣಿಯನು- ಸ್ಯಮಂತಕರತ್ನವನ್ನು, ಧರಿಸಿ-ಕೊರಳಿಗೆ ಹಾಕಿಕೊಂಡು, ಅಡವಿಗೆ-ಅರಣ್ಯಕ್ಕೆ, ಹೋದನು-ನಡೆದನು; + ಆತನು, ತುರಗದಲಿ-ಕುದುರೆಯಮೇಲೆ ಕುಳಿತು, (೧) ಮೃಗಯಾವಿಹಾರವಿನೋದದಿಂದ = ಮೃಗಯಾ-ಬೇಟೆಯೆಂಬ, ವಿಹಾರ-ಆಟದ, ವಿನೋದದಿಂದ - ವಿಲಾಸದಿಂದ, ಇರಲು - ಇರುತ್ತಿರಲು, ಸಿಂಹಂ - ಬಂದಾನೊಂದು ಸಿಂಹವು, ಕೆರಳಿ-ಕೋಪೋದ್ರೇಕಗೊಂಡು, + ಪ್ರಸೇನನನ್ನು, ಕೊಂದುದು-ಸಂಹರಿಸಿತು; ಆ ಕೇಸರಿಯ-ಪ್ರಸೇನನನ್ನು ಕೊಂದು ಸ್ಯಮಂತಕರತ್ನವನ್ನಪಹರಿಸಿದ ಆ ಸಿಂಹವನ್ನು, ಜಾಂಬವನು-ರಾಮನ ದೂತನಾದ ಜಾಂಬವಂತನೆಂಬ ಕರಡಿಯೊಡೆಯನು, ಕೊಂದನು - ಸಂಹರಿಸಿದನು; ಬಳಿಕ-ಆಮೇಲೆ, + ಜಾಂಬವನು, ಆ ಮಣಿಸಹಿತ-ಸಿಂಹದ ವಶದಲ್ಲಿದ್ದ ಆ ಸ್ಯಮಂತರತ್ನದೊಡನೆ, ಮಹಾಬಿಲವ - ತನ್ನ ವಾಸಸ್ಥಾನವಾದ ದೊಡ್ಡಗುಹೆಯನ್ನು, ಹೊಕ್ಕನು-ಪ್ರವೇಶಿಸಿದನು.

ವಿ ॥ (೧) ಮೃಗಯೆಂಬ+ವಿಹಾರ (ಅ. ಪೂ.) ವಿಹಾರದ+ ವಿನೋದ (ಷ. ತ.)

260. ಅತ್ತಲ್-ಆ ಕಡೆಯಲ್ಲಿ, ಆಪ್ರಸೇನನ-ಆ ಪ್ರಸೇನನನ್ನು, ತೆತ್ತಿಗರು-ಆತನ ಸೇವಕರೂ ಸತ್ರಾಜಿತಾದ್ಯರು-ಸತ್ರಾಜಿತನೇ ಮೊದಲಾದವರೂ, ಅರಸಿದರು- ಹುಡುಕಿದರು; + ಸತ್ರಾಜಿತನು, ಸತ್ತ-ಮೃತನಾದ, ತಮ್ಮನ-ತಮ್ಮನಾದ ಪ್ರಸೇನನನ್ನು, ಕಂಡು-ನೋಡಿ, ಕೃಷ್ಣನ ಮೇಲೆ - ಕೃಷ್ಣನ ವಿಷಯದಲ್ಲಿ, ಶಂಕಿಸಲು - ರತ್ನದಾಸೆಗಾಗಿ ಆತನೇ ಕೊಂದಿರಬಹುದೆಂದು ಸಂದೇಹಪಡಲು, ಇತ್ತಲ್-ಈ ದ್ವಾರಕಾಪಟ್ಟಣದ

ಕಡೆಯಲ್ಲಿ, ನಿರ್ಮಳಮೂರ್ತಿ-ದೋಷರಹಿತವಾದ ಸ್ವರೂಪವುಳ್ಳಕೃಷ್ಣನು, ಆ ವಾರ್ತೆಯನು_ಪ್ರಸೇನನ ಅನುಮಾನದಿಂದ ಜನರೆಲ್ಲರೂ ತನ್ನಮೇಲೆ ಅನುಮಾನಗೊಂಡಿರುವರೆಂಬ ಸಮಾಚಾರವನ್ನು, ಕೇಳದ-ಕೇಳದನು; ಅಸುರಾಂತಕನು-ಕೃಷ್ಣನು, ತನ್ನಮೇಲಣ-ತನ್ನ ವಿಷಯದಲ್ಲಿ ಉಂಟಾದ, ಹೊತ್ತ - ಆರೋಪಿಸಲ್ಪಟ್ಟ, ವಿಲಗವ - ಅಪವಾದವನ್ನು, ಕಳೆಯಲು_ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ, ಪೊರಮಟ್ಟ-ಹೊರಟನು.

261. ಮುರಹರನು_ಆ ಕೃಷ್ಣನು, ಅರಸಿ_ಹುಡುಕಿ, ಆ ಪ್ರಸೇನನ, ಮರಣ-ಸಾವು, ಸಿಂಹದಲಿ_ಸಿಂಹದಿಂದ, ಆದುದನು_ಆಗಿರುವುದನ್ನು, ಕಂಡು_ನೋಡಿ (ಅಂದರೆ ಅರಣ್ಯದಲ್ಲಿ ಪ್ರಸೇನನು ಸಿಂಹದ ಉಗುರಿನ ಗುರುತುನಿಂದ ಕೂಡಿ ಬಿದ್ದಿದ್ದುದರಿಂದಲೂ ಸಮೀಪದಲ್ಲಿ ಸಿಂಹದ ಹಜ್ಜೆ ಇದ್ದುದರಿಂದಲೂ ಸಿಂಹದಿಂದ ಮೃತನಾದನೆಂದು ತಿಳದು ಎಂದು ಭಾವ), ಇರದೆ-ಸುಮ್ಮನಿರದೆ,ಸಿಂಹದ_ಸಿಂಹಮೃಗದ,ಹಜ್ಜೆಯನು_ಹೆಜ್ಜೆಯ ಗುರುತನ್ನು, ಬಿಡದೇ-ಮೀರದೇ, (೧) ಬೆಂಬತ್ತಿದನು-ಅನುಸರಿಸಿಹೋದನು; ಅದು ಸಿಂಹಂ-ಆ ಸಿಂಹವು ಉರವಣಿಸಿ-ಕಾಳಗವಾಡಿ, ಕರಡಿಯ-ಬಂದಾನೊಂದು ಕರಡಿಯ, ಉಗುರಿನ-ನಖದಗುರುತಿನ, ಗಾಯದಲಿ_ವ್ರಣದಿಂದ ಕೂಡಿ, ವಿಪಿನ ಆಂತರದಲಿ-ಕಾಡಿನ ಮಧ್ಯದಲ್ಲಿ, ಅಡಗೆಡೆದು ಇರಲು-ಸತ್ತುಬಿದ್ದಿರಲು, ಅಸುರಾರಿ-ಕೃಷ್ಣನು, ಕಂಡನು-ನೋಡಿದನು ; ಬೆರಗಾದನು_ಆಶ್ಚರ್ಯದಿಂದ ಸ್ತಬ್ಧನಾದನು.

ವಿ॥ (೧) ಬೆನ್ನಂ+ಪತ್ತಿದನು (ಕ್ರಿ ಯಾ) ಸಮಾಸದಲ್ಲಿ ಉತ್ತರ ಪದದ ಆದಿಯಲ್ಲಿರುವ ಪಕಾರಕ್ಕೆ ಬಕಾರದೇಶ.

262. ಸಿಂಹವನು-ಸಿಂಹವನ್ನು, ಕೊಲುವಂತ_ಸಂಹರಿಸುವಂತಹ, ಕರಡಿಯು_ಕರಡಿಯೆಂಬ ಮೃಗವು, (೧) ಸಿಂಹವಿಕ್ರಮವು-ಸಿಂಹದಂತೆ ಪರಾಕ್ರಮವುಳ್ಳುದು ; + ಇದು, ಎಂತು-ಹೇಗಾಯಿತು ? ಎನುತ-ಎಂದುಕೊಳ್ಳುತ್ತ, (೨) ನರಸಿಂಹಂ-ಪುರುಷಶ್ರೇಷ್ಠನಾದ ಕೃಷ್ಣನು, ಅದರ - ಆ ಕರಡಿಯ, ಹಜ್ಜೆಗೆ - ಹೆಜ್ಜೆಯ ಗುರುತಿಗೆ, ಹಜ್ಜೆಯನು-ತನ್ನ ಹೆಜ್ಜೆಯನ್ನು, ನಿಲಿಸಿ-ಇಟ್ಟುಕೊಂಡುಹೋಗಿ, ಗಹ್ವರವಂ-ಬಂದಾನೊಂದು ಗುಹೆಯನ್ನು, ಐದಿದನು-ಸೇರಿದನು ; (೩) ಅಸಹ್ಯ........ವಿದೂರನು = ಅಸಹ್ಯ-ಸಹಿಸುವುದಕ್ಕೆ ಅಸಾಧ್ಯವಾದ, ತಾಪತ್ರಯ-ಆಧ್ಯಾತ್ಮಿಕ

ಮೊದಲಾದ ಮೂರು ತಾಪಗಳ ದೆಸೆಯಿಂದ, ವಿದೂರನು-ದೂರವಾದ ಕೃಷ್ಣನು, (೪) ಅಪವಾದ....ತರನು = ಅಪವಾದ-ದೂರೆಂಬ, ಶಿಖಿ-ಬೆಂಕಿಯಿಂದ, ದಂದಹ್ಯಮಾನ-ಅನವರತವೂ ಸುಡಲ್ಪಡುತ್ತಿರುವ, ಅಂತರನು-ಹೃದಯುವುಳ್ಳವನಾಗಿ, ಋಕ್ಷಪನ-ಕರಡಿಯೊಡೆಯನಾದ ಜಾಂಬವಂತನ, ಬಿಲನ-ಗುಹೆಯುನ್ನು, ಹೊಕ್ಕನು-ಪ್ರವೇಶಿಸಿದನು.

ಭಾವಾರ್ಥ || ಅಪವಾದಶಿಖಿದಂದಹ್ಯಮಾನಾಂತರನು - ದೂರಿನಿಂದ ಅನವರತವೂ ಬಹು ಮನೋವ್ಯಥೆಗೊಂಡವನು; ಅಸಹ್ಯತಾಪತ್ರಯ ವಿದೂರನು-ಸಹಿಸಲಸಾಧ್ಯವಾದ ಮೂರು ತಾಪಗಳಿಲ್ಲದವನು.

ಸರಳತಾತ್ಪರ್ಯ|| ಸಿಂಹವನ್ನು ಕೊಲ್ಲತಕ್ಕ ಕರಡಿಗೆ ಸಿಂಹದಷ್ಟು ಪರಾಕ್ರಮವಿರಬೇಕು. ಇದು ಹೇಗಿರುತ್ತೆ ? ಎನ್ನುತ್ತ ಕೃಷ್ಣನು ಕರಡಿಯ ಹೆಜ್ಜೆಯು ಎಲ್ಲೆಲ್ಲಿ ಹೋಗಿದೆಯೋ ಅಲ್ಲಲ್ಲಿ ಆ ಹೆಜ್ಜೆಯುಮೇಲೆ ತನ್ನ ಹೆಜ್ಜೆಯನ್ನು ಇಟ್ಟುಕೊಂಡು ಹೋಗಲು ಒಂದು ಗುಹೆ ಸಿಕ್ಕಿತು. ಅಸಹ್ಯತಾಪತ್ರಯರಹಿತನಾದ ಕೃಷ್ಣನು ದೂರುಬಂದಿತಲ್ಲಾ ಎಂದು ಬಹು ಮನೋವ್ಯಥೆಗೊಳ್ಳುತ್ತ ಜಾಂಬವಂತನು ಆ ಗುಹೆಯುನ್ನು ಹೊಕ್ಕನು.

ವಿ|| (೧) ವ್ಯ. ಬ. ವ್ರೀ. (೨) ನರರಲ್ಲಿ, ಸಿಂಹ-ಶ್ರೇಷ್ಠ (ಸ. ತ.) (೩) ಸಹ್ಯವಿಲ್ಲದುದು ಅಸಹ್ಯಂ (ನ. ತ.) ತಾಪಗಳ ತ್ರಯ (ಷ. ತ.) ಅಸಹ್ಯವಾದ ತಾಪತ್ರಯ (ವಿ. ಪೂ.) ತ್ರಯದ ದೆಸೆಯಿಂದ ವಿದೂರ (ಪಂ. ತ) (೪) ಅಪವಾದವೆಂಬ ಶಿಖಿ (ಅ. ಪೂ.) ಶಿಖಿಯಿಂದ ದಂದಹ್ಯಮಾನ (ತೃ. ತ.) ದಂದಹ್ಯಮಾನ ಅಂತರವುಳ್ಳವನು (ಬ. ವ್ರೀ.)

ಉಪ್ತಕಥೆ:—ಕೃಷ್ಣನು ತನ್ನ ಪರಿವಾರವನ್ನು ಬಾಗಿಲಲ್ಲಿ ನಿಲ್ಲಿಸಿ ಗುಹೆಯೊಳಗೆ ಹೊಕ್ಕು ಬಂದು ಅಲ್ಲಿ ಕೊರಳಿಗೆ ಸ್ಯಮಂತಕರತ್ನವನ್ನು ಹಾಕಿಕೊಂಡು ಉಯ್ಯಲೆಯಲ್ಲಿ ಆಟವಾಡುತ್ತಿರುವ ಒಬ್ಬ ಹುಡುಗನನ್ನೂ, ಆ ಉಯ್ಯಲೆಯನ್ನು ತೂಗುತ್ತಿರುವ ಒಬ್ಬ ದಾದಿಯನ್ನೂ ಕಂಡನು.

263. ಗೋವಿಂದನು-ಕೃಷ್ಣನು, ಅವನ-ಆ ಹುಡುಗನ, ಸಮೀಪದಲಿ-ಹತ್ತಿರದಲ್ಲಿ, ನಿಂದನು - ನಿಂತುಕೊಂಡನು; ಆ ರತ್ನಾಭಿಲಾಷೆಗೆ-ಆ ಸ್ಯಮಂತಕರತ್ನದ ಅಪೇಕ್ಷೆಗೆ, ಸಂದು - ಸಲುವಳಿಯಾಗಿ (ಅಂದರೆ ಆ

ರತ್ನವನ್ನು ತೆಗೆದುಕೊಳ್ಳಬೇಕೆಂಬ ಆಶೆಯುಳ್ಳವನಾಗಿ), ಸುಳಿಯುತ್ತ ಇರಲು–ತಿರುಗಾಡುತ್ತಿರಲಾಗಿ,ಆ ಧಾತ್ರಿ–ಆ ಮಗುವಿನ ಸಾಕುತಾಯಿಯು, ಮುರಹರನ–ಕೃಷ್ಣನನ್ನು, ಕಂಡು–ನೋಡಿ, (೧) ಬಂದನು–ಬಂದವನು, ಇವನು, ಆರು–ಯಾರು ? ಎನುತ–ಎನ್ನುತ್ತ, (೨) ಮೊರೆಯಿಡಲ್–ಕೂಗಿಕೊಳ್ಳಲು, ಅಂದು–ಆಗ, ಅದನು–ಆ ಕೂಗನ್ನು, ಕೇಳುತ್ತ– ಆಲಿಸುತ್ತ, ಆ ಋಕ್ಷಾಧಿಪತಿ=ಆ ಋಕ್ಷ–ಕರಡಿಗಳಿಗೆ,ಅಧಿಪತಿ–ಒಡೆಯನಾದ, ಜಾಂಬವನು–ಜಾಂಬವಂತನು, ಕಡುಮುಳಿದು–ಬಹಳವಾಗಿ ಕೋಪಗೊಂಡು, ಮಿಗೆ–ಬಹಳವಾಗಿ, ಹರಿತಂದನು–ಓಡಿಬಂದನು.

ವಿ॥ (೧) ಬರ್ ಧಾತುವಿನ ಭೂತಕಾರಕಕೃದಂತರೂಪ. (೨) ಮೊರೆಯಂ + ಇಡೆ (ಕ್ರಿ.)

264. ಕೃಷ್ಣರೂಪನಾದ ಈತನು, ಆತ್ಮಸ್ವಾಮಿ–ತ್ರೇತಾಯುಗದಲ್ಲಿ ತನ್ನ ಒಡೆಯನಾದ ಶ್ರೀರಾಮನು, ಎಂಬುದ–ಎನ್ನುವುದನ್ನು, + ಜಾಂಬವಂತನು, ಅರಿಯದೆ - ತಿಳಿದುಕೊಳ್ಳದೆ, ನೆರೆ - ಸಂಪೂರ್ಣವಾಗಿ, ವಿಚಾರವಿಹೀನಂ - ವಿಮರ್ಶೆಯಿಂದ ಶೂನ್ಯನಾದವನು, ಆಗಿಯೆ - ಆಗೇ (ಅಂದರೆ ನೀನು ಯಾರೆಂದು ಸ್ವಲ್ಪವೂ ವಿಮರ್ಶೆಮಾಡದೇನೇ), ತರುಬಿ–ತಡೆದು ನಿಲ್ಲಿಸಿಕೊಂಡು, ಆಯುಧಂಗಳಲಿ–ಆಯುಧಗಳಿಂದ ಕೂಡಿ, ಕಾದಿದನು–ಯುದ್ಧಮಾಡಿದನು ; ಮುರರಿಪು–ಶ್ರೀಕೃಷ್ಣನೂ, ಋಕ್ಷಪತಿ–ಜಾಂಬವಂತನೂ, ಮುಳಿದು–ಕೋಪಿಸಿಕೊಂದು,ಒಬ್ಬರೊಬ್ಬರು–ಪರಸ್ಪರವಾಗಿ, ಜರೆದು–ಧಿಕ್ಕರಿಸಿ, ಮೂದಲಿಸುತ್ತ–ಹೀಯಾಳಿಸುತ್ತ (೧) ಅಸ್ತ್ರಶಸ್ತ್ರದಲಿ= ಅಸ್ತ್ರ - ಮಂತ್ರೋಚ್ಚಾರಣೆಯಿಂದ ಬಿಡುವ ಬಾಣಗಳಿಂದಲೂ, ಶಸ್ತ್ರ- ಆಯುಧಗಳಿಂದಲೂ, ಮುರಿದ - ಕತ್ತರಿಸಿದ, ತರುನಿಕರದಲಿ - ಮರಗಳ ಸಮೂಹದಿಂದಲೂ ಮತ್ತೆಯು–ಇನ್ನೂ, ಕರದ–ಕಯ್ಯ, ಮುಷ್ಟಿಯಲಿ–ಹಿಡಿಗಟ್ಟನಿಂದಲೂ, + ಕಾದಿದರು–ಯುದ್ಧಮಾಡಿದರು.

ವಿ॥ (೧) ಅಸ್ತ್ರಗಳೂ+ಶಸ್ತ್ರಗಳೂ ಇವುಗಳ ಸಮಾಹಾರಂ (ಸ. ದ್ವಂ.)

ಟಿಪ್ಪಣಿ॥ ತ್ರೇತಾಯುಗದಲ್ಲಿ ಅವತಾರಮಾಡಿದ್ದ ದಶರಥರಾಮನಿಗೆ ಜಾಂಬವಂತನು ಪರಮ ಭಕ್ತನಾಗಿದ್ದುದರಿಂದ ಜಾಂಬವಂತನಿಗೆ, ಶ್ರೀರಾಮನು ಒಡೆಯನಾಯಿತು. ಆ ರಾಮನೇ ಈ ದ್ವಾಪರಯುಗದಲ್ಲಿ ಕೃಷ್ಣ

ವತಾರವೆತ್ತಿರುವುದರಿಂದ ಕೃಷ್ಣನು ಪೂರ್ವದಲ್ಲಿ ತನ್ನ ಪ್ರಭು ಎಂದು ಜಾಂಬವಂತನು ತಿಳಿಯಲಿಲ್ಲವೆಂದು ಭಾವ.

265. + ಕೃಷ್ಣನು, ಇಷ್ಟಭಕ್ತನಕೂಡೆ - ಪ್ರಿಯಭಕ್ತನಾದ ಜಾಂಬವಂತನ ಸಂಗಡ, ಲೀಲೆಯನು-ಆಟವನ್ನು, ಆಡುವ ಅಂದದಲಿ-ಆಡುವರೀತಿಯಿಂದ, ಅಷ್ಟವಿಂಶತಿದಿವಸಪರಿಯಂತ-ಇಪ್ಪತ್ತೆಂಟು ದಿನಗಳ ವರೆಗೂ, ಮುಷ್ಟಿಯುದ್ಧವ-ಮುಷ್ಟಿಬಂಧನದಿಂದ ಕಾಳಗವನ್ನು, ಮಾಡುತ ಇರಲ್-ಮಾಡುತ್ತಿರಲಾಗಿ, ಅಂದು - ಆಗ, ಆತನ - ಆ ಜಾಂಬವಂತನ, ಸತ್ವಂ-ಶಕ್ತಿಯು, ನಷ್ಟಂ ಆದುದು-ಕುಂದಿತು ; ಜಾಂಬವಂತನು, ಅರಿಷ್ಟ ವೈರಿಯ-ಕೃಷ್ಣನ, ಕರಹತಿಗೆ-ಕೈಮುಷ್ಟಿಯ ಪೆಟ್ಟಿನದೆಸೆಯಿಂದ, ನಿಷ್ಪಿಷ್ಟ ಗಾತ್ರನು = ನಿಷ್ಪಿಷ್ಟ- ಅರೆಯಲ್ಪಟ್ಟ, ಗಾತ್ರನು - ಶರೀರವುಳ್ಳವನಾಗಿ, ಬಳಲುತ-ಆಯಾಸಪಡುತ್ತ, ಇಂತು ಎಂದ-ಹೀಗೆ ಹೇಳಿದನು.

ಭಾವಾರ್ಥ॥ ನಿಷ್ಪಿಷ್ಟಗಾತ್ರನು-ಕಿವಿಚಿಹೋದ ಮೈಯುಳ್ಳವನಾಗಿ.

266. + ಜಾಂಬವಂತನು ಎಲೆವೀರ-ಎಲೈಶೂರನೇ ! ನೀಂ-ನೀನು, ಆರು-ಯಾರು ? ಜೀವರ-ಪ್ರಾಣಿಗಳ, ಭೂರಿಸತ್ವಾತ್ಮಕನು = ಭೂರಿ-ಅಧಿಕವಾದ, ಸತ್ವ-ಚೈತನ್ಯವೇ, ಆತ್ಮಕನು-ಸ್ವರೂಪವಾಗಿ ಉಳ್ಳ, (೧) ಕೌಸ್ತುಭಧಾರಿಯೋ-ವಿಷ್ಣುವೋ? ಶಂಕರನೋ-ಪರಮೇಶ್ವರನೋ? ಮೇಣ್-ಅಥವಾ, ಸರಸೀರುಹೋದ್ಭವನೋ - ಬ್ರಹ್ಮನೋ ? ಅಕಟ-ಆಶ್ಚರ್ಯವು ! ಈ ಯುಗದೊಳಗೆ - ಈ ದ್ವಾಪರಯುಗದಲ್ಲಿ, ತನ್ನೊಡನೆ-ತನ್ನಸಂಗಡ, ಕಾದುವ - ಯುದ್ಧಮಾಡತಕ್ಕ, ವೀರರು-ಶೂರರು, ಆರು-ಯಾರಿದ್ದಾರೆ ? (೨) ವಿಸ್ಮಯಕಾರಿ-ಆಶ್ಚರ್ಯವನ್ನುಂಟುಮಾಡುವವನು, ಆದೆ ಅಲಾ-ಆದೆಯಲ್ಲವೇ? ಎನುತ-ಎನ್ನುತ್ತ, ಮನದೊಳಗೆ-ಮನಸ್ಸಿನಲ್ಲಿ ನೋಡಿದನು-ಆಲೋಚಿಸಿದನು.

ಭಾವಾರ್ಥ ॥ ಜೀವರಭೂರಿಸತ್ವಾತ್ಮಕನು-ಸಮಸ್ತಪ್ರಾಣಿಗಳ ಚೈತನ್ಯಸ್ವರೂಪನು,

ವಿ॥ (೧, ೨) ಉಪ. ಸ.

ಟಿಪ್ಪಣಿ ॥ ಜಾಂಬವಂತನು ರಾಮಾವತಾರಕಾಲದಲ್ಲಿದ್ದವನಾದುದರಿಂದ ಆರುತನ್ನೊಡ........ಈ ಯುಗದೊಳಗೆ, ಎಂದು ಹೇಳುತ್ತಾನೆ.

267. ಮತ್ತೆ-ಆ ಮೇಲೆ, ಹರಿ-ಕೃಷ್ಣನು, ಕರುಣಿಸಲು-ಕೃಪೆ ಮಾಡಲಾಗಿ (ಅಂದರೆ ದಿವ್ಯಜ್ಞಾನವನ್ನು ಕೊಡಲಾಗಿ),+ ಈತನು, ರಘುನಾಥಂ-ಪೂರ್ವಯುಗದ ಒಡೆಯನಾದ ಶ್ರೀರಾಮನು, ಎಂಬುದನು-ಎನ್ನುವುದನ್ನು, + ಜಾಂಬವಂತನು, ಚಿತ್ತದಲಿ-ಮನಸ್ಸಿನಲ್ಲಿ, ಕಂಡನು-ತಿಳಿದನು; ಅತ್ಯಧಿಕಭಕ್ತಿಯಲಿ-ಬಹಳ ಹೆಚ್ಚಾದ ಭಕ್ತಿಯಿಂದ, ಚರಣದಲಿ-ಕೃಷ್ಣನ ಪಾದದಮೇಲೆ, ಮೆಯ್ಯಿಕ್ಕಿದನು - ನಮಸ್ಕರಿಸಿದನು; ಸತ್ಯಸಂಧನೆ-ಯಥಾರ್ಥವಾದ ಪ್ರತಿಜ್ಞೆಯುಳ್ಳವನೇ ! (೧) ಇನಿತುದಿನ - ಇಷ್ಟುದಿವಸವೂ, ತನಗೆ-ನನಗೆ, ಮರೆವೆಯಂ - ಅಜ್ಞಾನವನ್ನು, ಇತ್ತು-ಕೊಟ್ಟು, ಕಾದಿದೆ-ಯುದ್ಧಮಾಡಿದೆ; ಎನುತ-ಎನ್ನುತ್ತ, ಕೃಷ್ಣನ, ಕಾಲ್ಗಳನು-ಪಾದಗಳನ್ನು, ಪಿಡಿದು-ಹಿಡಿದುಕೊಂಡು, ಅತ್ತನು-ಗೋಳಾಡಿದನು.

ವಿ॥ (೧) ಗ. ಇನಿತು=ಪರಿಮಾಣವಾಚಕ.

ಟಿಪ್ಪಣಿ॥ ಜಾಂಬವಂತನಿಗೆ ರಾಮಾವತಾರದಲ್ಲಿ ಕೊಟ್ಟ ಭಾಷೆಯ ಪ್ರಕಾರ ಕೃಷ್ಣಾವತಾರದಲ್ಲಿ ರಾಮರೂಪ ಸಂದರ್ಶನವನ್ನು ಕೊಟ್ಟುದರಿಂದ ಸತ್ಯಸಂಧನೆ, ಎಂದು ಜಾಂಬುವಂತನು ಹೇಳಿದ್ದಾನೆ.

268. ಪರಮಕೃಪಾಳು - ಬಹುದಯಾಶಾಲಿಯಾದ ಕೃಷ್ಣನು, ಏಳು-ಮೇಲಕ್ಕೇಳು ! ಎನುತ-ಎನ್ನುತ್ತ, ಬಕುತನ-ಭಕ್ತನಾದ ಜಾಂಬವಂತನ, ಮೌಳಿಯನು - ಶಿರಸ್ಸನ್ನು, ನೆಗಹಿದನು - ಮೇಲಕ್ಕೆತ್ತಿದನು ; ತಕ್ಕೈಸಿದನು - ತಬ್ಬಿಕೊಂಡನು ; ತನ್ನ, ಎರಡುಕರತಳದಿಂದೆ - ಎರಡು ಅಂಗೈಗಳಿಂದಲೂ, (೧) ಮೆಯ್ದುಡವಿ-ಶರೀರವನ್ನು ನೇವರಿಸಿ, ಕಾರ್ಯವನು - ತಾನು ಬಂದಿರುವ ಕೆಲಸವನ್ನೂ, ತನ್ನಯಮೇಲೆ - ತನ್ನ ವಿಷಯದಲ್ಲಿ, ಜಲಜಾಲದಿ - ಜನಗಳ ಸಂಘದಿಂದ, ಆವಿರ್ಭವಿಸಿದುದಂ-ಹುಟ್ಟಿದ, ಮಣಿಕೃತದೋಷವನು=ಮಣಿ-ಸ್ಯಮಂತಕರತ್ನದ ದೆಸೆಯಿಂದ, ಕೃತ-ಕಲ್ಪಿಸಲ್ಪಟ್ಟ, ದೋಷವನು-ಅಪವಾದವನ್ನೂ, ಆ ಜಾಂಬವಂತನಿಗೆ, ಹೇಳಿದನು-ಬೋಧಿಸಿದನು.

ಉತ್ತರಾರ್ಧದಭಾವ ॥ ತಾನು ಬಂದ ಕಾರ್ಯವನ್ನೂ, ಸ್ಯಮಂತಕ ಮಣಿಯ ದೆಸೆಯಿಂದ ಜನಗಳು ತನ್ನ ಮೇಲೆ ಕಲ್ಪಿಸಿರುವ ಅಪವಾದವನ್ನೂ ಆ ಜಾಂಬವಂತನಿಗೆ ಹೇಳಿದನು.

269. ಬಳಿಕ-ಆಮೇಲೆ, ಅವನು-ಆ ಜಾಂಬವಂತನು, ಅತ್ಯ.... ನ್ನೆಯನು=ಅತ್ಯಧಿಕ-ಬಹಳ ಹೆಚ್ಚಾದ, ಗುಣ-ಸದ್ಗುಣಗಳು, ರೂಪ-ಸೌಂದರ್ಯವು ಇವುಗಳಿಂದ, ಸಂಪನ್ನೆಯನು-ಕೂಡಿರುವ, ಜಾಂಬವತಿ ಎಂಬಳಂ_ಜಾಂಬವತಿಯೆಂಬ ಹೆಸರುಳ್ಳವಳಾದ, ತನ್ನಯ ಪುತ್ರಿಯನು-ತನ್ನ ಮಗಳನ್ನು, ಮಣಿಸಹಿತ-ಸ್ಯಮಂತಕರತ್ನದೊಡನೆ, +ಕೃಷ್ಣನಿಗೆ, ಇತ್ತನು_ಕೊಟ್ಟನು; ಮತ್ತೆ-ಇನ್ನೂ, ಬಹುವಿಧವಸ್ತುಗಳನು-ಅನೇಕಬಗೆಯಾದ ಪದಾರ್ಥಗಳನ್ನೂ, ಒಲಿದು_ಪ್ರೀತಿಸಿ, ಇತ್ತು-ಕೊಟ್ಟು, ನಲಿದು_ಭಕ್ತಿಹೊಂದಿ, ವೇದಾಂ....ಯನು = ವೇದಾಂತ - ಉಪನಿಷತ್ತುಗಳಲ್ಲಿ, ವಿಶ್ರುತ_ಪ್ರಸಿದ್ಧವಾದ, ಕೀರ್ತಿಯನು_ಯಶಸ್ಸುಳ್ಳವನಾದ, ಪರಾಪರವಸ್ತುವನು = ಪರ-ಅನ್ಯವಾದುದಕ್ಕಿಂತಲೂ, ಅಪರ_ಅನ್ಯವಾದ, ವಸ್ತುವನು_ಪದಾರ್ಥವಾದ ಕೃಷ್ಣನನ್ನು, ಪೂಜಿಸಿದನು-ಪೂಜೆಮಾಡಿದನು.

ಭಾವಾರ್ಥ॥ ವೇದಾಂತವಿಶ್ರುತಕೀರ್ತಿ-ಉಪನಿಷತ್ಪ್ರತಿಪಾದ್ಯಮಾನನು; ಪರಾಪರವಸ್ತು-ಸರ್ವೋತ್ತಮವಸ್ತು (ಪರಮಾತ್ಮ).

270. ಗುಣರತ್ನಮೂರುತಿ = ಗುಣ-ಸದ್ಗುಣಗಳೆಂಬ, ರತ್ನ-ಮಣಿಗಳಿಗೆ, ಮೂರುತಿ-ಶರೀರಪ್ರಾಯನಾದ ಕೃಷ್ಣನು, ರತ್ನವರವನು-ರತ್ನಶ್ರೇಷ್ಠವಾದ ಸ್ಯಮಂತಕವನ್ನು, ಕೊಂಡು-ತೆಗೆದುಕೊಂಡು, ಕನ್ಯಾರತ್ನಸಹಿತ-ಹುಡುಗಿಯಾದ ಜಾಂಬವತಿಯೆಂಬ ರತ್ನದೊಡನೆ, ಆನಂದದಲಿ_ಸಂತೋಷದಿಂದ, ಪುರಕೆ_ಪಟ್ಟಣಕ್ಕೆ, ಬಿಜಯಂಗೆಯ್ಯುತ ಇರೆ_ವಿಜಯವನ್ನು ಮಾಡುತ್ತಿರಲು (ಅಂದರೆ ಬರುತ್ತಿರಲು), ಪುರವಾಸಿಜನ-ಪಟ್ಟಣಸ್ಥರಾದ ಜನರು, ಕಂಡು-ಕೃಷ್ಣನು ಬರುವುದನ್ನು ನೋಡಿ, (೧) ನವರತ್ನಮಯತೊಡಿಗೆಗಳಲಿ= ನವರತ್ನಮಯ-ಒಂಬತ್ತು ರತ್ನಗಳಿಂದ ಕೆತ್ತಲ್ಪಟ್ಟ, ತೊಡಿಗೆಗಳಲಿ=ಆಭರಣಗಳಿಂದ, ಎಸೆಯಲು-ಪ್ರಕಾಶಿಸುತ್ತಿರಲು, ಅವನು-ಆ ಕೃಷ್ಣನು, ನೂತ್ನನು_ಹೊಸಬನು, (ಎಂದರೆ ಗುಹಾಪ್ರವೇಶ ಮಾಡಿದುದರಿಂದ ಕೃಷ್ಣವಿನಾಶವನ್ನು ನಿಶ್ಚಯಿಸಿದ್ದ ನಮಗೆ ಈಗ ಬಂದವನು ಹೊಸಕೃಷ್ಣನಂತೆ ಆಯಿತು ಎಂದು ಭಾವ), ಎಂದು, ಯತ್ನದಲಿ-ಪ್ರಯತ್ನಪೂರ್ವಕವಾಗಿ, ವಿತತವಿಭವದಲಿ-ಅಧಿಕವಾದ ವೈಭವದಿಂದ, ಇದಿರುಗೊಂಡರು-ಎದುರುಗೊಂಡರು.

ಭಾವಾರ್ಥ ॥ ಕನ್ಯಾರತ್ನಸಹಿತ ಶ್ರೇಷ್ಠ ಕನ್ಯೆಯಾದ ಜಾಂಬವತಿ ಯೊಡನೆ, ಗುಣರತ್ನಮೂರುತಿ-ಮಹಾಸದ್ಗುಣಸಂಪನ್ನ.

ವಿ॥ (೧) ನವರತ್ನಗಳು (ದ್ವಿ.) ನವರತ್ನವಿಕಾರಂ=ನವರತ್ನ ಮಯ (ತದ್ಧಿತಾಂತ). ರತ್ನಮಯಗಳಾದ ತೊಡಿಗೆಗಳು (ವಿ. ಪೂ.)ಅರಿ ಸ.

271. ಕರುಣಾವನಧಿ=ಕರುಣಾ_ಕೃಪೆಗೆ, ವನಧಿ_ಸಮುದ್ರಪ್ರಾಯ ನಾದ,ಆ ಮುರಹರನು_ಆ ಕೃಷ್ಣನು,ಸಭೆಯಲಿ_ಸಮಾಜರೂಪದಿಂದ(ಸಮಾ ಜವಾಗಿ), ನೆರೆದ-ಸೇರಿದ,ಪೃಥ್ವೀಶ್ವರರ-ದೊರೆಗಳುಳ್ಳ, ಬಾಂಧವನಿಕರದ- ನೆಂಟರಗುಂಪುಳ್ಳ, (೧) ಒಡ್ಡೋಲಗದ-ನಡೆಯುತ್ತಿರುವ ದರ್ಬಾರಿನ, ಮಧ್ಯದಲಿ - ನಡುವೆ, ಸತ್ರಾಜಿತನನು-ಸತ್ರಾಜಿತನನ್ನು, ಕರೆದು_ಕೂಗಿ, ಹರುಷ-ಸಂತೋಷವು, ಮಿಗಲು-ಹೆಚ್ಚಾಗಲು, ಅಂದು_ಆಗ, ಕಯ್ಮು ಗಿದು-ಕೈಗಳನ್ನು ಜೋಡಿಸಿಕೊಂಡು,+ನೀನು, ಪರಮಧಾರ್ಮಿಕಂ- ಬಹುಧರ್ಮಿಷ್ಠನು, ಎನುತ-ಎನುತ್ತ, ಆ ಸ್ಯಮಂತಕ ವರಮಹಾರತ್ನ ವನು=ಆ ಸ್ಯಮಂತಕ_ಸ್ಯಮಂತಕವೆಂಬ, ವರ_ಶ್ರೇಷ್ಠವಾದ, ಮಹತ್- ದೊಡ್ಡದಾದ, ರತ್ನವನು-ಮಣಿಯನ್ನು, ಕೊಟ್ಟನು.

ಭಾವಾರ್ಥ ॥ ಪರಮಧಾರ್ಮಿಕಂ [(ವಿಪರೀತಲಕ್ಷಣೆಯಿಂದ) ವಿಚಾರವಿಲ್ಲದೆ ನಿರಪರಾಧನಮೇಲೆ ದೂರುಹೊರಸಿ ಬಹಳ ಅಧರ್ಮಕ್ಕೊ ಳಗಾದೆಯಲ್ಲವೇ ? ಎಂದು ಭಾವ.]

ವಿ॥ (೧) ಒಡ್ಡಿದುದು+ಓಲಗಂ (ಗ)

272.ಆ ಸತ್ರಾಜಿತನು,+ನಾನು, ಲೋಕಕ್ಕೆ-ಪ್ರಪಂಚಕ್ಕೆ, ಉರುವ- ದೊಡ್ಡವನಾದ, ದೈವದಮೇಲೆ-ದೇವನಾದ ಕೃಷ್ಣನಮೇಲೆ, ದೋಷವಂ- ತಪ್ಪನ್ನು, ಬರಿದೆ-ನಿಷ್ಕಾರಣವಾಗಿ, ಹೇಳಿದೆಂ-ಹೇಳಿದೆನು; ಅಕಟಾ_ ಅಯ್ಯೋ ! ಭುವನದಲಿ-ಲೋಕದಲ್ಲಿ, ಎನ್ನಂತೆ_ನನ್ನಹಾಗೆ, ಅರಿಯದ_ ತಿಳಿಯದ, ಅಜ್ಞಾನಿಗಳು_ಮೂಢರು, ಅಧಃರ್-ಅದು ಯಾರಿದ್ದಾರೆ? ನನ್ನ ಮೇಲೆ-ನನ್ನವಿಷಯದಲ್ಲಿ, ಕೊರತೆ-ಕುಂದು (ಅಪವಾದವು), ಹೊತ್ತಿದು- ವಹಿಸಲ್ಪಟ್ಟಿತು, ಎನುತ-ಎಂದೆನ್ನುತ್ತ, ಎರಗಿ-ನಮಸ್ಕರಿಸಿ, ಲಜ್ಜಾಭಾರ ದಲಿ_ನಾಚಿಕೆಯ ಅತಿಶಯದಿಂದಕೂಡಿ, ಕಯ್ಮರೆಯಮೊಗದಲಿ_ಮುಖವ ನ್ನು ಕಯ್ಯಲ್ಲಿ ಮುಚ್ಚಿಕೊಂಡು, ಮಣಿಯ:-ಸ್ಯಮಂತಕರತ್ನವನ್ನು. ಕೊಂ ಡನು_ತೆಗೆದುಕೊಂಡನು.

---

23. ಸನೆತ್ತ್ಕವೊಾಗವಟ್ಟದಿ (ರಾತ್ರಿಯು ವರ್ಣನೆ).

273. ತೇಜಂ-ಐಶ್ವರ್ಯವು (ತೇಜಸ್ಸು ಎಂದು ಮತ್ತೊಂದರ್ಥ), ಅಡಗಿತ್ತು-ತೊಲಗಿತು; ಲೋಕಬಾಹಿರರ್-ಈ ಲೋಕಕ್ಕೆ ಹೊರಗಾದವರ (ಅಂದರೆ ನೀಚರ), (ಈ ಲೋಕಕ್ಕೆ ಹೊರಗಾದವರ ಎಂದರೆ ನಕ್ಷತ್ರಾದಿಗಳ, ಎಂದು ಮತ್ತೊಂದರ್ಥ), ಓಜೆ-ಗುಂಪು, ಆಯಿತು-ಸೇರಿತು; ಗತಿಯಕಾಣೆ - ಉಪಾಯುವನ್ನು ಕಾಣೆನು (ಸಂಚಾರವು ನಿಂತುಹೋಯಿತು, ಎಂದು ಮತ್ತೊಂದರ್ಥ); ಇಂದು-ಈಗ, ಸರೋಜಿನಿಯುಂ-ಪದ್ಮಿನೀಜಾತಿ ಸ್ತ್ರೀಯಾದ ಹೆಂಡತಿಯನ್ನು (ತಾವರೆಬಳ್ಳಿಯನ್ನು, ಎಂದು ಮತ್ತೊಂದರ್ಥ), ಅಗಲ್ದೆಂ-ಬಿಟ್ಟುಬಿಟ್ಟೆನು!; ಅಂಬರ-ಬಟ್ಟೆಯು (ಅಕಾಶವು, ಎಂದು ಮತ್ತೊಂದರ್ಥ), ಮೊದಲೆ - ಮುಂಚೆಯೇ, ಬಯಲು ಆಯ್ತು-ಶೂನ್ಯವಾಯಿತು; ಈ ಜಗವ-ಈ ಲೋಕವನ್ನು, ತಿರುತಿರುಗಿ-ಸುತ್ತಿಸುತ್ತಿ, ನೊಂದೆನು-ಬಳಲಿದೆನು; ಮಾಜಲುಪೆನು - ಮರಸುವುದು ಏತಕ್ಕೆ? ಅಸುದೊರೆವೆನು-ಪ್ರಾಣವನ್ನು ಬಿಡುವೆನು, ಎಂದು-ಎಂಬುದಾಗಿ, ಅಂಭೋಜಸಖಂ-ಸೂರ್ಯನು, ಅಪರ ಅದ್ರಿಯಡರ್ದನು-ಪಶ್ಚಿಮಪರ್ವತವನ್ನು ಹತ್ತಿದನು, ಅಬ್ಧಿಯುಲಿ - ಪಶ್ಚಿಮ ಸಮುದ್ರದಲ್ಲಿ, ಬಿದ್ದನು-ದುಮುಕಿದನು.

ತಾತ್ಪರ್ಯ || ಈ ಪದ್ಯದಲ್ಲಿ ಕವಿಯು ರಾತ್ರಿಯನ್ನು ವರ್ಣಿಸುವುದಕ್ಕೆ ಉಪಕ್ರಮಿಸಿ ಸಾಯಂಕಾಲವನ್ನು ವರ್ಣಿಸುತ್ತಾನೆ;—

ನನಗೆ ತೇಜವು ಎಂದರೆ ಐಶ್ವರ್ಯವು ತೊಲಗಿತು. ಲೋಕಬಾಹಿರರು ಎಂದರೆ ಲೋಕಕ್ಕೆ ಹೊರಗಾದವರು ಎಂದರೆ ನೀಚರು ಗುಂಪು ಕೂಡಿದರು. ಈ ಕಷ್ಟಕ್ಕೆ ಗತಿಯಕಾಣೆ, ಎಂದರೆ ಉಪಾಯುವನ್ನು ಕಾಣೆನು. ಸರೋಜಿನಿಯುಂ ಎಂದರೆ ಪದ್ಮಿನೀಜಾತಿ ಸ್ತ್ರೀಯಾದ ನನ್ನ ಹೆಂಡತಿಯನ್ನು ಈಗ ಅಗಲಿದೆನು ಮೈಮೇಲಿನ್ನ ಅಂಬರ ವೆಂದರೆ ಬಟ್ಟೆಯು ಶೂನ್ಯವಾಯಿತು. ಈ ಲೋಕವನ್ನು ಸುತ್ತಿಸುತ್ತಿ ಬಳಲಿದೆನು. ಗುಟ್ಟುಮಾಡುವುದೇನು? ಇನ್ನು ಇಷ್ಟಾದಮೇಲೆ ಪ್ರಾಣಬಿಡುವೆನು; ಎಂದು ಸೂರ್ಯನು ಪಶ್ಚಿಮ ಪರ್ವತದಮೇಲೆ ಹತ್ತಿ ಅಲ್ಲಿಂದ ಪಶ್ಚಿಮ ಸಮುದ್ರಕ್ಕೆ ದುಮುಕಿದನು.

ಸಾಯಂಕಾಲವಾದುದರಿಂದ ಸೂರ್ಯನ ತೇಜವು ಎಂದರೆ ಬೆಳಕು ತೊಲಗಿತು. ಲೋಕಬಾಹಿರರು ಅಂದರೆ ಈ ಲೋಕಕ್ಕೆ ಹೊರಗಾದವರು ಅಂದರೆ ನಕ್ಷತ್ರಾದಿಗಳು ಗುಂಪಾಗಿ ಕಂಡುವು. ಗತಿಯಕಾಸೆ_ ಎಂದರೆ ಸಾಯಂಕಾಲವಾದುದರಿಂದ ಸೂರ್ಯನ ಸಂಚಾರವು ನಿಂತುಹೋಯಿತು; ಅಸ್ತಮಾನಕಾಲವಾದುದರಿಂದ ತಾವರೆಬಳ್ಳಿಯಲ್ಲಿರುವ ಹೂಗಳಲ್ಲಿ ತನ್ನ ಕಿರಣವನ್ನು ಪಸರಿಸಿ ಅರಳಿಸದೆ ಹೋದುದರಿಂದ ಈಗ ಸರೋಜಿನಿಯನ್ನು ಎಂದರೆ ತಾವರೆಬಳ್ಳಿಯನ್ನು ಸೂರ್ಯನು ಅಗಲಿದನು; ಸೂರ್ಯನಬೆಳಕು ತೊಲಗಿದುದರಿಂದ ಅಂಬರ ಎಂದರೆ ಆಕಾಶವು ಶೂನ್ಯವಾಗಿ ಕಂಡಿತು ; ಪ್ರಾತಃಕಾಲದಿಂದ ಸಾಯಂಕಾಲದವರೆಗೂ ಸೂರ್ಯನು ಈ ಲೋಕವನ್ನು ಸುತ್ತುತ್ತಬರುವುದು ಸ್ವಾಭಾವಿಕವಾದುದು (ಎಂದು ಪ್ರಕೃತಾರ್ಥವು).

ಮುಖ್ಯತಾತ್ಪರ್ಯ॥ ಸಾಯಂಕಾಲವಾದುದರಿಂದ ಸೂರ್ಯನ ತೇಜಸ್ಸು ಕುಂದಿಹೋಯಿತು. ನಕ್ಷತ್ರಾದಿಗಳು ಮೂಡಿದುವು. ಸೂರ್ಯ ಸಂಚಾರವು ನಿಂತುಹೋಯಿತು. ಸೂರ್ಯನು ತಾವರೆಬಳ್ಳಿಯ ಹೂವಿನಲ್ಲಿ ತನ್ನ ಕಿರಣವನ್ನು ಪಸರಿಸದೆಹೋದುದರಿಂದ ತಾವರೆಹೂವು ಮೊಗ್ಗಾಯಿತು. ಅಂತರಿಕ್ಷವು ಸೂರ್ಯನ ಬೆಳಕಿಲ್ಲದೆ ಶೂನ್ಯವಾಗಿ ಕಂಡಿತು. ಸೂರ್ಯನು ಕಟ್ಟಾಳಿಯಂತೆ ಲೋಕವನ್ನೆಲ್ಲ ತಿರುತಿರುಗಿಕೊಂಡು ಬಂದು ಪಶ್ಚಿಮ ಪರ್ವತದ ಮೇಲೆ ಕಾಣಿಸಿಕೊಂಡು ಇಳಿಮುಖಿದ್ದು ಪಶ್ಚಿಮ ಸಮುದ್ರದಲ್ಲಿ ಮುಳುಗುವನೋ ಎಂಬಹಾಗೆ ತೋರುತ್ತಿದ್ದನು.

ಈ ಪದ್ಯದಲ್ಲಿ ಬಬ್ಬ ದೊರೆಯು ತನ್ನ ಸರ್ವಸ್ವವನ್ನೂ ಕಳೆದುಕೊಂಡು ನೀಚರಾದ ಶತ್ರುಗಳು ಮುತ್ತಿಕೊಳ್ಳಲು ಉಪಾಯಾಂತರವನ್ನು ಕಾಣದೆ ಹೆಂಡತಿಯನ್ನು ಬಿಟ್ಟು ವೈಗೆ ಬಟ್ಟೆಯೂ ಇಲ್ಲದೆಹೋಗಲು ಊರೂರು ತಿರುಗಿ ದುಃಖವನ್ನು ಸಹಿಸಲಾರದೆ ಪ್ರಾಣಬಿಡುವೆನು ಎಂದು ಬೆಟ್ಟದಮೇಲಿನಿಂದ ಸಮುದ್ರದ ನೀರಿಗೆ ದುಮುಕಿದನು, ಎಂದು ಬಂದು ಅಪ್ರಕೃತಾರ್ಥವು ಸೂಚಿತವಾಗುವುದು.

೨॥ (೧) ಅಸುವಂ + ತೊರೆವೆನು (ಕ್ರಿ.)

274. (೧) ಪಡುವಲು-ಪಶ್ಚಿಮದಿಕ್ಕಿನಲ್ಲಿ, ಸಂಧ್ಯಾರಾಗ-ಸಂಜೆಗೆಂಪು, ತೋರೆ-ಕಾಣುತ್ತಿರಲು, ವಿಹಗಸಂತತಿ-ಪಕ್ಷಿಗಳ ಸಮೂಹವು, ಪಕ್ಕೆಗೆ-ಗೂಡಿಗೆ, ಪಾರೆ-ಹಾರಿಹೋಗಲು, ಜಲಜಾತಗಳ-ತಾವರೆಹೂಗಳ, ಮೈಸಿರಿ-ಮಹಾಸಂಪತ್ತು, ಜಾರೆ-ತೊಲಗಲು (ತಾವರೆಗಳು ಮೊಗ್ಗಾದುದರಿಂದ ಅವುಗಳ ಮಹಾ ಸಂಪತ್ತು ತೊಲಗಲು ಎಂದು ತಾತ್ಪರ್ಯ), ತಾರೆಗಳ-ನಕ್ಷತ್ರಗಳ, ಬಳಗ-ಸಮೂಹವು, ಗಗನ ಗಂಗಣಕೆ-ಅಂತರಿಕ್ಷ ಪ್ರದೇಶಕ್ಕೆ, ಏರೆ-ಹತ್ತಲು, ಕೈರವವನಕೆ - ನೈದಿಲೆಗಳ ತೋಟಕ್ಕೆ, ಸೊಂಪು-ಸೊಗಸು, ಉರೆ-ಹೆಚ್ಚಾಗಿ, ಬೀರೆ-ಎರಚಲ್ಪಡಲು (ಎಂದರೆ ಸಾಯಂಕಾಲವಾದುದರಿಂದ ನೈದಿಲೆಗಳು ಅರಳಿ ಸೊಗಸಾಗಿ ಕಾಣಲು ಎಂದು ಭಾವ), ದಿಕ್ಕನ್ಯೆಯರು = ದಿಕ್-ದಿಕ್ಕುಗಳೆಂಬ, ಕನ್ಯೆಯರು-ಸ್ತ್ರೀಯರು, ತಮವನು-ಕತ್ತಲೆಯನ್ನು, ಕಾರೆ-ಉಗುಳುತ್ತಿರಲು, ರವಿ-ಸೂರ್ಯನು, ಅಪರ ಅಬ್ಧಿಯಲಿ-ಪಶ್ಚಿಮಸಮುದ್ರದಲ್ಲಿ, ಮುಳುಗೆ-ಮುಳುಗುವಹಾಗೆ ಇಳಿಯಬಿದ್ದು ಕಾಣಲು,+ರಾತ್ರಿಯು ಪ್ರಾಪ್ತವಾಯಿತು.

ಭಾವಾರ್ಥ ॥ ಸೊಂಪುರೆಬೀರೆಕೈರವವನಕೆ - ನೈದಿಲೆಹೂವುಗಳು ಅರಳಿ ಸೊಗಸಾಗಿ ಕಾಣುತ್ತಿದ್ದುವು; ತಮವನುಕಾರೆ ದಿಕ್ಕನ್ಯೆಯರು-ದಿಕ್ಕುಗಳಲ್ಲೆಲ್ಲಾ ಕತ್ತಲೆಯು ಮುಚ್ಚಿಕೊಂಡಿರಲು.

ವಿ॥ (೧) ಪಡುವ+ಅಲು, ಪಡುವ ಶಬ್ದಕ್ಕೆ ಸಪ್ತಮೀಯಲ್ಲಿ ಅಲು ಪ್ರತ್ಯಯವು.

275. ಭೂತಲದೊಳು-ಭೂಮಂಡಲದಲ್ಲಿ, ಉಳ್ಳ-ಇರುವ, ಅಖಿಳ ಸುಜನವ್ರಾತ = ಅಖಿಳ-ಸಮಸ್ತರಾದ ಸುಜನ-ಸಜ್ಜನರ, ವ್ರಾತ-ಸಮೂಹವು, ತಮ ತಮಗೆ-ತಮ್ಮತಮ್ಮ ಇಷ್ಟಕ್ಕೆ, ಉಚಿತಸುಪ್ತಿಸಮೇತದಿಂ-ತಕ್ಕಷ್ಟು ನಿದ್ರೆಯೊಡನೆ ಕೂಡಿ, ಇರಲು-ಇರಲಾಗಿ, ಅನಿತಕೆ-ಅಷ್ಟರೊಳಗೆ, ಅದು-ಆ, ನಿಶಾಂತಯಾಮಂ = ನಿಶಾ-ರಾತ್ರಿಯ ಅಂತ-ಕೊನೆಯ, ಯಾಮಂ-ಜಾವವು (ಅಂದರೆ ಬೆಳಗಿನಜಾವವು), ಆಯ್ತು - ಪ್ರಾಪ್ತವಾಯಿತು; ಭವದೀಯಾತಪದಿ = ಭವದೀಯ-ನಿನ್ನ ಸಂಬಂಧಿಯಾದ, ಆತಪದಿ-ಬಿಸಿಲಿನಿಂದ, ಈತಮವ-ಈ ಕತ್ತಲೆಯನ್ನು, ಧಿಕ್ಕರಿಸಿ-ತಿರಸ್ಕರಿಸಿ, ಧರೆಯನು-ಭೂಮಿಯನ್ನು, ಬೆಳಗುವ-ಪ್ರಕಾಶಪಡಿಸುವ, ಮಹಾತರಣಿ-ಮಹಾತ್ಮನಾದ ಸೂರ್ಯನೇ! ಬಾರ-ಬಾ! ಎಂದು - ಎಂಬುದಾಗಿಯೋ

ಎನ್ನುವಹಾಗೆ, ಕೋಳಿಗಳು-ಕುಕ್ಕುಟಗಳು, ಬಲಿದು-ಪ್ರೀತಿಸಿ, ಕೂಗಿದುವು-ಮೊರೆಯಿಟ್ಟುವು.

ತಾತ್ಪರ್ಯ॥ ಭೂಮಿಯಲ್ಲಿರುವ ಸಮಸ್ತ ಸುಜನರೂ ತಾವು ತಾವು ತಕ್ಕಷ್ಟು ನಿದ್ರೆ ಮಾಡುತ್ತಿರಲು ಬೆಳಗಿನಜಾವವಾಯಿತು.

ನಿನ್ನ ಬಿಸಿಲಿನಿಂದ ಈ ಕತ್ತಲೆಯನ್ನು ಹೋಗಲಾಡಿಸಿ ಭೂಮಿಗೆಲ್ಲಾ ಬೆಳಕನ್ನು ಉಂಟುಮಾಡುವ ಮಹಾತ್ಮನಾದ ಸೂರ್ಯನೇ ! ಬಾ ! ಎಂದು ಕೂಗುತ್ತವೆಯೋ ಎನ್ನುವಹಾಗೆ ಕೋಳಿಗಳು ಕೂಗಿದುವು.

276. (೧) ಸಿರಿಮನೆಯ=ಸಿರಿ-ಲಕ್ಷ್ಮಿಗೆ, ಮನೆಯ-ವಾಸಸ್ಥಾನವಾದ ತಾವರೆಹೂವಿನ, (೨) ಬಾಗಿಲು-ಕದಗಳು, ಹೂಡಿದುವು-ತೆರೆಯಲ್ಪಟ್ಟುವು ; ಕೂಡೆವೆರೆದ - ಒಂದಾಗಿಸೇರಿದ, ಅಳಿಗಣವು - ತುಂಬಿಗಳ ಸಮೂಹವು, ಸೆರೆಬಿಟ್ಟು-ತಾವರೆಹೂವಿನ ಮೊಗ್ಗೆಂಬ ಸೆರೆಯನ್ನು ಬಿಟ್ಟು, ಲೀಲೆಯಲಿ-ವಿಲಾಸದಿಂದ, ಆಡುತ ಇರ್ದುವು-ಹಾರಾಡುತ್ತಿದ್ದುವು; (೩) ಚಕ್ರಗಳು-ಹೆಣ್ಣು ಗಂಡು ಚಕ್ರವಾಕಪಕ್ಷಿಗಳು, ಸಂತಸದಿ- ಸಂತೋಷದಿಂದ, ಕೂಡಿದುವು - ಸೇರಿದುವು ; (೪) ತಂಬೆಲರು - ತಣ್ಣನೆ ಇರುವ ಗಾಳಿಯು, ತಣ್ಣನೆ-ತಂಪಾಗಿ, ತೀಡೆ-ಬೀಸಲು, ದಿನಕರ - ಸೂರ್ಯನು, ರಥವನು - ತನ್ನ ಬಂಡಿಯನ್ನು, ಹೂಡಿ - ಅಣಿಮಾಡಿಕೊಂಡು, (೫) ಮೂಡವೆಣ್ಣಿನ- ಪೂರ್ವದಿಕ್ಕೆಂಬ ಸ್ತ್ರೀಯ, ಪಣೆಯ - ಹಣೆಯಲ್ಲಿರುವ, (೬) ಚಂದಿರವಟ್ಟಸಂತೆ-ಕುಂಕುಮದಬೊಟ್ಟಿನ ಹಾಗೆ, ಎಸೆದ-ಪ್ರಕಾಶಿಸಿದನು.

ಭಾವಾರ್ಥ ॥ ಹೂಡಿದುವು ಸಿರಿಮನೆಯಬಾಗಿಲು - ತಾವರೆಹೂಗಳು ಅರಳಿದುವು; ದಿನಕರಮೂಡ........ತೆಸೆದ-ಸೂರ್ಯನು ಪೂರ್ವದಿಕ್ಕಿನ ತುದಿಯಲ್ಲಿ ಉದಿಸಿ ಕೆಂಪಾದ ಕಿರಣವುಳ್ಳವನಾಗಿ ಹೊಳೆಯುತ್ತಿದ್ದನು.

ತಾತ್ಪರ್ಯ॥ ತಾವರೆಹೂಗಳು ಅರಳಿದುವು ; ತುಂಬಿಗಳು ಹಿಂದಣ ರಾತ್ರಿ ಹೂವಿನರಸ ಕುಡಿಯುವಾಗ ಮೊಗ್ಗಾದ ತಾವರೆಗಳೊಳಗೆ ಸಿಕ್ಕು ಬಿದ್ದು ಅವು ಅರಳಿದುದರಿಂದ ಈಗ ಆ ತಾವರೆಹೂಗಳಿಂದ ಹೊರಟು ಈಚೆಗೆ ಬಂದು ವಿಲಾಸದಿಂದ ಹಾರಾಡುತ್ತಿದ್ದುವು ಹೆಣ್ಣು ಗಂಡು ಚಕ್ರವಾಕ ಪಕ್ಷಿಗಳು ಹಿಂದಣರಾತ್ರಿ ಅಗಲಿಹೋಗಿದ್ದು ಬೆಳಗಾದು

ದರಿಂದ ಸಂತೋಷದಿಂದ ಸೇರಿಕೊಂಡುವು. ತಂಗಾಳಿಯು ತಣ್ಣಗೆ ಬೀಸುತ್ತಿರಲು ಸೂರ್ಯನು ರಥದಮೇಲೆ ಕುಳಿತು, ಪೂರ್ವದಿಕ್ಕೆಂಬ ಸ್ತ್ರೀಯ ಹಣೆಯಲ್ಲಿರುವ ಕುಂಕುಮದ ಬೊಟ್ಟೋ ಎನ್ನುವಹಾಗೆ ಪೂರ್ವ ದಿಕ್ಕಿನತುದಿಯಲ್ಲಿ ಉದಿಸಿ ಕೆಂಪಾದ ಕಿರಣಗಳಿಂದ ಪ್ರಕಾಶಿಸುತ್ತಿದ್ದನು.

ವಿ॥ (೧) ಸಿರಿಯುಮನೆ (ಕ. ಷ. ತ.) (೨) ಇದು ಜಾತಿಯಲ್ಲಿ ಏಕವಚನವಾದುದರಿಂದ ಹೂಡಿದುವು, ಎಂದು ಕ್ರಿಯಾಪದವು ಬಹುವಚನ ವಾಗಿದೆ (೩) ಚಕ್ರಿಗಳೂ+ಚಕ್ರಗಳೂ=ಚಕ್ರಗಳು (ಏಕಶೇಷ ದ್ವಂದ್ವಸಮಾಸ). (೪) ತಣ್ಣಿತು+ಎಲರು=ತಂಬೆಲರು (ಕ. ವಿ. ಪೂ.) ಸಮಾಸದಲ್ಲಿ ನಡುವೆ, ಬಕಾರವು ಉಚಿತಾಕ್ಷರಾಗಮವು. (೫) ಮೂಡಲ್ ಎಂಬ ಪೆಣ್ (ಕ. ಅ. ಪೂ.) (೬) ಚಂದಿರದ+ಬಟ್ಟು (ಕ. ಷ. ತ.)

ಟಿಪ್ಪಣಿ॥ ಪ್ರಾತಃಕಾಲವಾದರೆ ತಾವರೆಹೂವು ಅರಳುವುದೂ ನೈದಿಲೆಹೂವು ಮೊಗ್ಗಾಗುವುದೂ ರಾತ್ರಿಯಾಗಲು ಅಗಲುವ ಸ್ವಭಾವವುಳ್ಳ ಹೆಣ್ಣು ಗಂಡು ಚಕ್ರವಾಕಗಳು ಸೇರುವುದೂ ತಂಗಾಳಿ ಬೀಸುವುದೂ ಸೂರ್ಯನು ಕೆಂಪಾಗಿ ಉದಿಸುವುದೂ ಸ್ವಭಾವವು.

277. (೧) ಇರುಳುವೆಣ್ಣಿನ-ರಾತ್ರಿಯೆಂಬ ಸ್ತ್ರೀಯು, ಜವ್ವನಂ-ಯೌವನವು(ಪ್ರಾಯವು), ಸಲೆ-ಬಹಳವಾಗಿ, ಕೊರಗಿತು-ಕುಂದಿಹೋಯಿತು ; ಆನಂದಿಸುವ-ಉಲ್ಲಾಸಪಡುತ್ತಿರುವ, ಕುವಲಿನಿ - ನೈದಿಲೆಬಳ್ಳಿ ಎಂಬ ಸ್ತ್ರೀಯು, ಶಿರವೆ-ತಲೆಯನ್ನು, ಬಗ್ಗಿಸಿ-ತಗ್ಗಿಸಿ, ತೂಕಡಿಸಿದಳು-ನಿದ್ರಾವಿಕಾರವನ್ನು ಹೊಂದಿದಳು; ಮಲಗಿದ-ಪವಡಿಸಿದ (ನಿದ್ರೆಮಾಡುತ್ತಿದ್ದ), ಅಬ್ಜಿನಿಯು-ತಾವರೆಬಳ್ಳಿಯೆಂಬ ಸ್ತ್ರೀಯು, ಹರುಷದಿಂ-ಉಲ್ಲಾಸದಿಂದ ಮೊಗವೆತ್ತಿ-ಮುಖವನ್ನು ಎತ್ತಿ, ನಗುತ ಇರೆ-ನಗುತ್ತಿರಲು, ತರಣಿ-ಸೂರ್ಯನು, ಕರದಿ-ಕಯ್ಯಿಂದ (ಕಿರಣದಿಂದ ಎಂದು ಮತ್ತೊಂದು ಪ್ರಕೃತಾರ್ಥ), (೨)ಪ್ರಾಗಂಗನೆಯ=ಪ್ರಾಕ್-ಪೂರ್ವದಿಕ್ಕೆಂಬ, ಅಂಗನೆಯ-ಸ್ತ್ರೀಯನ್ನು, ಮನ್ನಿಸಿ-ಉಪಚರಿಸಿ, ಉದಯಪರ್ವತ ಶಿಖರವಿಷ್ಟರದಿ=ಉದಯಪರ್ವತ-ಉದಯಪರ್ವತದ, ಶಿಖರ-ಕೋಡುಗಲ್ಲೆಂಬ, ವಿಷ್ಟರದಿ-ಪೀಠದಲ್ಲಿ, ನೆಲಸಿದನು-ಕುಳಿತುಕೊಂಡನು.

ವಿ॥ (೧) ಇರುಳೆಂಬ+ಪೆಣ್ (ಕ. ಅ. ಪೂ.) ಪ್ರಾಕ್ಕೆಂಬ+ಅಂಗನೆ (ಕ. ಅ. ಪೂ.)

ಸರಳ ತಾತ್ಪರ್ಯ ॥ ರಾತ್ರಿಯ ಕಳೆ ಕಡಿಮೆಯಾಗುತ್ತ ಬಂದಿತು. ಅರಳದ ನೈದಿಲೆ ಹೂವು ಮೊಗ್ಗಾಗಿ ನೈದಿಲೆ ಬಳ್ಳಿಯ ಕಾಂತಿ ಕುಗ್ಗಿತು. ಮೊಗ್ಗಾಗಿದ್ದ ತಾವರೆಹೂವು ಅರಳಿ ತಾವರೆ ಬಳ್ಳಿಯು ಕಂಗೊಳಿಸುತ್ತಿದ್ದಿತು. ಪೂರ್ವದಿಕ್ಕಿನಲ್ಲಿ ಕಿರಣಗಳು ಪಸರಿಸಲು, ಉದಯಪರ್ವತದ, ಎಂದರೆ ಪೂರ್ವಪರ್ವತದ) ಶಿಖರದಲ್ಲಿ ಸೂರ್ಯೋದಯವಾಯಿತು.

---

೧. ಅವಯವಾರ್ಥಗಳು.

(ನಿರ್ಜರರಾಯನಂದನ) ಜರೆ-ಮುಪ್ಪು, ಅದಿಲ್ಲದವರು=ನಿರ್ಜರರು. ನಿರ್ಜರ-ದೇವತೆಗಳಿಗೆ, ರಾಯ-ಒಡೆಯನು, ನಿರ್ಜರರಾಯ-ದೇವೇಂದ್ರನ, ನಂದನ-ಮಗನು, (ನೃಪ) ನೃ-ಮನುಷ್ಯರನ್ನು, ಪ-ರಕ್ಷಿಸುವವನು, (ಧರಿತ್ರೀಪಾಲ)ಧರಿತ್ರೀ-ಭೂಮಿಯನ್ನು, ಪಾಲ-ಆಳುವವನು,(ಪಾಂಚಾಲಿ) ಪಾಂಚಾಲ-ಪಾಂಚಾಲದೇಶದ ದೊರೆಯಾದ ದ್ರುಪದರಾಜನು, ಅವನ ಮಗಳು, (ಮಹೀಸುರ) ಮಹೀ-ಭೂಮಿಯಲ್ಲಿ, ಸುರ-ದೇವತಾಸ್ವರೂಪನು (ದ್ವಿಜ) ದ್ವಿಃ-ಎರಡುಸಲ, ಜ-ಹುಟ್ಟಿದವರು (ಉಪನಯನವಾದ ಮೇಲೆ ಮತ್ತೊಂದು ಸಲ ಹುಟ್ಟಿದಹಾಗೆ ಭಾವಿಸಬೇಕು) (ಅರವಿಂದವದನೆ) ಅರವಿಂದ-ತಾವರೆಹೂವಿನಂತೆ, ವದನೆ-ಮುಖವುಳ್ಳವಳು; (ಭರತ) ಭರತನೆಂಬ ಋಷಿಯಿಂದ ಕಲ್ಪಿತವಾದುದು; (ಪಾರ್ಥ) ಪೃಥೆಯ ಎಂದರೆ ಕುಂತಿಯ, ಮಗ, ನಿತಂಬಿನಿ-ಪ್ರಶಸ್ತವಾದ, ನಿತಂಬ-ನಡುವಿನ ಹಿಂಭಾಗವುಳ್ಳವಳು, (ವೈನತೇಯ) ವಿನತಾದೇವಿಯ ಮಗನು (ಭೂದೇವ) ಭೂ-ಭೂಮಿಯಲ್ಲಿ, ದೇವ-ದೇವತೆಯು (ಭೂಸುರ) ಭೂ-ಭೂಮಿಯಲ್ಲಿ, ಸುರ-ದೇವತೆಯು, (ಕೃಷ್ಣಾಜಿನ) ಕೃಷ್ಣ-ಜಿಂಕೆಯ, ಅಜಿನ-ಚರ್ಮ, (ತಿಮಿಂಗಿಲ) ತಿಮಿ-ತಿಮಿ ಎಂಬ ಮೀನನ್ನು, ಗಿಲ-ತಿನ್ನುವಂತಹುದು, (ದ್ವಿಪ) ದ್ವಿ-ಸುಂಡಿಲು ಮತ್ತು ಬಾಯಿ ಇವೆರಡರಿಂದ, ಪ-ಕುಡಿಯುವಂತಹುದು, (ಪಾರ್ಥಿವ) ಪೃಥಿವಿ ಅಂದರೆ ಭೂಮಿಗೆ ಒಡೆಯನು, (ತ್ರಿಪುರಾರಿ)ತ್ರಿಪುರ-ಮೂರುಪಟ್ಟಣಗಳಿಗೆ, ಅರಿ-ಶತ್ರುವಾದವನು, (ಜಲಧಿ) ಜಲ-ನೀರು, ಧಿ-ನಿಲ್ಲುವ ಸ್ಥಳವು, (ದಿವಿಜ) ದಿವಿ-ಸ್ವರ್ಗಲೋಕದಲ್ಲಿ, ಜ-ಇರುವವರು,

(ರಘುನಂದನ) ರಘು-ರಘುವಂಶದ ದೊರೆಗಳನ್ನು, ನಂದನ-ಆನಂದ ಪಡಿಸುವವನು, (ಪುರಂದರ) ಪುರಂ-ಶತ್ರುಪಟ್ಟಣಗಳನ್ನು, ದರ-ಸೀಳುವ ವನು, (ಪ್ರಭಾಕರ) ಪ್ರಭಾ-ಕಾಂತಿಯನ್ನು, ಕರ-ಉಂಟುಮಾಡುವ ವನು, (ಸುರಮಹೀರುಹ) ಮಹೀ-ಭೂಮಿಯಲ್ಲಿ, ರುಹ-ಹುಟ್ಟಿದುದು, ಸುರ-ದೇವತೆಗಳ, ಮಹೀರುಹ-ಮರ, (ಲಕ್ಷ್ಮೀವರ) ಲಕ್ಷ್ಮೀ-ಲಕ್ಷ್ಮೀ ದೇವಿಗೆ, ವರ-ಪತಿ, (ಬಿಸರುಹಪ್ರಿಯ) ಬಿಸ-ತಾವರೆದಂಟಿನಲ್ಲಿ, ರುಹ-ಹುಟ್ಟಿದುದು ; ಬಿಸರುಹ-ತಾವರೆಹೂಗಳಿಗೆ, ಪ್ರಿಯ-ಇಷ್ಟನಾದವನು, (ಅವನಿಯಅಮರರು) ಅವನಿಯ-ಭೂಮಿಯ, ಅಮರರು-ದೇವತೆಗಳು, (ಕ್ಷಿತಿಯ ವಿಬುಧ) ಕ್ಷಿತಿಯ-ಭೂಮಿಯ, ವಿಬುಧ-ದೇವತೆ, (ಮತಂಗಜ) ಮತಂಗ-ಮತಂಗಋಷಿಯ ದೆಸೆಯಿಂದ, ಜ-ಹುಟ್ಟಿದುದು, (ಕಂಧರ) ಕಂ-ತಲೆಯನ್ನು, ಧರ-ವಹಿಸಿಕೊಂಡಿರುವಂತಹುದು, (ನರಪಾಲ) ನರ-ಪ್ರಜೆ ಗಳನ್ನು ಪಾಲ-ಆಳುವವನು, (ಅಚಲ) ಚಲಿಸದೆ ಇರುವಂಥಾದ್ದು, (ವಿಹಂಗಮ)ವಿಹ-ಆಕಾಶದಲ್ಲಿ, ಗಮ-ನಡೆಯುವಂಥಾದ್ದು, (ಕಟ್ಟುಲುಹು) ಕಡಿದು-ಹೆಚ್ಚಾದ, ಉಲುಹು-ಧ್ವನಿ, (ಅವನಿಜಾಪತಿ) ಅವನಿ-ಭೂಮಿ ಯಲ್ಲಿ, ಜಾ-ಹುಟ್ಟಿದವಳು ; ಅವನಿಜಾ-ಸೀತಾದೇವಿಗೆ, ಪತಿ-ಗಂಡನು, (ಅಂತಃಕರಣ)ಅಂತಃ-ಒಳಗಡೆ ಇರುವ, ಕರಣ-ಇಂದ್ರಿಯ, (ಚಮೂಪ) ಚಮೂ-ಸೈನ್ಯವನ್ನು, ಪ-ಆಳುವವನು, (ರಘುಪತಿ) ರಘುವಂಶದ ದೊರೆ ಗಳಿಗೆ, ಪತಿ-ಪ್ರಭು, (ಅವನಿತನುಜಾಪತಿ) ತನು-ತನ್ನಶರೀರದಲ್ಲಿ, ಜಾ-ಹುಟ್ಟಿದವಳು ; ಅವನಿ-ಭೂಮಿಯ, ತನುಜಾ-ಮಗಳಾದ ಸೀತಾದೇವಿಗೆ, ಪತಿ (ಸಾರ್ವಭೌಮ) ಸರ್ವಭೂಮಿಗೂ ಒಡೆಯನು, (ದಳಪತಿ) ದಳ-ಸೈನ್ಯಕ್ಕೆ, ಪತಿ-ಒಡೆಯನು, (ಗಗನಮಣಿ) ಗಗನ-ಅಂತರಿಕ್ಷಕ್ಕೆ, ಮಣಿ-ರತ್ನಪ್ರಾಯನಾದವನು, (ಅವನೀನಾಥ) ಅವನೀ-ಭೂಮಿಗೆ, ನಾಥ-ಒಡೆಯನು, (ಸುಧಾಂಬುಧಿ) ಸುಧಾ-ಹಾಲಿನ, ಅಂಬುಧಿ-ಸಮುದ್ರ, (ಭೂಪ) ಭೂ-ಭೂಮಿಯನ್ನು, ಪ-ಆಳುವವನು. (ನರಪತಿ) ನರ-ಪ್ರಜೆಗಳಿಗೆ, ಪತಿ (ಮಹೀಪಾಲ) ಮಹೀ-ಭೂಮಿಯನ್ನು, ಪಾಲ-ಆಳು ವವನು, (ಅಸುರ) ಸುರ-ಅಂದರೆ ದೇವತೆಗಳಿಗೆ ವಿರೋಧಿಗಳಾದವರು, (ಅಮರ) ಮರ-ಮರಣವು, ಆದಿಲ್ಲದವರು, (ತನುಜ) ತನು-ತನ್ನಶರೀರ ದಿಂದ, ಜ-ಹುಟ್ಟಿದವನು, (ಇಂದುಮುಖಿ) ಇಂದು-ಚಂದ್ರನಂತೆ, ಮುಖಿ-

ಮೊಗವುಳ್ಳವಳು, (ರಘುಸಂಜಾತ) ರಘು-ರಘುರಾಜನವಂಶದಲ್ಲಿ, ಸಂಜಾತ-ಹುಟ್ಟಿದವನು, (ಕ್ಷಿತಿಪ) ಕ್ಷಿತಿ-ಭೂಮಿಯನ್ನು, ಪ-ಆಳುವವನು (ಅವನಿಪಾಲ) ಅವನಿ-ಭೂಮಿಯನ್ನು, ಪಾಲ ಆಳುವನು, (ರಾಘವೇಶ್ವರ) ರಾಘವ-ರಘುವಂಶದ ದೊರೆಗಳಿಗೆ, ಈಶ್ವರ-ಒಡೆಯನು, (ಅನೃತ) ಋತ-ಸುಳ್ಳು, ಅದಲ್ಲದುದು (ಅಮರೇಂದ್ರ) ಅಮರ-ದೇವತೆಗಳಿಗೆ, ಇಂದ್ರ-ಪ್ರಭು.

(ನಿತ್ಯಾತ್ಮಕ) ನಿತ್ಯ-ಶಾಶ್ವತವಾದ, ಆತ್ಮಕ-ಶರೀರವುಳ್ಳವನು, (ಅಂಬುರುಹಮಿತ್ರ) ಅಂಬು-ನೀರಿನಲ್ಲಿ, ರುಹ-ಹುಟ್ಟಿದುದು; ಅಂಬುರುಹ-ತಾವರೆಹೂಗಳಿಗೆ, ಮಿತ್ರ-ಸ್ನೇಹಿತ, (ದೇವದೇವ) ದೇವ-ದೇವತೆಗಳಿಗೆ ದೇವ-ಸ್ವಾಮಿ, (ರಾಜೀವಸಖ) ರಾಜೀವ - ತಾವರೆಹೂಗಳಿಗೆ, ಸಖ-ಮಿತ್ರನು, (ರಾಜೀವನಾಭ) ರಾಜೀವ-ತಾವರೇಹೂವೇ, ನಾಭ-ಹೊಕ್ಕುಳಲ್ಲಿ ಉಳ್ಳವನು, (ಕಂಜಸಖ) ಕಂ-ನೀರಿನಲ್ಲಿ, ಜ-ಹುಟ್ಟಿದುದು, ಕಂಜ-ತಾವರೆಗಳಿಗೆ, ಸಖ - ಮಿತ್ರ (ಮುರವೈರಿ) ಮುರ - ಮುರಾಸುರನಿಗೆ, ವೈರಿ-ಶತ್ರು (ಮಧುವೈರಿ) ಮಧು-ಮಧುವೆಂಬ ರಾಕ್ಷಸನಿಗೆ, ವೈರಿ, (ಗೋವಿಂದ) ಗೋ-ಹಸುಗಳನ್ನು, ವಿಂದ-ಕಾಯುವುದಕ್ಕೆ ಹೊಂದಿದವನು, (ಮುಕುಂದ) ಮೋಕ್ಷವನ್ನು ಕೊಡತಕ್ಕವನು, (ಕೇಸರಿ) ಕೇಸರ ಅಂದರೆ ಕತ್ತಿನಸುತ್ತಲೂ ಇರುವ ಕೂದಲು, ಅದುಳ್ಳುದು,(ಅಸುರಾಂತಕ)ಅಸುರ-ರಾಕ್ಷಸರಿಗೆ, ಅಂತಕ-ಯಮಸ್ವರೂಪನು, (ಮುರಹರ) ಮುರ-ಮುರಾಸುರನನ್ನು, ಹರ-ಕೊಂದವನು, (ಅಸುರಾರಿ) ಅಸುರ-ರಾಕ್ಷಸರಿಗೆ, ಅರಿ-ಶತ್ರು, (ನರಸಿಂಹ) ನರ-ಮನುಷ್ಯರಲ್ಲಿ, ಸಿಂಹ-ಶ್ರೇಷ್ಠನು, (ಋಕ್ಷಪ ಋಕ್ಷ-ಕರಡಿಗಳನ್ನು, ಪ-ಆಳುವವನು, (ಋಕ್ಷಾಧಿಪತಿ) ಋಕ್ಷ-ಕರಡಿಗಳಿಗೆ, ಅಧಿಪತಿ-ಒಡೆಯನು, (ಅರಿಷ್ಟವೈರಿ) ಅರಿಷ್ಟ-ಅಶುಭಗಳಿಗೆ, ವೈರಿ-ಶತ್ರುವಾದವನು, (ಕೌಸ್ತುಭಧಾರಿ) ಕೌಸ್ತುಭ-ಕೌಸ್ತುಭವೆಂಬ ರತ್ನವನ್ನು, ಧಾರಿ-ಧರಿಸಿರುವವನು, (ಶಂಕರ) ಶಂ-ಸುಖವನ್ನು ಕರ-ಉಂಟುಮಾಡುವವನು, (ಸರಸೀರುಹೋದ್ಭವ) ಸರಸೀ-ಕೊಳದಲ್ಲಿ, ರುಹ-ಹುಟ್ಟಿದುದು, ಸರಸೀರುಹ-ವಿಷ್ಣುವಿನ ನಾಭಿಕಮಲದಲ್ಲಿ, ಉದ್ಭವ-ಹುಟ್ಟಿದವನು, (ಪೃಥ್ವೀಶ್ವರ) ಪೃಥ್ವೀ-ಭೂಮಿಗೆ, ಈಶ್ವರ-ಒಡೆಯನು, (ವನಧಿ) ವನ-ನೀರು, ಧಿ-ನಿಲ್ಲುವಸ್ಥಳ.

(ಸರೋಽಜಿನಿ) ಸರೋಽಜ_ತಾವರೇಹೂವು, ಅದುಳ್ಳದು (ಅಂಭೋಽ ಜಸಖ) ಅಂಭಃ_ನೀರಿನಲ್ಲಿ, ಜ_ಹುಟ್ಟಿದುದು, ಅಂಭೋಽಜ-ತಾವರೆಗಳಿಗೆ, ಸಖ_ಮಿತ್ರನು, (ಅಪರಾದ್ರಿ) ಅಪರ_ಪಶ್ಚಿಮದಿಕ್ಕಿನಲ್ಲಿರುವ, ಅದ್ರಿ_ಬೆಟ್ಟ (ಅಬ್ಧಿ) ಅಪ್_ನೀರು, ಧಿ_ನಿಲ್ಲುವಸ್ಥಳ, (ವಿಹಗ) ವಿಹ_ಆಕಾಶದಲ್ಲಿ, ಗ-ಸಂಚರಿಸುವಂಥಾದ್ದು, (ಜಲಜಾತ) ಜಲ-ನೀರಿನಲ್ಲಿ, ಜಾತ_ಹುಟ್ಟಿದುದು, (ದಿನಕರ) ದಿನ_ಹಗಲನ್ನು ಕರ_ಉಂಟುಮಾಡುವವನು.

---

೨. ಪೂರ್ವ ಕಥೆಗಳು.

ಪದ್ಯಸಾರ, ಪದ್ಯ—243ರಲ್ಲಿ ಕಥೆಗಳು.

ದಧೀಚಿಋಷಿಯ ಕಥೆ:—ಪೂರ್ವದಲ್ಲಿ ವೃತ್ರನೆಂಬ ರಾಕ್ಷಸನು ಬಹಳ ಕೊಬ್ಬಿದವನಾಗಿ ದೇವತೆಗಳನ್ನು ಬಾಧಿಸುತ್ತಿದ್ದನು. ಆಗ ಇಂದ್ರನು ಆ ರಾಕ್ಷಸನನ್ನು ನಿಗ್ರಹಿಸಲು ಆಲೋಚಿಸಿ ತಪಸ್ಸಿನಿಂದ ವಜ್ರ ಶರೀರವನ್ನು ಪಡೆದ ಮಹಾತ್ಮನಾದ ದಧೀಚಿಋಷಿಯ ಮೂಳೆಯಿಂದ ಆಯುಧವನ್ನು ಮಾಡಿ ಪ್ರಯೋಗಿಸಿದರೆ ಆ ರಾಕ್ಷಸನನ್ನು ಸಂಹರಿಸ ಬಹುದೆಂದು, ಪರಮಮುನೀಂದ್ರನಾದ ದಧೀಚಿಋಷಿಯನ್ನು ಕುರಿತು, ವೃತ್ರಾಸುರನ ಸಂಹಾರಕ್ಕಾಗಿ ನಿಮ್ಮ ಬೆನ್ನಮೂಳೆಯನ್ನು ಕೊಡ ಬೇಕೆಂದು ಪ್ರಾರ್ಥಿಸಿದನು. ದಧೀಚಿಋಷಿಯು ಹಾಗೆಯೇ ಆಗಲಿ, ಎಂದು ಮಾತುಕೊಟ್ಟು ತನ್ನ ಬೆನ್ನಮೂಳೆಯನ್ನು ಕೊಡಲು ಇಂದ್ರನು ಆ ಎಲುವಿನಿಂದ ವಜ್ರಾಯುಧವನ್ನು ಮಾಡಿಕೊಂಡು, ತನ್ನ ತಾಯಿಯಾದ ಅದಿತಿದೇವಿಗೆ ನಮಸ್ಕರಿಸಲಾಗಿ, ಆಕೆಯು ಜಯಶಾಲಿಯಾಗಿ ಬಾ! ಎಂದು ಹರಸಿದಳು. ಬಳಿಕ ಇಂದ್ರನು ತಂದೆಯಾದ ಕಶ್ಯಪಋಷಿಗೂ ವಂದಿಸಿ ಆಶೀರ್ವಾದವನ್ನು ಕೈಕೊಂಡು ಯುದ್ಧಕ್ಕೆ ಹೋಗಿ ವಜ್ರಾಯುಧದಿಂದ ವೃತ್ರಾಸುರನನ್ನು ಹೊಡೆದು ನಿಗ್ರಹಿಸಿದನು.

ಶಿಬಿಚಕ್ರವರ್ತಿಯ ಕಥೆ:— ಇಂದ್ರನೂ ಯಮನೂ ಶಿಬಿಚಕ್ರ ವರ್ತಿಯ ಸತ್ಯವನ್ನು ಪರೀಕ್ಷಿಸಬೇಕೆಂದು ಹೊರಟರು. ಇಂದ್ರನು ಗಿಡು ಗನ ಹಕ್ಕಿಯ ರೂಪವನ್ನೂ, ಯಮನು ಪಾರಿವಾಳದಹಕ್ಕಿಯ ರೂಪವನ್ನೂ ತಾಳಿದರು. ಆ ಗಿಡುಗನ ಹಕ್ಕಿಯು ಆ ಪಾರಿವಾಳದ ಹಕ್ಕಿಯನ್ನು ಅಟ್ಟ

ಕೊಂಡು ಬರಲು, ಪಾರಿವಾಳವು ಯಾಗಶಾಲೆಯಲ್ಲಿದ್ದ ಶಿಬಿರಾಜನ ಸಮೀಪಕ್ಕೆ ಬಂದು ನನ್ನನ್ನು ರಕ್ಷಿಸೆಂದು ಪ್ರಾರ್ಥಿಸಿತು. ಶಿಬಿಯು ರಕ್ಷಿಸುವೆನೆಂದು ಪಾರಿವಾಳಕ್ಕೆ ಅಭಯವನ್ನು ಕೊಟ್ಟನು. ಹಿಂದೆಯೇ ಗಿಡುಗನು ಬಂದು ನನ್ನ ಆಹಾರಭೂತವಾದ ಈ ಪಾರಿವಾಳವನ್ನು ಬಿಟ್ಟುಕೊಡು. ಇಲ್ಲದಿದ್ದರೆ ಈ ಹಕ್ಕಿಯ ತೂಕದಷ್ಟು ಮಾಂಸವನ್ನು ನಿನ್ನ ಶರೀರದಲ್ಲಿ ಕೊಡು, ಎನ್ನಲು, ಆ ಶಿಬಿರಾಜನು ಹಕ್ಕಿಯನ್ನು ಕೊಡೆನು. ನನ್ನ ಶರೀರದ ಮಾಂಸವನ್ನು ಕೊಡುತ್ತೇನೆಂದು ಹೇಳಿ, ತನ್ನ ದೇಹವನ್ನು ಬಗಿದು ಆ ಪಾರಿವಾಳದ ತೂಕದಷ್ಟು ಮಾಂಸವನ್ನು ಆ ಗಿಡುಗನಿಗೆ ಕೊಟ್ಟು ಬಳಿಕ ನಿಜರೂಪವನ್ನು ತೋರಿಸಿದ ಆ ಇಂದ್ರ ಯಮರ ಅನುಗ್ರಹದಿಂದ ಸದ್ಗತಿ ಪಡೆದನು.

ಜೀಮೂತವಾಹನನ ಕಥೆ— ಸರ್ಪಗಳ ರಾಜನಾದ ವಾಸುಕಿಯು ಗರುಡನಿಗೆ ಆಹಾರಕ್ಕೋಸ್ಕರವಾಗಿ ನಿತ್ಯವೂ ಒಂದೊಂದು ಸರ್ಪವನ್ನು ಕಳುಹಿಸುವೆನೆಂದು ಮಾತುಕೊಟ್ಟು ನಡಿಸುತ್ತಿದ್ದನು. ಹೀಗಿರುವಲ್ಲಿ ಒಂದುದಿನ ಗರುಡನ ಆಹಾರಕ್ಕೆ ಶಂಖಚೂಡನೆಂಬ ಹಾವಿನ ಸರದಿ ಬಂದಿತು; ಶಂಖಚೂಡನು ಗರುಡನ ಬಳಿಗೆ ಹೋಗಲು ವೃದ್ಧರಾದ ಆ ಹಾವಿನ ತಾಯಿತಂದೆಗಳು ಬಹುವಾಗಿ ಗೋಳಿಡುತ್ತಿದ್ದರು. ಹೀಗಿರಲು ಜೀಮೂತವಾಹನನೆಂಬ ರಾಜನು ಅಲ್ಲಿಗೆ ಬಂದು ಅವರ ದುಃಖವನ್ನು ವಿಚಾರಿಸಿ ಬಲು ಕನಿಕರದಿಂದ ನಿಮ್ಮ ಶಂಖಚೂಡನಿಗೆ ಪ್ರತಿಯಾಗಿ ನನ್ನ ಶರೀರವನ್ನು ಆಹಾರಮಾಡುವೆನು, ಎಂದು ಅಭಯವನ್ನಿತ್ತು ಗರುಡನು ಬರುವ ಸಮಯಕ್ಕೆ ಸರಿಯಾಗಿ ತನ್ನ ಶರೀರವನ್ನು ಆತನಿಗೆ ಆಹಾರವಾಗಿ ಕೊಟ್ಟನು, ಗರುಡನು ಜೀಮೂತವಾಹನನ ಶರೀರವನ್ನು ಕುಕ್ಕಿ ಎಷ್ಟು ಹಿಂಸೆಮಾಡಿದರೂ ದೃಢಚಿತ್ತನಾಗಿರುವ ಆತನನ್ನು ನೋಡಿ ಮೆಚ್ಚಿ ಆತನ ಮೇಲೆ ಅಮೃತವನ್ನು ಕರೆದು ಶರೀರದ ವ್ರಣವನ್ನು ಪರಿಹರಿಸಿ ಆತನಿಗೆ ಬೇಕಾದ ವರಗಳನ್ನು ಕೊಟ್ಟು ತೆರಳಿದನು.

ಬಲಿಚಕ್ರವರ್ತಿಯ ಕಥೆ— ಪ್ರಹ್ಲಾದನ ವಂಶದಲ್ಲಿ ಬಲಿಯೆಂಬ ರಾಕ್ಷಸನು ಹುಟ್ಟಿ, ದೇವತೆಗಳನ್ನು ಬಾಧಿಸುತ್ತ ಇಂದ್ರನ ಸಿಂಹಾಸನವನ್ನು ಅಪಹರಿಸಲು, ಆ ಇಂದ್ರನಿಂದ ಪ್ರಾರ್ಥಿತನಾಗಿ ಶ್ರೀಮನ್ನಾರಾಯಣನು ವಾಮನಾವತಾರವನ್ನು ತಾಳಿ ಬಲಿರಾಜನಬಳಿಗೆ ಬಂದು ನನಗೆ ಮೂರು ಹೆಜ್ಜೆಯ ಭೂಮಿಯನ್ನು ದಾನ ಕೊಡಬೇಕೆಂದು ಕೇಳಿದನು.

ಬಲಿಯು ಹಾಗೆಯೇ ದಾನಕೊಡಲು, ವಾಮನನು ತ್ರಿವಿಕ್ರಮಾವತಾರ ಮಾಡಿ ಮೂರುಕಾಲುಗಳನ್ನು ಧರಿಸಿ, ಒಂದು ಪಾದದಿಂದ ಭೂಮಿಯನ್ನು ಅಳೆದು ಮತ್ತೊಂದು ಪಾದದಿಂದ ಆಕಾಶವನ್ನು ಅಳೆದು ಆಕ್ರಮಿಸಿ, ಇನ್ನೊಂದು ಪಾದವನ್ನೆಲ್ಲಿಡಬೇಕೆಂದು ಆತನನ್ನು ಕೇಳೆ ಆತನು ಹೇಳಿದಂತೆ ಬಲಿಯ ತಲೆಯಮೇಲೆ ಒಂದು ಪಾದವನ್ನಿಟ್ಟು ಪಾತಾಳಕ್ಕೆ ತುಳಿದನು.

ಕಪೋತದ ಕಥೆ—ತುಂದಿಲನೆಂಬ ಒಬ್ಬ ಬೇಡನು ಕಾಡಿಗೆ ಬೇಟೆ ಗೋಸ್ಕರಹೋಗಿ ಬೇಟೆಯಾಡುತ್ತ ಮಳೆಗೆ ಸಿಕ್ಕಿ ಪೇಚಾಡುತ್ತ ಒಂದು ಮರದ ಕೆಳಗೆ ಕುಳಿತು ಚಳಿಯಿಂದ ನಡುಗುತ್ತ ಕಾಡು ಕಡ್ಡಿಗಳಿಂದ ಉರಿಮಾಡಿ ಮೈ ಕಾಯಿಸಿ ಕೊಳ್ಳುತ್ತಿರುವಾಗ ಹಸಿವು ಹೆಚ್ಚಾಗಲು, ಮರದ ಮೇಲಿರುವ ಒಂದು ಪಾರಿವಾಳದ ಹಕ್ಕಿಯನ್ನು ನೋಡಿ, ಎಲೈ ಕಪೋತನೇ! ನನಗೆ ಹಸಿವು ಬಹಳವಾಗಿದೆ. ನನಗೆ ಆಹಾರವನ್ನು ಕೊಟ್ಟು ಕಾಪಾಡು, ಎಂದು ಮೊರೆಯಿಟ್ಟನು. ಆ ಪಾರಿವಾಳವು ಆ ಬೇಡನ ದೀನಧ್ವನಿಯನ್ನು ಕೇಳಿ, ಆ ಬೇಡನು ತನ್ನ ಹೆಂಡತಿಯಾದ ಹಕ್ಕಿಯನ್ನು ಬಲೆಯಲ್ಲಿ ಹಿಡಿದುಕೊಂಡಿದ್ದಾಗ್ಗೂ ಅವನಲ್ಲಿ ಅತಿಯಾಗಿ ಕನಿಕರಪಟ್ಟು, ಎಲೈ ಬೇಡನೇ! ಇಗೋ! ನನ್ನ ಶರೀರವನ್ನು ಬೆಂಕಿ ಯಲ್ಲಿ ಕೆಡಹುವೆನು, ನೀನು ಪ್ರೀತಿಯಿಂದ ಭಕ್ಷಿಸು, ಎಂದು ಹೇಳಿ ತಾನು ಆ ಮರದ ಕೆಳಗೆ ಬೇಡನು ಒಟ್ಟಿದ್ದ ಬೆಂಕಿಯಲ್ಲಿ ಬಿದ್ದಿತು. ಒಡನೆಯೇ ಹೆಣ್ಣುಹಕ್ಕಿಯು ನೋಡಿ ತಾನು ಸಹಗಮನವನ್ನುಮಾಡಿತು. ಬೇಡನು ಇದನ್ನು ನೋಡಿ ಆಶ್ಚರ್ಯಗೊಂಡು ಜ್ಞಾನೋದಯವಾಗಲು ಪ್ರಾಣಿ ಹಿಂಸೆಗಿಂತ ಮರಣವೇ ಲೇಸು, ಎಂದು ಆಲೋಚಿಸಿ ತಾನೂ ಆ ಬೆಂಕಿಗೆ ದೇಹವನ್ನು ಕೊಟ್ಟನು.

ಭಗೀರಥಯತ್ನ.

ಸೂರ್ಯವಂಶದ ಸಗರನೆಂಬ ಚಕ್ರವರ್ತಿಯು ಧರ್ಮದಿಂದ ರಾಜ್ಯಪರಿ ಪಾಲನೆ ಮಾಡುತ್ತ ಇಂದ್ರಪಟ್ಟವನ್ನು ಪಡೆಯಬೇಕೆಂದು ಅಶ್ವಮೇಧ ಯಾಗಕ್ಕೆ ಉಪಕ್ರಮಿಸಿ ಕುದುರೆಯನ್ನು ಬಿಟ್ಟನು. ದೇವೇಂದ್ರನು ತನ್ನ ಪದವಿಯನ್ನಪಹರಿಸುವನೆಂಬ ಹೊಟ್ಟೆಯಕಿಚ್ಚಿನಿಂದ ಆತನ ಕುದುರೆ ಯನ್ನು ಅಪಹರಿಸಿಕೊಂಡು, ಪಾತಾಳಲೋಕದಲ್ಲಿ ತಪಸ್ಸುಮಾಡುತ್ತಿದ್ದ ಕಪಿಲಮುನೀಂದ್ರನ ಹಿಂದೆ ಬಚ್ಚಿಟ್ಟನು. ಬಳಿಕ ಸಗರನು ಯಜ್ಞಾಶ್ವ

ದನ್ನು ಕಾಣದೆ ತನ್ನ ಅರವತ್ತು ಸಾವಿರ ಮಕ್ಕಳನ್ನು ಕುರಿತು, ನೀವ್ ಯಾಗದ ಕುದುರೆಯನ್ನು ಹುಡುಕಿಕೊಂಡಿ, ಎಂದು ಆಜ್ಞಾಪಿಸಿದನು. ಅವರು ತಂದೆಯ ಮಾತನ್ನು ಮೀರಬಾರದೆಂದು ಕುದುರೆಯನ್ನು ಭೂಮಂಡಲದಲ್ಲಿ ಹುಡುಕಿ ಕಾಣದೆ ಭೂಮಿಯನ್ನು ಉಗುರುಗಳಿಂದ ಭೇದಿಸಿ ಪಾತಾಳಲೋಕಕ್ಕೆ ಹೋಗಿ, ಅಲ್ಲಿ ಕಪಿಲಋಷಿಯ ಆಶ್ರಮಕ್ಕೆ ನುಗ್ಗಿ, ಅಲ್ಲಿರುವ ಕುದುರೆಯನ್ನು ಕಂಡು, ಅಶ್ವವನ್ನಪಹರಿಸಿದವನು. ಈ ಋಷಿಯೆನ್ನುತ್ತಾ ಬಾಧಿಸತೊಡಗಲು, ಆ ಮಹರ್ಷಿಯು ಕೋಪದಿಂದ ಕಣ್ಣುಬಿಟ್ಟು ನೋಡಲಾಗಿ, ಆತನ ನೇತ್ರಾಗ್ನಿಜ್ವಾಲೆಯಿಂದ ಅರುವತ್ತುಸಾವಿರ ಮಂದಿಯೂ ದಗ್ಧರಾದರು.

ಬಳಿಕ ಅಂಶುಮಂತನು ತನ್ನ ಪಿತಾಮಹನಾದ ಸಗರನಾಜ್ಞೆಯಿಂದ ಕುದುರೆಯನ್ನು ತರಲು ಹೋಗಿ ಪಾತಾಳಲೋಕದಲ್ಲಿ ಭಸ್ಮೀಕೃತರಾದ ಪಿತೃಗಳನ್ನು ನೋಡಿ ಅವರಿಗೆ ಸದ್ಗತಿಯನ್ನುಂಟುಮಾಡಲು ಅಲ್ಲಿಗೆ ಗಂಗೆಯನ್ನುತರಬೇಕೆಂದು ಆಲೋಚಿಸಿ ಕುದುರೆಯನ್ನು ಕಂಡೊಯ್ದು ಪುರಕ್ಕೆ ಬಂದು ಯಾಗವು ಪೂರೈಸಲಾಗಿ ತನ್ನ ಪಿತಾಮಹನ ಅನಂತರ ದೊರೆಯಾಗಿ ಆಳುತ್ತಿದ್ದು ಗಂಗೆಯನ್ನು ತರಲು ಹಿಮಾಲಯಕ್ಕೆ ತಪಸ್ಸಿಗೆ ಹೋದನು. ಬಳಿಕ ಆತನ ಮಗನಾದ ದಿಲೀಪನು ರಾಜ್ಯವಾಳುತ್ತಿದ್ದು ಲೋಕಾಂತರವನ್ನೈದಿದನು. ಆಮೇಲೆ ದಿಲೀಪನ ಮಗನಾದ ಭಗೀರಥನು ಪಿತೃಗಳ ಸದ್ಗತಿಗಾಗಿ ಗಂಗೆಯನ್ನು ತರಬೇಕೆಂದು ಗೋಕರ್ಣದಲ್ಲಿ ತಪಸ್ಸುಮಾಡಿ ಗಂಗೆಯು ಬರುವಂತೆ ಬ್ರಹ್ಮನಿಂದ ವರಪಡೆದು ಈಶ್ವರನಿಂದ ಗಂಗೆಯನ್ನು ಧರಿಸುವಂತೆ ವರವನ್ನೂ ಪಡೆದನು. ಗಂಗೆಯು ದೇವಲೋಕದಿಂದ ಆರ್ಭಟದಿಂದ ಬೀಳಲು ಈಶ್ವರನು ಜಡೆಯಲ್ಲಿ ಅಡಗಿಸಿಬಿಟ್ಟನು. ಭಗೀರಥನು ಚಿಂತೆಯಿಂದ ತಪಸ್ಸುಮಾಡಲಾಗಿ ಈಶ್ವರನಿಂದ ಬಿಡಲ್ಪಟ್ಟ ಗಂಗೆಯು ಭೂಮಿಯಲ್ಲಿ ಹರಿದುಬರುತ್ತ ಜಹ್ನುಮಹರ್ಷಿಯ ಆಶ್ರಮವನ್ನು ಮುಳುಗಿಸಲು ಆತನು ಗಂಗೆಯನ್ನು ಕುಡಿದು ಬಿಟ್ಟನು. ಭಗೀರಥನು ಮರಳಿ ಚಿಂತಾಕ್ರಾಂತನಾಗಲು, ದೇವತೆಗಳ ಪ್ರಾರ್ಥನೆಯಿಂದ ಆ ಋಷಿಯು ಗಂಗೆಯನ್ನು ಕಿವಿಯಲ್ಲಿ ಬಿಟ್ಟನು. ಆಮೇಲೆ ಗಂಗೆಯು ಭಗೀರಥನ ಹಿಂದೆ ಬರುತ್ತ ಪಾತಾಳಕ್ಕೆ ನುಗ್ಗಿ ದಗ್ಧರಾದ ಸಗರಪುತ್ರರ ಮೇಲೆ ಪ್ರವಹಿಸಲು ಅವರು ಸದ್ಗತಿಯನ್ನೈದಿದರು.

೩. ಸಂಖ್ಯಾವಿಶಿಷ್ಟವಾಚಕಗಳು.

(ಚತುರಂಗಬಲ)—ಆನೆ, ಕುದುರೆ, ರಥ, ಕಾಲಾಳು (ತಾಪತ್ರಯ) ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ (ನವರತ್ನಗಳು) ವಜ್ರ, ವೈಡೂರ್ಯ, ಗೋಮೇಧಕ, ಪುಷ್ಯರಾಗ, ನೀಲ, ಮರಕತ. ಪದ್ಮರಾಗ, ಮುತ್ತು ಹವಳ.

---

೪. ತದ್ಭವ ತತ್ಸಮರೂಪಗಳು

ತದ್ಭವ— ತತ್ಸಮ	ತದ್ಭವ— ತತ್ಸಮ	ತದ್ಭವ— ತತ್ಸಮ
ರಾಯ—ರಾಜನ್	ಉಮ್ಮಹ—ಉನ್ಮಹ	ಆರವೆ—ಆರಾಮ
ಕೇವಣ—ಕ್ಷೇಪಣ	ಐಶ್ವರಿಯ—ಐಶ್ವರ್ಯ	ಜಾಳಿಗೆ—ಜಾಲಿಕಾ
ದನಿ—ಧ್ವನಿ	ಆರತಿ—ಆರಾತ್ರಿಕಾ	ಜವ—ಯಮ
ಹೂರಿಗೆ—ಪೂರಿಕಾ	ಕಳಕಳಿಕೆ—ಕಲಕಲಿಕಾ	ರಕ್ಕಸಿ—ರಾಕ್ಷಸೀ
ಸೇವಿಗೆ—ಶ್ಯಾಮಿಕಾ	ರತುನ—ರತ್ನ	ಬಟ್ಟೆ—ಭ್ರಷ್ಟಾ
ಸನ್ನೆ—ಸಂಜ್ಞಾ	ಉಗ್ಗಡ—ಉತ್ಕಟ	ಅಡವಿ—ಅಟವೀ
ವಿಗಡ—ವಿಕಟ	ಬಿರುದು—ಬಿರುದ	ಕವಡು—ಕಪಟ
ಕರಡಿಗೆ ಕರಂಡಿಕಾ	ಬೀದಿ—ವೀಧೀ	ಬಕುತಿ—ಭಕ್ತಿ
ಬಾಸ—ವಾಸಸ್	ಗದಗದಿತ—ಗದ್ಗದಿತ	ಬಕುತ—ಭಕ್ತ
ಕಚೆ—ಕಚ್ಛಾ	ನೇಮ—ನಿಯಮ	ಬಿನ್ನಹ—ವಿಜ್ಞಾಪನ
ತುಳಸಿ—ತುಲಸೀ	ಕೈಕೆ—ಕೈಕೇಯೀ	ಗುಂಜೆ—ಗುಂಜಾ
ಉಂಗುಟ—ಅಂಗುಷ್ಠ	ಜವನಿಕೆ—ಯವನಿಕಾ	ಮಾಣಿಕ—ಮಾಣಿಕ್ಯ
ಉಪಾಧ್ಯ-ಉಪಾಧ್ಯಾಯ	ತಂದೆ—ತಾತ	ಜಾಂಬವ—ಜಾಂಬವದ್
ನಿಬ್ಬರ—ನಿರ್ಭರ	ಸ್ಪರುಶ—ಸ್ಪರ್ಶ	ಹಜ್ಜೆ—ಪದ್ಯಾ
ಮುಗುಳು—ಮುಕುಳ	ಉತ್ಕರುಷ—ಉತ್ಕರ್ಷ	ಮೂರುತಿ—ಮೂರ್ತಿ
ಲಾಗು—ಲಾಘವ	ದಿಟ್ಟಿ—ದೃಷ್ಟಿ	ಬಿಜಯ—ವಿಜಯ
ದಂಡಿಗೆ—ದಾಂಡಿಕಾ	ಸೊಬಗು—ಸುಭಗ	ಮೊಗ—ಮುಖ
ಕಳಕಳ—ಕಲಕಲ	ಸೆಜ್ಜೆ—ಶಯ್ಯಾ	ಮೈಸಿರಿ—ಮಹಾಶ್ರೀ
ಹರುಷ-ಹರ್ಷ	ಆಗರ—ಆಕರ	ಕೋಳಿ—ಕುಕ್ಕುಟ
ಆಯಸ—ಆಯಾಸ	[illegible]	[illegible]ರ—ಚಂದ್ರ
ಸಿರಿ—ಶ್ರೀ	[illegible]	[illegible]ವ—ಯೌವನ
ಬೊಮ್ಮ—ಬ್ರಹ್ಮನ್	[illegible]	[illegible]ಣೆ—ಮಾನ್ಯತಾ

- ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

(ಅಥವಾ) 40, ಮನೆವಾರ್ತೆಪೇಟೆ, ಬೆಂಗಳೂರು ಸಿಟಿ.

೧. ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ:— ನಮ್ಮ ಕೆಲವು ನೋಟ್ಸುಗಳ (ಪುಸ್ತಕಗಳನ್ನು) ಮೊದಲಿಗಿಂತ ಕಮ್ಮಿ ಬೆಲೆಗೆ ಇಳಿಸಿದ್ದೇವೆ.

೨. ವ್ಯಾಪಾರಸ್ಥರ ಸೌಕರ್ಯಕ್ಕೋಸ್ಕರ:—ನಮ್ಮ ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುತ್ತೇವೆ. ಮತ್ತು ನಮ್ಮ ಸ್ವಂತ ಪುಸ್ತಕಗಳೊಡನೆ ಬೇರೆ ಯಾವ ಪುಸ್ತಕಗಳನ್ನು ಅಪೇಕ್ಷಿಸಿದರೂ ಕಳುಹಿಸುವೆವು.

೩. ಈಗಿನ ಹೊಸ ಕರ್ಕ್ಯುಲದಂತೆ ಬೇಕಾಗಿರುವ ಪುಸ್ತಕಗಳ ಅನುಕೂಲ ಕ್ಕೋಸ್ಕರ-ಈಗಿನ ಹೊಸ ಪಾಠಕ್ರಮ ಪಟ್ಟಿಯಂತೆ ಆಯಾ ತರಗತಿಗಳಿಗೆ ಅನುಕೂಲಿಸುವಹಾಗೆ ಹೊಸಪುಸ್ತಕಗಳನ್ನು ರಚಿಸಿ ಅಚ್ಚುಮಾಡಿಸುತ್ತೇವೆ. ಈ ಪುಸ್ತಕಗಳು ಶೀಘ್ರವಾಗಿ ಸಿದ್ಧವಾಗುವುವು.

(i) 1926 ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ ನೋಟ್ಸು ಸಿದ್ಧವಾಗಿದೆ. ಕ್ರಯ ೦-೧೦-೦ ಆಣೆ.

(ii) 1926 ನೇ ವರ್ಷದ ಯಸ್. ಯಸ್. ಎಲ್. ಸಿ. ಪರೀಕ್ಷೆಯ ಕನ್ನಡ ಟೆಕ್ಸ್ಟಗಳ ನೋಟ್ಸು ಕೂಡಲೇ ಬಿಕರಿಗೆ ಸಿದ್ಧವಾಗುವುದು.

(iii) 1926 ನೇ ವರ್ಷದ ಎಂಟ್ರೆನ್ಸ್ ಪರೀಕ್ಷೆಯ ಕನ್ನಡ ಟೆಕ್ಸ್ಟಗಳ ನೋಟ್ಸು. (ಪದ್ಯಭಾಗದೊಡನೆ) ಕೂಡಲೇ ಬಿಕರಿಗೆ ಸಿದ್ಧವಾಗುವುದು.

೨ ನೆಯ ಪುಸ್ತಕದ ನೋಟ್ಸು (ಧಾರಾಳವಾದ ಕಮಿಷನ್)	....	೦-೩-೦
೩ ನೆಯ ಪುಸ್ತಕದ ನೋಟ್ಸು ,,	....	೦-೪-೦
ಪದ್ಯಸಂಗ್ರಹದ ನೋಟ್ಸು ,,	....	೦-೩-೦
ಪದ್ಯಸಾರದ ನೋಟ್ಸು (ಮಿಡಲ್‌ಸ್ಕೂಲಿನ ೩ ನೆಯ ತರಗತಿಗೆ)	....	೦-೩-೦
ಮಕ್ಕಳ ಭೂವಿವರಣೆ ೧ ನೆಯ ಭಾಗ (ಈಗಿನ ಹೊಸಪಾಠದ ಪಟ್ಟಿಯಂತೆ)		೦-೨-೦
,, ೨ ನೆಯ ಭಾಗ (ಮೈಸೂರುದೇಶದ ಭೂವಿವರಣೆ)		೦-೧-೬
ಭೂವಿವರಣೆಯ ಇಸವಿ ನೋಟ್ಸು (ಧಾರಾಳವಾದ ಕಮಿಷನ್)	....	೦-೮-೦
ನವ ಬಾಲವ್ಯಾಕರಣ	....	೦-೧-೦
ಏಷ್ಯಾಭೂವಿವರಣೆ	....	೦-೬-೦
ಪ್ರಾಕೃತಿಕ ಭೂಗೋಳಶಾಸ್ತ್ರ ೧ ನೆಯ ಭಾಗ (ಪ್ರಶ್ನೋತ್ತರ)	....	೦-೬-೦
,, ೨ ನೆಯ ಭಾಗ ,,	....	೦-೩-೬
ಇಂಡಿಯ, ಬರ್ಮ ಸಿಲೋನ್ ಗಳ ಭೂವಿವರಣೆಯ ನೋಟ್ಸು	....	೦-೬-೦

ನೀತಿಬೋಧೆ—ಕಥೆಗಳರೂಪವಾದದ್ದು. ಆಯಾ ತರಗತಿಗೆ ಬೇರೆಬೇರೆ
ಪ್ರಕೃತಿಪಾಠ—ಸಚಿತ್ರ. ಆಯಾ ತರಗತಿಗೆ ಬೇರೆಬೇರೆ ಶಾಸ್ತ್ರಪಾಠದೊಡನೆ } ಆಗುವುವು
ಭೂವಿವರಣೆ ೨ ನೆಯ ಪುಸ್ತಕದ ನೋಟ್ಸು

... ಸ್ (೨) ಸಿಟಿ

ಬೆಂಗಳೂರು ಸಿಟಿಯಲ್ಲಿ—(... ರಾವ್ ಅಂಡ್ ಕೊ (೪) ಆರ್. ಪಾಲ್ ರಾಜು
...ಪೋ (೩) ಎಂ. ಎಸ್. ... ಭಂಡಾರ (೬) ವಿದ್ಯಾಸಾಗರ ಬುಕ್ ಡಿಪೋ (೭)
... ಸನ್ಸ್ (೫) ಸರಸ್ವತೀ ರತ್ನಾಕರ ಬುಕ್ ಡಿಪೋ.
ಆರ್ಥ. ಯಲ್. ರಾವ್ ಬದರ್ಸ್ (೮) ಸರಸ್ವತೀ ...

II. ಮೈಸೂರಲ್ಲಿ—(೯) ಹೆಚ್. ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ (೧೦) ಸ್ಟೂಡೆಂಟ್ಸ್ ಹಾಲ್ (೧೧) ಯಂ. ಜಿ. ಯಸ್. ಅಂಡ್ ಸನ್ಸ್ (೧೨) ಪಾಪ್ಯುಲರ್ ಬುಕ್ ಸ್ಟಾಲ್ (13) ವಿ. ಗುರುರಾವ್, ಲ್ಯಾನ್ಸ್‌ಡೌನ್ ಬಜಾರ್.

III. ತುಮಕೂರಲ್ಲಿ—(೧೪) ಶ್ಯಾನುಭೋಗ್ ಅಂಡ್ ಸನ್ಸ್. (೧೫) ಟಿ. ಗುಬ್ಬಣ್ಣ.

IV. ಚಿತ್ರದುರ್ಗದಲ್ಲಿ—(೧೬) ಸೆಟ್ಟಿ ಸುಬ್ಬರಾಯಪ್ಪ ಅಂಡ್ ಸನ್ಸ್ (೧೭) ಬಿ. ಗರುಡಾಚಾರ್ ಅಂಡ್ ಸನ್ಸ್ (೧೮) ಎಸ್. ಎಲ್. ರಾಮಸ್ವಾಮಿಶೆಟ್ಟಿ, ವೆಂಕಟರಮಣಶೆಟ್ಟಿ.

V. ಶಿವಮೊಗ್ಗದಲ್ಲಿ—(೧೯) ಎಂ. ನಾಗಪ್ಪಶೆಟ್ಟರು (೨೦) ಡಿ. ಎಲ್. ಶೇಷಪ್ಪಶೆಟ್ಟಿ (೨೧) ದಿ ಟೌನ್ ಬುಕ್ ಡಿಪೋ.

V . (೨೨) ಕೆ. ಎಲ್. ವಿಶ್ವನಾಥನ್, ಕಡೂರು (೨೩) ಕೆ. ಎನ್. ನರಸ... ಶೆಟ್ಟಿ, ಬೀರೂರು (೨೪) ಸತ್ಯನಾರಾಯಣ ಹಾಲ್, ಚೆನ್ನಪಟ್ಟಣ (೨... ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್, ದಾವಣಗೆರೆ.

ಈ ಕೆಳಗಣ ವಿಷಯಗಳನ್ನು ದಯವಿಟ್ಟು ಚೆನ್ನಾಗಿ ಗಮನಿಸಿರಿ —

ವರಾ:—೧. "ಕನ್ನಡ ರೀಡರ್ ನೋಟ್ಸು"ಗಳನ್ನು ಇತರರೂ ಅಚ್ಚು ಮಾ... ಮಾಡುತ್ತಿದ್ದಾರೆ. ಆದ್ದರಿಂದ ನಮ್ಮ ನೋಟ್ಸನ್ನೇ ಅಪೇಕ್ಷಿಸುವವರು ದಯವಿಟ್... ಪುಸ್ತಕದ ಮೇಲೆ ನಮ್ಮ ಹೆಸರನ್ನೂ ಪುಸ್ತಕದೊಳಗಿರುವ ವಿಷಯಗಳನ್ನೂ ಚೆನ್... ನೋಡಿ ತೆಗೆದುಕೊಳ್ಳಿರಿ.

೨. "ಮಕ್ಕಳ ಹೊಸ ಭೂವಿವರಣೆ" ಎಂಬ ಹೆಸರಿನಿಂದ ಬೇರೊಂದು ಪು... ಕವು ಇತರರಿಂದ ರಚಿಸಲ್ಪಟ್ಟು ಪ್ರಕಟವಾಗಿರುವುದು. ಆದ್ದರಿಂದ ನಮ್ಮ "ಮಕ್ಕ... ಭೂವಿವರಣೆ" ಯನ್ನು ಅಪೇಕ್ಷಿಸುವವರು ದಯವಿಟ್ಟು ಪುಸ್ತಕದ ಮೇಲೆ ನಮ್ಮ ಹೆಸರನ್ನೂ, ಪುಸ್ತಕದೊಳಗಿರುವ ವಿಷಯಗಳನ್ನೂ ಚೆನ್ನಾಗಿ ನೋಡಿ ತೆಗೆದುಕೊಳ್ಳಿರಿ. ಮೋಸಹೋಗಬೇಡಿ.

ಯನ್. ಆರ್. ವೆಂಕಟೇಸುಬ್ಬಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು.

(ಅಥವಾ) 40, ಮನವಾರ್ತೆಪೇಟೆ, ಬೆಂಗಳೂರು ಸಿಟಿ